ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ—೯೫

ಮಹಾಕವಿ ಬಾಣ

ಟಿ. ಎಸ್. ಕೃಷ್ಣಮೂರ್ತಿ, ಎಂ.ಎ.

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೯

ಮೈಸೂರು ವಿಶ್ವವಿದ್ಯಾನಿಲಯ
ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರ ಪ್ರವೇಶ
—ಡಾ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್
೩. ತೆರಿಗೆ—ಬಿ. ಆರ್. ಸುಬ್ಬರಾವ್
೪. ನವರತ್ನಗಳು—ಎಚ್. ಸುಬ್ಬಾಜೋಯಿಸ್
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್
೧೦. ಪಂಪ—ತೀ. ನಂ. ಶ್ರೀಕಂಠಯ್ಯ
೧೧. ಪ್ರಾಣಿಜೀವನ—ಎ. ನಾರಾಯಣರಾವ್
೧೨. ಕನಸುಗಳು—ಡಾ|| ಎನ್. ಎಸ್. ನಾರಾಯಣಶಾಸ್ತ್ರೀ
೧೩. ಮದುವೆ—ನಾ. ಕಸ್ತೂರಿ
೧೪. *ನಮ್ಮ ಆರ್ಥಿಕದೃಷ್ಟಿ—ಎಸ್. ಗೋಪಾಲಸ್ವಾಮಿ
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್
೧೬. ಬೆಳಕು—ಟಿ. ಎಸ್. ಸುಬ್ಬರಾಯ
೧೭. ಕರ್ನಾಟಕ ಕಾದಂಬರಿ—ವಿ. ಸೀತಾರಾಮಯ್ಯ
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ
೨೧. ಸಾರ್ವಜನಿಕ ನೆಚ್ಚ—ಡಾ|| ಎಂ. ಎಚ್. ಗೋಪಾಲ್
೨೨. ಶಿಶುವಿಹಾರಗಳು—ಸಿ. ರಂಗಾಚಾರ್
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ
೨೪. ವಿಡಂಬನ—ಎಸ್. ವಿ. ರಂಗಣ್ಣ
೨೫. ಎಲ್ಲೋರ ಮತ್ತು ಅಜಂತ—ಡಾ|| ಎಂ. ಎಚ್. ಕೃಷ್ಣ

ಮೈಸೂರು ವಿಶ್ವವಿದ್ಯಾನಿಲಯ
ಪ್ರಚಾರ ಪುಸ್ತಕಮಾಲೆ—೯೫

ಮಹಾಕವಿ ಬಾಣ

ಟಿ. ಎಸ್. ಕೃಷ್ಣಮೂರ್ತಿ, ಎಂ.ಎ.

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೯

ಮೊದಲನೆಯ ಮುದ್ರಣ ೧೯೫೯
೩೦೦೦ ಪ್ರತಿಗಳು

ಬೆಲೆ
ಸಾದಾ ಪ್ರತಿ ೨೫ ನಯೆ ಪೈಸೆ
ಉತ್ತಮ ಪ್ರತಿ ೩೭ ನಯೆ ಪೈಸೆ

ಮುದ್ರಕರು :
ಮೈಸೂರು ಯೂನಿವರ್ಸಿಟಿ ಮುದ್ರಣಾಲಯ
ವಿ. ವಿ. ಮೊಹಲ್ಲ, ಮೈಸೂರು

ಮುನ್ನುಡಿ

ಈ ಪ್ರಚಾರ ಪುಸ್ತಕಮಾಲೆ ಪ್ರಾರಂಭವಾಗಿ ಇಂದಿಗೆ ಸುಮಾರು ಇಪ್ಪತ್ತೈದು ವರ್ಷಗಳಾಗಿವೆ. ಈ ಅವಧಿಯಲ್ಲಿ ೯೪ಳ ಪುಸ್ತಿಕೆಗಳು ಈ ಮಾಲೆಯಲ್ಲಿ ಪ್ರಕಟವಾಗಿವೆ. ಕಾಲಾವಧಿಯನ್ನು ಗಮನಿಸಿದರೆ ಈಗ ಹೊರಬಿದ್ದಿರುವ ಕಿರುಹೊತ್ತಗೆಗಳ ಸಂಖ್ಯೆ ಈಗಿರುವುದಕ್ಕಿಂತಲೂ ದ್ವಿಗುಣವೊ ತ್ರಿಗುಣವೊ ಆಗಿರಬೇಕಾಗಿತ್ತೆಂದು ಹೇಳಬಹುದು. ಆದರೂ ಅವುಗಳ ಗುಣವನ್ನೂ ಅವು ಮಾರಾಟವಾಗುತ್ತಿರುವ ವೇಗವನ್ನೂ ಗಮನಿಸಿದರೆ ಈ ಮಾಲೆಯ ಉಪಯುಕ್ತತೆ ಮತ್ತು ಜನಪ್ರಿಯತೆ ವ್ಯಕ್ತವಾಗುತ್ತದೆ. ಸಾಮಾನ್ಯವಾಗಿ ಪ್ರತಿಯೊಂದು ಪುಸ್ತಿಕೆಯೂ ಮೂರು ನಾಲ್ಕು ಸಾರಿ ಮುದ್ರಿತವಾಗಿದೆ. ದಿನೇ ದಿನೇ ಈ ಮಾಲೆಯ ಬಗೆಗೆ ಜನರ ವಿಶ್ವಾಸಾದರಗಳು ಅಧಿಕವಾಗುತ್ತಿವೆ. "ಈ ತಿಂಗಳು ಏನಾದರೂ ಹೊಸ ಪುಸ್ತಿಕೆ ಬಂದಿದೆಯೆ? ಮುಗಿದು ಹೋಗಿರುವ ಪುಸ್ತಿಕೆಗಳು ಅಚ್ಚಾಗಿವೆಯೆ?" ಎಂದು ಮೇಲಿಂದ ಮೇಲೆ ಜನ ಕೇಳುತ್ತಿರುತ್ತಾರೆ. ಇದು ನಿಜವಾಗಿಯೂ ಸಂತೋಷದ ಸಂಗತಿ; ನಾಡಿನ ಪ್ರಗತಿಯ ಒಂದು ಚಿಹ್ನೆ.

ನಾಡಿನಲ್ಲಿ ದಿನೇ ದಿನೇ ವಿದ್ಯಾವಂತರ ಮತ್ತು ಅಕ್ಷರಸ್ಥರ ಸಂಖ್ಯೆ ಬೆಳೆಯುತ್ತಿದೆ. ಕೇವಲ ಸಾಕ್ಷರತೆಯಿಂದ ಮಹತ್ತಾದ ಪ್ರಯೋಜನವೇನೂ ಲಭಿಸದು. ಸಾಕ್ಷರತೆ ಬೇರೊಂದು ಸಿದ್ಧಿಗಾಗಿ ಸಾಧನವೇ ಹೊರತು ಅದೇ ಪರಮ ಗುರಿಯಲ್ಲ; ಜ್ಞಾನ ಸಂಪಾದನೆಯೇ ಅದರ ಪರಮ ಗುರಿ. ಈ ಗುರಿಯ ಸಾಧನೆಗಾಗಿ ಸಕಲ ಅನುಕೂಲತೆಗಳನ್ನು ಕಲ್ಪಿಸುವುದು ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಆದ್ಯಕರ್ತವ್ಯ. ಈ ಮೂಲಕ ವಿಶ್ವ

ವಿದ್ಯಾನಿಲಯದ ಜ್ಞಾನವಾಹಿನಿ ನಾಡಿನ ಮೂಲೆಮೂಲೆಗೆಲ್ಲ ಹರಿದು, ಸಮಷ್ಟಿಪ್ರಜ್ಞೆ ವಿಕಾಸಗೊಳ್ಳಲನುಕೂಲವಾಗುತ್ತದೆ.

ಈ ಮಾಲೆಯಿಂದ ಸಾಮಾನ್ಯ ಜನರಲ್ಲಿ ಜ್ಞಾನಪ್ರಸಾರ ಕಾರ್ಯ ತಕ್ಕಮಟ್ಟಿಗೆ ಯಶಸ್ವಿಯಾಗಿ ನಡೆದಿರುವಂತೆಯೆ ಕನ್ನಡದಲ್ಲಿ ವಿಜ್ಞಾನ ಸಂಬಂಧವಾದ ವಿಷಯಗಳನ್ನು ಸುಲಭವಾಗಿ ಸರಳವಾಗಿ ಹೇಳಬಹುದು, ಮತ್ತು ಕನ್ನಡ ವೈಜ್ಞಾನಿಕ ಭಾಷೆಯಾಗಬಲ್ಲುದು ಎಂಬ ಅಂಶ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಪುಸ್ತಿಕೆಗಳ ಪಟ್ಟಿಯನ್ನೊಮ್ಮೆ ಓದಿದರೆ ಸಂದೇಹವಾದಿಗಳ ಶಂಕೆ ಸಂಪೂರ್ಣವಾಗಿ ನಿವಾರಣೆಗೊಂಡು ಧೈರ್ಯ ಮೂಡದಿರದು. ಇವುಗಳಲ್ಲಿ ೬೫ ಪುಸ್ತಿಕೆಗಳು ಭೌತವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿ ವಿಜ್ಞಾನ, ಸಮಾಜ ವಿಜ್ಞಾನ, ವೈದ್ಯ ವಿಜ್ಞಾನ, ಗಣಿತ ವಿಜ್ಞಾನ, ಇತಿಹಾಸ ಮೊದಲಾದುವುಗಳಿಗೆ ಸಂಬಂಧಿಸಿದವು. ಉಳಿದ ೨೮ ಪುಸ್ತಿಕೆಗಳು ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದುವು. ಇವುಗಳ ಗ್ರಂಥಕರ್ತರು ಪ್ರಮುಖವಾಗಿ ವಿಶ್ವವಿದ್ಯಾನಿಲಯದಲ್ಲಿ ಹತ್ತಿಪ್ಪತ್ತು ವರ್ಷಗಳ ಕಾಲ ಪಾಠ ಹೇಳಿ ನುರಿತಿರುವ ಘನ ವಿದ್ವಾಂಸರು. ಬಹಳ ಹಿಂದೆಯೇ ವೈಜ್ಞಾನಿಕ ಗ್ರಂಥಗಳ ರಚನೆಗೆ ಕೈಹಾಕಿ ಕನ್ನಡ ವೈಜ್ಞಾನಿಕ ಭಾಷೆಯಾಗುವ ಸಾಮರ್ಥ್ಯವನ್ನು ಪಡೆದಿದೆ, ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣಮಾಧ್ಯಮವಾಗುವ ಶಕ್ತಿಯನ್ನು ಪಡೆದಿದೆ ಎಂದು ತೋರಿಸಿಕೊಟ್ಟಿದ್ದಾರೆ. ಅವರೆಲ್ಲ ಅಭಿನಂದನಾರ್ಹರು.

ಈ ಮಾಲೆಯ ಕಾರ್ಯ ತ್ವರಿತಗೊಂಡು, ವಿಸ್ತಾರಗೊಂಡು ಪುಸ್ತಕಗಳ ಸಂಖ್ಯೆ ದಿನೇ ದಿನೇ ಬೆಳೆಯಬೇಕೆಂದೂ, ಇದರಿಂದ ಸಾಮಾನ್ಯ ಜನತೆ ಸಂಪೂರ್ಣ ಪ್ರಯೋಜನ ಪಡೆದು ಸಮಷ್ಟಿ

ಪ್ರಜ್ಞೆ ಸರ್ವತೋಮುಖವಾಗಿ ವಿಕಾಸಗೊಳ್ಳಬೇಕೆಂಬುದೂ ವಿಶ್ವವಿದ್ಯಾನಿಲಯದ ಆಸೆ. ಕನ್ನಡನಾಡು ಒಂದುಗೂಡಿರುವ ಈ ಶಕಮುಹೂರ್ತದಲ್ಲಿ ಕನ್ನಡನುಡಿ ಆಡಳಿತದ ಭಾಷೆಯಾಗಿ, ವ್ಯವಹಾರದ ಭಾಷೆಯಾಗಿ, ಶಿಕ್ಷಣದ ಭಾಷೆಯಾಗಿ, ಜನತೆಯ ಸಂಸ್ಕೃತಿವಿಕಾಸಸಾಧನದ ಭಾಷೆಯಾಗಿ ಮುಂದುವರಿಯುವುದರಲ್ಲಿ ಸಂದೇಹವಿಲ್ಲ. ವಿಶ್ವವಿದ್ಯಾನಿಲಯದ ಈ ಸೇವೆಯನ್ನು ಕರ್ನಾಟಕ ಸಂಪೂರ್ಣವಾಗಿ ತನ್ನ ಮೇಲ್ಮೆಗೂ ಏಳ್ಗೆಗೂ ಬಳಸಿಕೊಳ್ಳುತ್ತದೆಂದು ನಾವು ಹಾರೈಸುತ್ತೇವೆ.

ಮೈಸೂರು ಕೆ. ವಿ. ಪುಟ್ಟಪ್ಪ

೨೧—೧೨—೧೯೫೯ ವೈಸ್-ಛಾನ್ಸಲರ್.

ಈ ಪುಸ್ತಕವನ್ನು ಕುರಿತು

ಸಂಸ್ಕೃತ ಗದ್ಯಕಾವ್ಯಲೇಖಕರಲ್ಲಿ ಅಗ್ರತಾಂಬೂಲಕ್ಕೆ ಅರ್ಹನೆನಿಸಿರುವ ಮಹಾಕವಿ ಬಾಣಭಟ್ಟನನ್ನು ನಮ್ಮ ಕನ್ನಡ ಜನತೆಗೆ ಈ ರೀತಿ ಸುಲಭವಾಗಿ ಪರಿಚಯಮಾಡಿಕೊಡಲು ಅವಕಾಶಕೊಟ್ಟ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ ಹಾಗೂ ಪ್ರಚಾರೋಪನ್ಯಾಸಮಾಲೆಯ ಅಧಿಕಾರಿಗಳಿಗೆ ನನ್ನ ಅನಂತ ಕೃತಜ್ಞತೆಗಳು. ಪ್ರಚಾರ ಮಾಲೆಯ ಪುಸ್ತಕಗಳಿಗೆ ಒಂದು ಪ್ರಮಾಣ ಪರಿಮಿತಿಯಿದೆ. ಅಷ್ಟರಲ್ಲಿಯೇ ಕವಿಕಾವ್ಯ ವಿಚಾರಗಳನ್ನೂ, ಪಾತ್ರಗಳ ಹಾಗೂ ಶೈಲಿಯ ವಿಮರ್ಶೆಯನ್ನೂ ಸ್ಥೂಲವಾಗಿ ಕೊಟ್ಟಿದೆ. ವರ್ಣನೆಗಳು ಬಾಣನ ಕೃತಿಗಳಲ್ಲಿನ ವೈಶಿಷ್ಟ್ಯ. ಅವನ ದೃಷ್ಟಿಯಲ್ಲಿ ವರ್ಣನೆಯೇ ಕಾವ್ಯದ ಶೃಂಗಾರ; ಈ ವರ್ಣನಾಚಾತುರ್ಯದಿಂದ 'ಬಾಣೋಚ್ಛಿಷ್ಟಂ ಜಗತ್ಸರ್ವಮ್' ಎಂಬ ಮಾತು ಬಾಣನಿಗೆ ಸಲ್ಲುತ್ತಿದೆ. ಈ ವರ್ಣನೆಗಳು ತಮ್ಮ ಪರಿಪೂರ್ಣತೆಯಿಂದಲೂ, ವೈವಿಧ್ಯ ವೈಶಾಲ್ಯತೆಗಳಿಂದಲೂ ಶತಮಾನಗಳ ನಂತರವೂ ಸಜೀವವಾಗಿಯೇ ಇವೆ. ಬಾಣನ ಶೈಲಿಯೂ ಅಷ್ಟೆ! ಉದ್ದಕ್ಕೂ ಶಬ್ದದ ಪ್ರೌಢಿಮೆ, ಅಲಂಕಾರದ ಬೆಡಗು ಮತ್ತು ಕವಿಸಮಯದ ಸೊಂಪು. ಆದರೂ ಔಚಿತ್ಯವಿಲ್ಲವೇ ಇಲ್ಲವೆಂದು ಹೇಳುವಂತಿಲ್ಲ. ಇವೆಲ್ಲಕ್ಕೂ ತಕ್ಕ ಉದಾಹರಣೆಗಳನ್ನು ಉದಾರವಾಗಿ ಕೊಡಬಯಸುವುದು ಈ ಪುಸ್ತಕದ ಪ್ರಮಾಣಕ್ಕೆ ಹಿತವಲ್ಲ. ಆದರೆ ಓದುಗರಿಗೆ ರುಚಿತೋರಿಸಿಕೊಡಬಹುದೆಂಬ ಆಸೆಯಿಂದ ಕೆಲವು ಉದಾಹರಣೆಗಳನ್ನು ಪರಿಶಿಷ್ಟದಲ್ಲಿ ಸೇರಿಸಿದೆ. ಒಟ್ಟಿನಲ್ಲಿ ಈ ಪುಸ್ತಕವನ್ನು ಓದಿ

ದವರಲ್ಲಿ ಬಾಣಭಟ್ಟನ ವಿಚಾರದಲ್ಲಿ ಕುತೂಹಲ ಉಂಟಾಗಿ, ಅವನ ಕೃತಿಗಳ ಸೊಬಗಿನ ಕಡೆಗೆ ಅವರ ಆಸಕ್ತಿ ಅರಳಿದರೆ ನಮ್ಮ ಯತ್ನ ಸಿದ್ಧಿಸಿದಂತೆಯೆ.

ಬಾಣಭಟ್ಟನನ್ನು ಕುರಿತ ಲೇಖನಗಳೂ, ವಿಮರ್ಶೆಗಳೂ ವಿದ್ವತ್ಪತ್ರಿಕೆಗಳೂ, ಸಾಹಿತ್ಯವಿಮರ್ಶನಾ ಗ್ರಂಥಗಳೂ ಅಸಂಖ್ಯಾತವಾಗಿವೆ. ಈ ಪುಸ್ತಕದ ರಚನೆಯಲ್ಲಿ ಅವುಗಳಿಂದ ಪಡೆದ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವುದು ಉಚಿತವಾಗಿದೆ. ಪುಸ್ತಕದ ರಚನೆಯಲ್ಲಿ ಅಮೂಲ್ಯ ಸಲಹೆಗಳನ್ನಿತ್ತು ಪ್ರೋತ್ಸಾಹಿಸಿರುವ ಸಂಸ್ಕೃತ ಪ್ರಾಧ್ಯಾಪಕರಾದ, 'ಸಂಸ್ಕೃತ ವಿಶಾರದ' ಶ್ರೀ ಎಸ್. ರಾಮಚಂದ್ರರಾವ್, ಎಂ.ಎ. ಅವರಿಗೆ ನನ್ನ ಭಕ್ತಿ ಪೂರ್ವಕ ವಂದನೆಗಳು. ನನ್ನ ಮಿತ್ರರಾದ ಶ್ರೀ ರಾಮಚಂದ್ರ ಮತ್ತು ಶ್ರೀ ವಾದಿರಾಜ ಇವರ ಉಪಕಾರವನ್ನೂ ಕೃತಜ್ಞತೆಯಿಂದನೆನೆಯುತ್ತೇನೆ.

ಮೈಸೂರು, **ಟಿ. ಎಸ್. ಕೃಷ್ಣಮೂರ್ತಿ**

ತಾ|| ೨೦-೧೨-೧೯೫೯

ಇದಂ ಕವಿಭ್ಯಃ ಪೂರ್ವೇಭ್ಯೋ ನಮೋವಾಕಂ ಪ್ರಶಾಸ್ಮಹೆ
ವಂದೇಮಹಿ ಚ ತಾಂ ವಾಣೀಮಮೃತಾಮಾತ್ಮನಃ ಕಲಾ

*

ವ್ಯಾಸಾದಿಭಿಃ ಕವಿವರೈರವಸಾದಿತೋಽಪಿ
ಶೂನ್ಯತ್ವಮಾಪ ಕಲಯಾಪಿ ನ ವಾಕ್ಪ್ರಪಂಚಃ |
ಆನಂದನಿರ್ಭರಚಕೋರಸಹಸ್ರಪೀತಂ
ಚಾಂದ್ರಂ ಮಹಃ ಕ್ಷಯಮುಪೈತಿ ನ ಮಾತ್ರಯಾಪಿ ||

*

ಅರ್ಥೇಶ್ವರಂ ಹಂತ ಭಜೇಽಭಿನಂದಮ್
ವಾಗೀಶ್ವರಂ ವಾಕ್ಪತಿರಾಜಮೀಡೇ |
ರಸೇಶ್ವರಂ ಸ್ತೌಮಿ ಚ ಕಾಲಿದಾಸಮ್
ಬಾಣಂ ತು ಸರ್ವೇಶ್ವರಮಾನತೋಽಸ್ಮಿ ||

ವಿಷಯಾನುಕ್ರಮಣಿಕೆ

ಮಹಾಕವಿ ಬಾಣ

೧ ಪೀಠಿಕೆ.

ಸಂಸ್ಕೃತ ಸಾಹಿತ್ಯದಲ್ಲಿ ಪದ್ಯಗ್ರಂಥಗಳಿಗಿಂತ ಗದ್ಯಗ್ರಂಥಗಳು ಬಹು ವಿರಳ. ಬಹಳ ಹಿಂದಿನ ಕಾಲದಲ್ಲಿ ನಮ್ಮ ಭಾರತದೇಶದಲ್ಲಿ ಬರವಣಿಗೆಯ ಪದ್ಧತಿ ಹೆಚ್ಚಿನ ಬಳಕೆಯಲ್ಲಿರಲಿಲ್ಲ. ಆದುದರಿಂದ ಅಧ್ಯಯನ—ಅಧ್ಯಾಪನಾದಿಗಳು ಬಾಯಿಪಾಠಕ್ರಮವನ್ನೇ ಅವಲಂಬಿಸುವ ಸಂಪ್ರದಾಯವಾಯಿತು. ಅದಕ್ಕೆ ಒಂದು ಹಿರಿಮೆಯನ್ನು ಕೊಟ್ಟು 'ಮುಖಸ್ಥಾ ವಿದ್ಯಾ', ವಿದ್ಯೆ ಪುಸ್ತಕದಲ್ಲಡಗಿದ್ದರೆ ಸಾಲದು, ಮುಖಸ್ಥವಾಗಿರಬೇಕೆಂದು ಹೇಳಿದರು. ಅದಕ್ಕೆ ಸುಲಭವಾಗಿರುವಂತೆ ಪದ್ಯರಚನೆಗೆ ಪ್ರಾಮುಖ್ಯತೆ ದೊರಕಿತು. ಇದರ ಫಲವಾಗಿ ಬಹುಶಃ ಪ್ರಪಂಚದ ಬೇರೆ ಯಾವ ಭಾಷೆಯ ಸಾಹಿತ್ಯದಲ್ಲಿಯೂ ದೊರಕಲಾರದಷ್ಟು ಪದ್ಯಗ್ರಂಥಗಳು ಸಂಸ್ಕೃತ ಭಾಷೆಯಲ್ಲಿ ರಚಿತವಾದವು. ಉಳಿದ ವಿಷಯಕ ಗ್ರಂಥಗಳ ಮಾತು ಹಾಗಿರಲಿ: ಧರ್ಮಶಾಸ್ತ್ರ, ವೈದ್ಯಶಾಸ್ತ್ರ, ವ್ಯಾಕರಣಶಾಸ್ತ್ರ, ಗಣಿತಶಾಸ್ತ್ರ ಶಿಲ್ಪಶಾಸ್ತ್ರ ಖಗೋಳಶಾಸ್ತ್ರ ರಾಜನೀತಿಶಾಸ್ತ್ರಗಳೇ ಮುಂತಾದ ಶಾಸ್ತ್ರೀಯ ಗ್ರಂಥಗಳೂ, ಅರ್ಥಕೋಶ ನಿಘಂಟುಗಳೂ, ಸೂತ್ರರೂಪದಲ್ಲಿ, ಇಲ್ಲವೇ ಶ್ಲೋಕ—ಪದ್ಯರೂಪದಲ್ಲಿ ರಚಿತವಾದವು. ಸುಲಭವಾಗಿ ವಿಷಯವನ್ನು ಜ್ಞಾಪಕದಲ್ಲಿಡಲು ಪದ್ಯವೇ ಸಮೀಚೀನ ಸಾಧನ. ಗದ್ಯವನ್ನು ಜ್ಞಾಪಕದಲ್ಲಿಡಲು ಕಷ್ಟಸಾಧ್ಯ. ಇದರ ಪರಿಣಾಮವಾಗಿ ಲೌಕಿಕ ಸಾಹಿತ್ಯದಲ್ಲೂ ಗದ್ಯ ರಚನೆ ವಿರಳವಾಯಿತು

ಹೀಗೆ ಬರವಣಿಗೆಯೂ, ಬೆಳವಣಿಗೆಯೂ ಕಡಿಮೆಯಾದಂತೆಲ್ಲಾ ಗದ್ಯದ ರಚನೆಯೂ ಕಷ್ಟಸಾಧ್ಯವೆಂಬ ಮನೋಭಾವನೆ ಉಂಟಾಯಿತು. ಕೊನೆಗೆ, ಗದ್ಯಕಾವ್ಯವನ್ನು ರಚಿಸಿದ ಕವಿಗೆ ಒಂದು ವಿಶೇಷ ಗೌರವವೂ, ಸ್ಥಾನವೂ ಲಭಿಸಿತು. 'ಗದ್ಯವು ಕವಿಯ ಒರೆಗಲ್ಲು', 'ಗದ್ಯಂ ಕವೀನಾಂ ನಿಕಷಂ ವದಂತಿ' ಎಂಬ ಮಾತು ಬಳಕೆಗೆ ಬಂದಿತು. ಅಂತೂ ಗದ್ಯಕಾವ್ಯ ರಚನೆ ಬಹುಜನ ಕವಿಗಳನ್ನು ಆಕರ್ಷಿಸಲಿಲ್ಲ. ರಚಿತವಾಗಿರುವ ಕೆಲವೇ ಗದ್ಯಕಾವ್ಯಗಳಲ್ಲೂ ಪದ್ಯಪ್ರಭಾವ ಗಣನೀಯವಾಗಿಯೇ ಕಂಡುಬರುತ್ತದೆ. ಇಂತಹವಿರಳ ಕವಿಗಳ ಶ್ರೇಣಿಯಲ್ಲಿ ಅಗ್ರತಾಂಬೂಲಕ್ಕೆ ಅರ್ಹನಾಗಿರುವವನು **ಮಹಾಕವಿ ಬಾಣ**. ಸಂಸ್ಕೃತ ಗದ್ಯಕಾವ್ಯೋಪಾಸಕರ ನೆನಪಿನಲ್ಲಿಡಲು ಅರ್ಹವಾದ ಇತರ ಹೆಸರುಗಳು ದಂಡಿ ಮತ್ತು ಸುಬಂಧು.[1] ಉತ್ತಮವಾದ ಎರಡು ಗ್ರಂಥಗಳನ್ನು ರಚಿಸಿ ಶಾಶ್ವತ ಕೀರ್ತಿಗೆ ಪಾತ್ರನಾಗಿರುವವನು ಬಾಣಭಟ್ಟನೊಬ್ಬನೇ. 'ಕಾದಂಬರಿ' ಮತ್ತು 'ಹರ್ಷಚರಿತ' ಇವೇ ಬಾಣನ ಅತ್ಯಮೋಘಕೃತಿ ರತ್ನಗಳು. ಮೊದಲನೆಯದರ ವಸ್ತು, ಕಲ್ಪಿತ. ಆಂಗ್ಲ ಭಾಷೆಯ ಸಾಹಿತ್ಯದಲ್ಲಿ ಬಳಕೆಯಲ್ಲಿರುವ 'ರೊಮಾನ್ಸ್' ಜಾತಿಗೆ ಸೇರಿದುದು. ಎರಡನೆಯದರ ವಸ್ತು, ಐತಿಹಾಸಿಕ. ಸಂಸ್ಕೃತ ಆಲಂಕಾರಿಕರ ಮತದಂತೆ, 'ಕಾದಂಬರೀ' ಒಂದು ಕಥೆ, 'ಹರ್ಷಚರಿತ' ಒಂದು ಆಖ್ಯಾಯಿಕೆ.

---

1 ದಂಡಿಯು 'ದಶಕುಮಾರ ಚರಿತ' ಎಂಬ ಗದ್ಯಗ್ರಂಥವನ್ನೂ, ಸುಬಂಧುವು 'ವಾಸವದತ್ತಾ' ಎಂಬ ಗದ್ಯ ಗ್ರಂಥವನ್ನೂ ಬರೆದಿದ್ದಾರೆ.

೨ ಬಾಣಭಟ್ಟನ ಕಾಲ ದೇಶ ಜೀವಿತಾದಿಗಳು

(ಅ) ಜನ್ಮ

ಕಾವ್ಯಪಾಠಕ್ಕೆ ಕವಿಪರಿಚಯವು ಒಂದು ಆವಶ್ಯಕವಾದ ಅಂಗವೆಂದು ಈಗಿನವರ ಮತ. ಹಿಂದಿನವರು ಹಾಗೆ ಭಾವಿಸಿರಲಿಲ್ಲವೆಂದು ತೋರುತ್ತದೆ. ಆದುದರಿಂದ ಅವರು ನಮ್ಮ ಕವಿಗಳ ಜೀವನಚರಿತ್ರೆಗಳನ್ನು ಬರೆದಿಡಲು ಪ್ರಯತ್ನಿಸಲಿಲ್ಲ. ಕವಿಗಳೂ ತಮ್ಮ ವಿಷಯವಾಗಿ ಹೇಳಿಕೊಳ್ಳಲು ಮುಂದೆ ಬರಲಿಲ್ಲ. ಕೆಲವರಂತೂ ತಮ್ಮ ಹೆಸರನ್ನೇ ಎಷ್ಟೋ ಸಂಕೋಚದಿಂದ ಹೇಳಿಕೊಂಡಂತಿದೆ. ಹೀಗಾಗಿ ವಿಪುಲ ಸಾಹಿತ್ಯವಿದ್ದರೂ ಸಂಸ್ಕೃತದಲ್ಲಿ ಕವಿಚರಿತ್ರೆಯ ಅಭಾವ, ಒಂದು ಹಿರಿದಾದ ಕೊರತೆಯಾಗಿದೆ. ಸಾಧಾರಣ ಕವಿಗಳ ಮಾತು ಹಾಗಿರಲಿ; ಶ್ರೇಷ್ಠ ಕವಿರತ್ನಗಳ ಕಾಲದೇಶ ಜೀವಿತಾದಿಗಳು ಇಂದೂ ಸಮಸ್ಯೆಯಾಗಿದೆ; ಒಗಟಾಗಿದೆ. ಆದರೆ ಬಾಣಕವಿಗೆ ನಾವು ಬಹು ಕೃತಜ್ಞರಾಗಿರಬೇಕು. ಇಂತಹ ಸನ್ನಿವೇಶದಲ್ಲಿ ಬೆಳೆದು ಬಂದಿದ್ದರೂ, ಈ ಸಂಪ್ರದಾಯವನ್ನು ಸ್ವಲ್ಪ ಭೇದಿಸಿ ಆತ್ಮಕಥೆಯನ್ನು ಹೇಳಲು ಪ್ರಯತ್ನಿಸಿದ್ದಾನೆ. ತನ್ನ ಕಾದಂಬರೀ ಗ್ರಂಥದ ಮುನ್ನುಡಿಯ ಪದ್ಯಗಳಲ್ಲಿ ಸ್ವಲ್ಪ ವಿಷಯವನ್ನೂ, ಹರ್ಷಚರಿತೆಯ ಪ್ರಾರಂಭ ಆಶ್ವಾಸಗಳಲ್ಲಿ ಹೆಚ್ಚಿನ ವಿವರವನ್ನೂ ಕೊಟ್ಟು ಉಪಕಾರ ಮಾಡಿದ್ದಾನೆ. ತನ್ನ ಆಶ್ರಯದಾತನಾದ ಶ್ರೀಹರ್ಷವರ್ಧನ ಚರಿತ್ರೆಯನ್ನು ಬರೆಯುವ ಮೊದಲು ಎರಡು ಆಶ್ವಾಸಗಳಿಗೂ ಮಿಗಿಲಾಗಿ ತನ್ನ ವಂಶದ ಮತ್ತು ತನ್ನ ಕಥೆಯನ್ನೇ ಬರೆದಿದ್ದಾನೆ; ಸ್ಥೂಲವಾಗಿ ಈ ಮುಂದೆ ಹೇಳಿರುವ ಅಂಶಗಳು ಆ ಭಾಗಗಳಲ್ಲಿ ತಿಳಿಸಲ್ಪಟ್ಟಿವೆ :—

ಪ್ರಖ್ಯಾತವಾದ ವಾತ್ಸ್ಯಾಯನ ವಂಶದಲ್ಲಿ ಕುಬೇರನೆಂಬ ಒಬ್ಬಾನೊಬ್ಬ ದ್ವಿಜೋತ್ತಮನು ಇದ್ದನು. ಗುಣಪರಿಪೂರ್ಣನೂ, ಪಂಡಿತಶ್ರೇಷ್ಠನೂ ಆದ ಅವನು ತನ್ನ ಕಾಂತಿಯಿಂದ ಸಾಕ್ಷಾತ್ ಬ್ರಹ್ಮನ ಅಂಶಾವತಾರವೆಂಬಂತೆ ಶೋಭಿಸುತ್ತಿದ್ದನು. ಅನೇಕ ಗುಪ್ತರಾಜರು ಅವನ ಪಾದಪದ್ಮಗಳನ್ನು ವಂದಿಸಿ ಪೂತರಾಗಿದ್ದರು. ಸದಾ ಯಜ್ಞಾಧ್ಯಯನ ಸಂಪನ್ನನಾಗಿದ್ದ ಅವನ ಮುಖದಲ್ಲಿ ವಿದ್ಯಾಧಿದೇವತೆ ಸರಸ್ವತಿಯೇ ನೆಲೆಮಾಡಿದ್ದಳು. ಅವನ ಗೃಹದಲ್ಲಿ ಶುಕಸಾರಿಕೆಗಳು ಶುದ್ಧವಾದ ಮಂತ್ರೋಚ್ಚಾರಣೆ ಮಾಡುತ್ತ ವಿದ್ಯಾರ್ಥಿಗಳ ತಪ್ಪನ್ನು ಹೆಜ್ಜೆ ಹೆಜ್ಜೆಗೂ ತಿದ್ದುತ್ತಿದ್ದವೆಂದಮೇಲೆ ಅವನ ಪಾಂಡಿತ್ಯವನ್ನು ಕುರಿತು ಹೇಳತಕ್ಕದ್ದೇನಿದೆ? ಅವನಿಗೆ ನಾಲ್ಕುಜನ ಪುತ್ರರು. ಅವರಲ್ಲಿ ಕಿರಿಯವನಾದ ಪಾಶುಪತನಿಗೆ ಅರ್ಥಪತಿಯೆಂಬ ಶ್ರೇಷ್ಠಪುತ್ರನು ಜನಿಸಿದನು. ಅವನು ಕ್ಷೀರಸಮುದ್ರದಲ್ಲಿ ಹುಟ್ಟಿದ ಚಂದ್ರನಂತೆ ಸ್ನಿಗ್ಧ ಮಧುರನಾಗಿಯೂ, ಉದಿಸಿದ ಸೂರ್ಯನಂತೆ ತೇಜೋಮಯನಾಗಿಯೂ ಇದ್ದನು. ದಿಕ್ಕು ದಿಕ್ಕುಗಳಿಂದಲೂ ಅವನ ಬಳಿಗೆ ವಿದ್ಯಾರ್ಜನೆಗಾಗಿ ಜನಗಳು ಬರುತ್ತಿದ್ದರು. ವಿಧಿವತ್ತಾದ ಯಜನ–ಯಾಜನದಿಂದ ಪ್ರಭೂತವಾದ ಕೀರ್ತಿಗಳಿಸಿ ಕಾಲಕ್ರಮದಲ್ಲಿ ಅವನು ದೇವಲೋಕವನ್ನು ಸೇರಿದನು. ಅರ್ಥಪತಿಗೆ ವಿದ್ಯಾಪಾರಂಗತರೂ ಧರ್ಮನಿರತರೂ ಆದ ಹನ್ನೊಂದು ಪುತ್ರರಿದ್ದರು. ಅವರಲ್ಲಿ ಎಂಟನೆಯವನಾದ ಚಿತ್ರಭಾನುವು ವಾತ್ಸ್ಯಾಯನ ವಂಶದ ಧವಳ ಕೀರ್ತಿಪಟದಂತೆ ಶೋಭಿಸುತ್ತಿದ್ದನು. ಸರಸ್ವತಿಯೇ ಸ್ವತಃ ಬಂದು ತನ್ನ ಕರಪಲ್ಲವಗಳಿಂದ ಈ ಭಾನುಭಟ್ಟನ (ಚಿತ್ರಭಾನುವಿನ) ಹೋಮ ಕಾಲದ ಬೆವರಿನ

ಬಿಂದುಗಳನ್ನು ಒರಸುತ್ತಿದ್ದಳು. ಏಕೆಂದರೆ ಉಷಃಕಾಲದಿಂದ ಹಿಡಿದು ಸೂರ್ಯೋದಯದ ಅನಂತರ ಎರಡು ಮುಹೂರ್ತಗಳ ವರೆಗೂ ನಿರಂತರ ಹವನ ಹೋಮಗಳನ್ನು ಮಾಡಿ ಆತನು ಬೆವರಿನಿಂದ ತೊಯ್ದಿದ್ದರೂ ಲೆಕ್ಕಿಸದೆ ಅಧ್ಯಾಪನದ ಕುಶಾಸನದ ಮೇಲೆ ಹೋಗಿ ಮಂಡಿಸುತ್ತಿದ್ದನು. ಅದೇ ಆತನ ವಿಶ್ರಾಂತಿ. ಅಲ್ಲಿ ಕುಳಿತು ವಿದ್ಯಾರ್ಥಿಗಳಿಗೆ ವೇದಾಭ್ಯಾಸಮಾಡಿಸುವುದ ರಲ್ಲಿಯೇ ಅವನ ಬೆವರುಹನಿಗಳು ಒಣಗಬೇಕು. ಈತನು ರಾಜದೇವಿಯೆಂಬ ಪತಿವ್ರತಾ ಶಿರೋಮಣಿಯನ್ನು ವರಿಸಿ ದನು. ಬಾಣಭಟ್ಟನು ಈ ಶ್ರೇಷ್ಠಬ್ರಾಹ್ಮಣ ದಂಪತಿಗಳ ಏಕೈಕ ಪುತ್ರನು. ಈ ವಂಶಾವಳಿಯನ್ನು ಹೇಳುವಾಗ ಕವಿಯು ಅತ್ಯಂತ ಭಕ್ತಿ, ಗೌರವ ಹೆಮ್ಮೆಗಳಿಂದ ತನ್ನ ಪಿತೃ ಪಿತಾಮಹರನ್ನು ವರ್ಣಿಸಿದ್ದಾನೆ. ಆದರೆ ಹರ್ಷಚರಿತೆಯಲ್ಲಿ ತಿಳಿಸಿರುವ ತನ್ನಪ್ರಪಿತಾಮಹ 'ಪಾಶುಪತ'ನ ವಿಚಾರವನ್ನು ಕಾದಂಬರಿಯಲ್ಲಿ ತಿಳಿಸಿಲ್ಲ. ಇದಕ್ಕೆ ಕಾರಣವೇನೋ ತಿಳಿ ಯದು. ಬಹುಶಃ ಆತನ ವಿಚಾರವನ್ನೊಳಗೊಂಡ ಒಂದು ಶ್ಲೋಕವೆಲ್ಲೋ ತಪ್ಪಿಸಿಕೊಂಡಿರಬಹುದು. ಅಂತೂ ಮೇಲೆ ಹೇಳಿದ ಬಾಣನ ವಂಶಾವಳಿಯನ್ನು ಸುಲಭವಾಗಿ ಹೀಗೆ ಗುರುತಿಸಬಹುದು:—

ವತ್ಸ [ಇವನಿಂದಲೇ ವಾತ್ಸ್ಯಾಯನವಂಶದ ಹೆಸರು]

|

ಕುಬೇರ [ವಾತ್ಸ್ಯಾಯನ ವಂಶಸಂಭವ]

|

ಅಚ್ಯುತ — ಈಶಾನ — ಹರ — ಪಾಶುಪತ

ಪಾಶುಪತ

|

ಅರ್ಥಪತಿ

|

ಭೃಗು — ಹಂಸ — ಶುಚಿ — ಕವಿ — ಮಹೀದತ್ತ — ಧರ್ಮ — ಜಾತವೇದಸ್ — ಚಿತ್ರಭಾನು — ತ್ರಕ್ಷ — ಅಹಿದತ್ತ — ವಿಶ್ವರೂಪ

ಚಿತ್ರಭಾನು

|

ಬಾಣ.

(ಆ) ದೇಶ

ಬಾಣಭಟ್ಟನ ವಂಶಸ್ಥರು ಹಿರಣ್ಯಗರ್ಭ ಅಥವಾ ಶೋಣಾ ಎಂಬ ನದಿಯ ದಡದ ಮೇಲಿದ್ದ ಪ್ರೀತಿಕೂಟವೆಂಬ ಸ್ಥಳದಲ್ಲಿ ವಾಸಮಾಡುತ್ತಿದ್ದರು. ಅದಕ್ಕೆ ಬ್ರಾಹ್ಮಣಾಧಿವಾಸವೆಂಬ ಹೆಸರೂ ಇದ್ದಿತೆಂದು ಕಾಣುತ್ತದೆ. ಇದು ಶ್ರೀಹರ್ಷನ ರಾಜ್ಯವಾಗಿದ್ದ ಶ್ರೀಕಂಠದೇಶಕ್ಕೆ ಸಮೀಪದಲ್ಲಿಯೇ ಇದ್ದು, ವಿದ್ಯಾಪರಿಣತರೂ, ವಿನಯ ಗಾಂಭೀರ್ಯಸಂಪನ್ನರೂ ಆದ ಶ್ರೇಷ್ಠದ್ವಿಜೋತ್ತಮರ ನೆಲೆವೀಡಾಗಿದ್ದಿತು.

(ಇ) ಜೀವಿತಾದಿಗಳು

ಬಾಣನ ಜನ್ಮವಾದ ಅನತಿಕಾಲದಲ್ಲಿಯೇ ತಾಯಿಯಾದ ರಾಜ್ಯದೇವಿಯು ಪರಲೋಕವನ್ನೈದಿದಳು. ತಂದೆ ಆಗ ವೃದ್ಧರಾಗಿದ್ದರು. ತಮ್ಮ ಅಧ್ಯಯನ-ಅಧ್ಯಾಪನ, ಯಜನ-ಯಾಜನಗಳ ಕರ್ಮಬಹುಳ ಜೀವನದಲ್ಲಿ ಮಗನ ಪಾಲನೆ ಪೋಷಣೆಯ ಗುರುತರ ಭಾರವೂ ಅವರ ತಲೆಯಮೇಲೆ ಬಿದ್ದಿತು. ಆದರೂ ಅವರು ಅತ್ಯಂತ ಪ್ರೇಮದಿಂದ, ಮಮತೆಯಿಂದ ಬಾಣನನ್ನು ಸಲಹುತ್ತಿದ್ದರು. ಆದರೆ ಅವರಿಂದ ಮಮತೆ ವಾತ್ಸಲ್ಯಗಳನ್ನು ಪಡೆದಷ್ಟು ವಿದ್ಯೆಯನ್ನು ಪಡೆಯುವ ಸೌಭಾಗ್ಯ ಬಾಣನ ಭಾಗಕ್ಕಿರಲಿಲ್ಲ. ಅವನ ಹದಿನಾಲ್ಕನೆ ವಯಸ್ಸಿನಲ್ಲಿ ಅವರು ಅವನನ್ನು ತೊರೆದು ಅನಾಥನನ್ನಾಗಿ ಮಾಡಿಹೋದರು. ತಂದೆಯ ಅಮಿತ ಸ್ನೇಹವಾತ್ಸಲ್ಯಗಳನ್ನು ಬಾಣನು ತನ್ನ ಜೀವನಸಾರವೆಂದು ಸ್ಮರಿಸಿದ್ದಾನೆ. ಕಾದಂಬರಿಯಲ್ಲಿ ವರ್ಣಿತವಾಗಿರುವ ವೈಶಂಪಾಯನನೆಂಬ ಗಿಣಿಯ

ಕಥೆಯಲ್ಲಿ ಬಾಣನ ಈ ದೌರ್ಭಾಗ್ಯಕರುಣಾಜನಕ ಕಥೆ ಪ್ರತಿಬಿಂಬಿತವಾಗಿರಬೇಕೆಂದು ಕಾಣುತ್ತದೆ.

ಬಾಣನ ಮುಂದಿನ ಜೀವನ ನಾನಾಮುಖವಾಗಿದ್ದು ಸಾಹಸ ಪೂರ್ಣವಾಗಿದ್ದಂತೆ ಕಾಣುತ್ತದೆ. ಜೀವನ ಸಾಗಾಣಿಕೆಗೆ ಸಾಕಾದಷ್ಟು ಪಿತ್ರಾರ್ಜಿತ ಆಸ್ತಿಯೇನೋ ಇದ್ದಿತು. ಆದರೆ ಅವನು ಜನ್ಮತಃ 'ಅಸ್ಥಿರಚಿತ್ತನೂ, ಹರಟೆಮಲ್ಲನೂ, ಅಲೆದಾಟ ಸ್ವಭಾವದವನೂ' ಆಗಿದ್ದನು. ತಂದೆತಾಯಿಗಳ ಮರಣದಿಂದ ಶೋಕತಪ್ತನಾಗಿ ನಿರಾಶನಾಗಿದ್ದಾಗ ಹುಟ್ಟುಗುಣವಾಗಿದ್ದ ದೇಶಪರ್ಯಟನೆ ಅವನಿಗೆ ರುಚಿಸಿತು. ಮನೆ ಮಠಗಳನ್ನೂ, ಬಂಧು ಬಳಗಗಳನ್ನೂ ತ್ಯಜಿಸಿ ಊರಿನಿಂದ ಊರಿಗೆ, ಜನಪದದಿಂದ ಜನಪದಕ್ಕೆ ವರ್ಷಗಟ್ಟಲೆ ಅಲೆಯಲಾರಂಭಿಸಿದನು. ಮನೆ ಬಾಗಿಲುಗಳನ್ನು ಬಿಟ್ಟುಹೋದಾಗ ಇನ್ನೂ ಕೆಲವು ತರುಣರನ್ನೂ ಜೊತೆಗೆ ಕರೆದುಕೊಂಡು ಹೊರಟನು.[2] ಈ ಸ್ನೇಹಿತರ ಗುಂಪಿನಲ್ಲಿದ್ದ ಕೆಲವರ ಹೆಸರುಗಳು,

---

2 ಡಾ|| ಹಜಾರಿ ಪ್ರಸಾದ್ ದ್ವಿವೇದಿಯವರಿಂದ ರಚಿತವಾಗಿರುವ "ಬಾಣಭಟ್ಟನ ಆತ್ಮಕಥೆ" ಎಂಬ ಚಾರಿತ್ರಿಕ ಕಾದಂಬರಿಯಲ್ಲಿ ಈ ಆಸಕ್ತಿ ಪೂರ್ಣ ಉಲ್ಲೇಖವಿದೆ:— "ಬಾಣಭಟ್ಟನೆಂಬ ನಾಮಧೇಯದಿಂದ ನಾನು ಪ್ರಸಿದ್ಧನಾಗಿದ್ದೇನೆ. ಆದರೆ ಅದು ನನ್ನ ನಿಜವಾದ ಹೆಸರಲ್ಲ. ಈ ಹೆಸರಿನ ಹಿಂದಿನ ಕಥೆಯನ್ನು ತಿಳಿಯದಿರುವುದೇ ಚೆನ್ನಾಗಿತ್ತು! ಪ್ರಯತ್ನಪೂರ್ವಕವಾಗಿ ಜನಗಳಿಂದ ಇದುವರೆವಿಗೂ ಈ ಕಥೆಯನ್ನು ಮರೆಮಾಚಿದ್ದೇನೆ. ಆದರೆ ಹಲವಾರು ಕಾರಣಗಳಿಂದ ಇನ್ನು ಮುಂದೆ ಮರೆಮಾಚಲಾರೆ" [ಆಶ್ವಾಸ. ೧—ಪುಟ. ೯.]

ಜನ್ಮತಃ ಅಸ್ಥಿರಚಿತ್ತನೂ, ಹರಟೆಮಲ್ಲನೂ, ಅಲೆದಾಟದ ಸ್ವಭಾವದವನೂ ಆದ ನಾನು ಮನೆಬಿಟ್ಟು ಹೋದಾಗ ನನ್ನ ಜೊತೆಯಲ್ಲಿ ಕೆಲವು ಹುಡುಗರನ್ನೂ ಕರೆದುಕೊಂಡು ಹೊರಟೆ. ಆದರೂ ನನಗೆ

ಅವರ ವೃತ್ತಿ, ವೈವಿಧ್ಯ, ಕೌಶಲ ಮುಂತಾದವನ್ನು ಹರ್ಷ ಚರಿತೆಯಲ್ಲಿ ಪೂರ್ಣವಾಗಿ ತಿಳಿಸಲಾಗಿದೆ. ಈ ಗುಂಪಿನ ಸಹಾಯದಿಂದ ಆ ಅಲೆದಾಟದಲ್ಲಿ ಅವನು ಮಾಡದಿದ್ದ ಕೆಲಸ ಯಾವುದು ? ಒಮ್ಮೆ ನಟನಾಗುತ್ತಿದ್ದ; ಒಮ್ಮೆ ಗೊಂಬೆಯಾಟ ಗಾರನಾಗುತ್ತಿದ್ದ; ಒಮ್ಮೆ ನಾಟ್ಯಮಂಡಲಿಯ ಮುಖ್ಯಸ್ಥ; ಮತ್ತೊಮ್ಮೆ ಪುರಾಣವಾಚಕ; ಒಟ್ಟಿನಲ್ಲಿ ಅವನು ಮಾಡದಿದ್ದ ಕೆಲಸ ಯಾವುದೂ ಇರಲಿಲ್ಲವೆಂದು ಹೇಳಬಹುದು. ದೈವದತ್ತ ರೂಪವಿತ್ತು, ವಾಕ್ಚಾತುರ್ಯವಿತ್ತು. ಸರಿ, ಕೇಳಬೇಕೆ! ಆ ತಾರುಣ್ಯದಲ್ಲಿ ಈ ಗುಣಗಳು ಅವನಿಗೆ ಬಹಳ ಸಹಾಯ ಮಾಡಿರಬೇಕು. ಅವನ ಬಹುರೂಪತ್ವವನ್ನು ಕಂಡು ಜನರು ಅವನನ್ನು 'ಭುಜಂಗ' ಎಂದು ಕರೆಯತೊಡಗಿದರು. ಹೀಗೆ ಅಲೆವಲೆದು ಕೊನೆಗೆ ತನ್ನ ಪ್ರೀತಿಯ ಪ್ರೀತಿಕೂಟವನ್ನು ನೆನೆದು ಮನೆಗೆಬಂದು ಸೇರಿ ಶಾಂತಜೀವನವನ್ನು ನಡೆಸಲು ಪಕ್ರಮಿಸಿದನು.

ಬಾಣನ ದೇಶ ವಿದೇಶ ಅಲೆತವು ಅವನನ್ನು ಲಂಪಟನನ್ನಾಗಿ

ಅಪಖ್ಯಾತಿ ತಪ್ಪಲಿಲ್ಲ. ಮಾಗಧಿ ಭಾಷೆಯಲ್ಲಿ ಬಾಲ ಕತ್ತರಿಸಿದ ಗೂಳಿಯನ್ನು "ಬಂಡ" ಎಂದು ಕರೆಯುತ್ತಾರೆ. ಅಲ್ಲಿ ಬಂಡ ತಾನು ಹೋಗುವುದಲ್ಲದೆ ಒಂಬತ್ತು ಮೊಳ ಹಗ್ಗವನ್ನೂ ಕೊಂಡೊಯ್ದಿತು." ಎಂಬ ಗಾದೆ ಪ್ರಸಿದ್ಧವಾಗಿದೆ. ಆದ್ದರಿಂದ ಜನರು ನನ್ನನ್ನು "ಬಂಡ" ಎಂದು ಕರೆಯತೊಡಗಿದರು. ಇದನ್ನೇ ನಂತರ 'ಬಾಣ' ಎಂಬ ಸಂಸ್ಕೃತ ಶಬ್ದವನ್ನಾಗಿ ಪರಿಷ್ಕರಿಸಿ ಈ ಹೆಸರಿನ ಹೆಚ್ಚಳವನ್ನು ಹೆಚ್ಚಿಸಿದೆ. "ಭಟ್ಟ" ಎಂದು ಜನರು ನಂತರ ಜೋಡಿಸಿದರು. ನನ್ನ ನಿಜವಾದ ಹೆಸರು "ದಕ್ಷ" (ದಕ್ಷಭಟ್ಟ) ಬಹಳ ಎಚ್ಚರಿಕೆಯಿಂದ ನಾನು ಈ ಹೆಸರನ್ನು ಗೂಢ ಗುಪ್ತಾಂತರದಲ್ಲಿ ಅಡಗಿಸಿಟ್ಟಿದ್ದೆ [ಆಶ್ವಾಸ—೧. ಪುಟ—೧೦]

ಮಾಡಿರಲಿಲ್ಲವೆಂಬುದು ಬಹು ಜನಗಳಿಗೆ ತಿಳಿದಿರಲಿಲ್ಲ. ಈ ದೇಶಪರ್ಯಟನವು ಇವನ ಜ್ಞಾನಭಂಡಾರವನ್ನು ಅತ್ಯಂತ ವೈಭವೋನ್ನಿತವನ್ನಾಗಿ ಮಾಡಿದ್ದಿತು. ಅನೇಕ ವೃತ್ತಿಗಳಿಂದ ಕೂಡಿದ್ದ ಇವನ ಸ್ನೇಹಿತರ ಸಂಸರ್ಗ ಇವನಿಗೆ ಅನುಭವ ವೈಶಾಲ್ಯವನ್ನೂ, ಉತ್ತಮ ಜ್ಞಾನವನ್ನೂ ದೊರಕಿಸಿಕೊಟ್ಟಿತ್ತು. ಜೊತೆಗೆ ಪ್ರಖ್ಯಾತವಾದ ವಾತ್ಸ್ಯಾಯನ ವಂಶದ ಧವಳಕೀರ್ತಿ ಪಟದ ಮೇಲೆ ತನ್ನ ಚರಿತ್ರೆ ಕಳಂಕ ಪ್ರಾಯವಾಗಿರುವುದರ ಅರಿವೂ ಬಂದಿತ್ತು. ಪಿತೃದೇವತೆಗಳು ಅವನ ಮೇಲೆ ದುಃಖದ ಕಂಬನಿಗಳನ್ನು ಸುರಿಸುತ್ತಿರುವಂತೆ ವ್ಯಕ್ತವಾಯಿತು. ವೇದಾಧ್ಯಾಯಿಗಳ ವಂಶವೆಲ್ಲಿ? ತನ್ನಂಥಹ 'ಬಂಡ'ನೆಲ್ಲಿ? ಎಂದು ನಿಂದಿಸಿಕೊಂಡು ಪರಿತಾಪ ಪಡುತ್ತಿದ್ದನು. ಹೀಗಿರಲು ಒಂದು ದಿನ ಮಧ್ಯಾಹ್ನ ಭೋಜನವಾದ ಮೇಲೆ ಪಡಸಾಲೆಯಲ್ಲಿ ಕುಳಿತು ಆಯಾಸ ಪರಿಹಾರ ಮಾಡಿಕೊಳ್ಳುತ್ತಿರುವ ಸಮಯದಲ್ಲಿ ಶ್ರೀಹರ್ಷವರ್ಧನನ ಸೋದರಕುಮಾರ, ಬಾಣನ ಮಿತ್ರನಾಗಿದ್ದ ಕೃಷ್ಣವರ್ಧನನ ಕಡೆಯಿಂದ ಸವಾರನೊಬ್ಬನು ಬಂದು ಒಂದು ಪತ್ರವನ್ನು ತಲುಪಿಸಿದನು. ಆ ಪತ್ರದಲ್ಲಿ ಹರ್ಷನು ಬಾಣನ ನಡತೆಯಿಂದ ಅಸಂತುಷ್ಟ ಗೊಂಡಿದ್ದನೆಂದೂ, ಆದರೆ ಕೃಷ್ಣನ ಸಕಾಲಿಕ ಮಾತುಗಳಿಂದ ಸಾಂತ್ವಗೊಂಡನೆಂದೂ ತಿಳಿಸಿದ್ದಿತಲ್ಲದೆ, ಬಾಣನನ್ನು ಕೂಡಲೇ ಕುದುರೆಯೇರಿ ಹೊರಟು ಬಂದು ಚಕ್ರವರ್ತಿಯನ್ನು ಸಂದರ್ಶಿಸಬೇಕೆಂದೂ ತಿಳಿಸಿದ್ದಿತು. ಬಾಣನ ಮನಸ್ಸಿನಲ್ಲಿ ವಿಚಿತ್ರ ಆಲೋಚನೆಗಳು ಬಂದವು. ಮಾರನೆಯ ದಿನವೇ ಪ್ರಾಸ್ಥಾನಿಕ ಮಂಗಳಕಾರ್ಯ ಮಾಡಿ, ಎಂದಿನಂತೆ ತನಗೆ ಪ್ರಿಯವಾಗಿದ್ದ ಹಿಮ್ಮಡಿಯವರೆಗೂ ಜೋಲುವ ಉತ್ತರೀಯವನ್ನು ಧರಿಸಿ, ಭಗವಾನ್ ತ್ರ್ಯಂಬಕನ

ಚರಣಗಳಿಗೆ ಆರ್ದ್ರನಯನಗಳಿಂದ ನಮಿಸಿ ಹೊರಟನು. ಮೂರನೆಯ ದಿನ ಮಣಿತಾರವೆಂಬ ಪಟ್ಟಣದ ಬಳಿ ಹರಿಯುತ್ತಿದ್ದ ಅಜಿರಾವತಿ ನದಿಯ ದಡದಮೇಲೆ ಬೀಡು ಬಿಟ್ಟಿದ್ದ ಹರ್ಷ ಚಕ್ರವರ್ತಿಯ ಪಾಳೆಯವನ್ನು ಪ್ರವೇಶಿಸಿದನು. ಆಗ ಚಕ್ರವರ್ತಿಯು ಮಾಳವರಾಜಕುಮಾರನ ಜೊತೆಯಲ್ಲಿ ಕುಳಿತಿದ್ದನು. ಬಾಣನನ್ನು ಪರಿಚಯ ಮಾಡಿಕೊಟ್ಟಾಗಲೂ, ಕೋಪದಿಂದಲೇ ತಿರಸ್ಕರಿಸಿ ಮಾತನಾಡಿದನು. ಆದರೆ ಆ ಕೋಪ ಮತ್ತು ತಿರಸ್ಕಾರ ನೈಜವಾಗಿರಲಿಲ್ಲ. ಕೇವಲ ನಟನೆಯದಾಗಿತ್ತು. ಸ್ವಯಂ ಪ್ರಖ್ಯಾತ ಕವಿಯೂ, ವಿಮರ್ಶಕನೂ ಆಗಿದ್ದ ಶ್ರೀಹರ್ಷದೇವನು ಅನೇಕ ರಸಿಕರಿಗೂ, ಪಂಡಿತರಿಗೂ ಆಶ್ರಯದಾತನಾಗಿದ್ದನು. ಅನತಿಕಾಲದಲ್ಲೇ ಬಾಣನು ಸಭಾಪಂಡಿತನಾದುದಲ್ಲದೆ ಚಕ್ರವರ್ತಿಯ ಆಪ್ತನೂ ಆದನು. ಹೀಗೆ ರಾಜಾಶ್ರಯವನ್ನು ಚಿರಕಾಲ ಅನುಭವಿಸಿ ಹರ್ಷಾನಂದಭರಿತನಾಗಿ ತನ್ನ ಊರಿಗೆ ಹಿಂದಕ್ಕೆ ಬಂದನು. ಅವನನ್ನು ಆಗ ತುಂಬಾ ಗೌರವದಿಂದ ಜನರು ಎದುರ್ಗೊಂಡರು. ಅವನ ಅಪಖ್ಯಾತಿ ಮಾಯವಾಯಿತು. ಆ ಸಂಜೆ ಬಾಣನ ಸೋದರಪುತ್ರರಾಗಿದ್ದ ಗಣಪತಿ, ಅಧಿಪತಿ, ತಾರಾಪತಿ ಮತ್ತು ಶ್ಯಾಮಲ ಎಂಬುವರು ಬಾಣನಿಂದ ಹರ್ಷನ ಸಮಸ್ತ ವೈಭವಗಳನ್ನು ಕೇಳಲು ಕುತೂಹಲಪಟ್ಟರು. ಆದರೆ ಬಾಣನು ಹರ್ಷ ಚಕ್ರವರ್ತಿಯ ವೈಭವವನ್ನೆಲ್ಲಾ ವರ್ಣಿಸಲು ತನಗೆ ಶಕ್ತಿ ಸಾಲದೆಂದೂ, ಆದರೆ ಅಂಶಮಾತ್ರವನ್ನಾದರೂ ತಿಳಿಸುವೆನೆಂದು ಹೇಳಿ ಮಾರನೆದಿನ ಹರ್ಷಸಾರ್ವಭೌಮನ ಚರಿತ್ರೆಯನ್ನು ಹೇಳತೊಡಗಿದನು.

ಇಲ್ಲಿಗೆ ಕವಿಯ ಕಥೆ ನಿಲ್ಲುತ್ತದೆ. ಬಾಣರಚಿತ 'ಕಾದಂಬರಿ'

ಪೂರ್ಣವಾಗಿಲ್ಲ. "ಉತ್ತರಭಾಗ"ವು ಅವನ ಮಗ ಭೂಷಣ ಬಾಣ ಅಥವಾ ಪುಲಿಂದ (ಧ್ರ) ನಿಂದ ಬರೆಯಲ್ಪಟ್ಟಿದೆ ಯೆಂದು ಗೊತ್ತಾಗುತ್ತದೆ. ಬಾಣನಿಗೆ ಮದುವೆಯಾಗಿದ್ದ ವಿಚಾರವೇನೋ ತಿಳಿದಿದೆ; ಆದರೆ ಪತ್ನಿಯ ಹೆಸರಾಗಲೀ, ಅವಳ ವಂಶ, ಸ್ಥಳಗಳ ಹೆಸರಾಗಲೀ ಎಲ್ಲೂ ತಿಳಿಸಿಲ್ಲ. ಶ್ರೀಹರ್ಷನ ಆಸ್ಥಾನದಲ್ಲಿದ್ದ 'ಮಯೂರ ಕವಿ' ಬಾಣನ ಮಾವನೆಂಬ ಪ್ರತೀತಿ ಇದೆ. ಮೌಖರಿ ರಾಜರುಗಳಿಂದ ಪೂಜಿಸ ಲ್ಪಡುತ್ತಿದ್ದ ಭರ್ವುಪಾದರೆಂಬುವರು ಬಾಣನ ಗುರುವಾಗಿದ್ದ ರೆಂದೂ ನಂಬಿಕೆಯಿದೆ. ಇನ್ನುಮುಂದೆ ಬಾಣನ ಕೊನೆಯ ದಿನಗಳಾಗಲೀ, ಉಳಿದ ಜೀವಿತ ವಿಷಯಗಳಾಗಲೀ, ಏನೂ ತಿಳಿಯದಾಗಿದೆ.

(ಈ) ಬಾಣಭಟ್ಟನ ಕಾಲ

ಸೌಭಾಗ್ಯವಶಾತ್ ಬಾಣಭಟ್ಟನ ಕಾಲ ವಿಚಾರವು ಹೆಚ್ಚಿನ ತೊಡಕಿಗೆ ಸಿಕ್ಕಿಲ್ಲ. ಇವನು ಸ್ಥಾಣೇಶ್ವರದ ಚಕ್ರವರ್ತಿ ಸಾರ್ವಭೌಮನ ಸಮಸಾಮಯಿಕನಾಗಿದ್ದನೆಂದು ಅನೇಕ ಆಧಾರಗಳಿಂದ ನಿರ್ಧಾರವಾಗಿದೆ. ಶ್ರೀಹರ್ಷ ಚಕ್ರವರ್ತಿಯು (ಎರಡನೇ ಶಿಲಾದಿತ್ಯನು) ಕ್ರಿ. ಶ. ೬೦೬ ರಿಂದ ೬೪೭ ರ ವರೆವಿಗೆ ಆಳುತ್ತಿದ್ದನು. ಚೈನಾಯಾತ್ರಿಕ ಹ್ಯೂಯರ್ನತ್ಸಾಂಗನೂ ಈ ಚಕ್ರವರ್ತಿಯ ಕಾಲದಲ್ಲೇ ಅಂದರೆ ಕ್ರಿ. ಶ. ೬೨೯ ರಿಂದ ಕ್ರಿ. ಶ. ೬೪೫ ರ ವರೆಗೆ ಭಾರತದಲ್ಲಿದ್ದನು. ಹರ್ಷಚರಿತೆಯಲ್ಲಿ ಬಾಣನು ಕೊಟ್ಟಿರುವ ವಿಷಯಗಳೂ, ಚೈನಾದೇಶದ ಯಾತ್ರಿಕ ಹ್ಯೂಯರ್ನತ್ಸಾಂಗನು ತಿಳಿಸಿರುವ ವಿಷಯಗಳೂ ಬಹುಭಾಗ ಹೋಲುತ್ತವೆ. ಆದುದರಿಂದ ಇಬ್ಬರೂ ಒಬ್ಬ ಹರ್ಷದೇವನ

ವಿಚಾರವನ್ನೇ ತಿಳಿಸಿದ್ದಾರೆಂಬುದು ವಾದಾತೀತ. ಹರ್ಷನ ಕಾಲವು ಕ್ರಿ. ಶ. ೬೦೬ ರಿಂದ ಕ್ರಿ. ಶ. ೬೪೪ ರ ವರೆಗೆ ಎಂದ ಮೇಲೆ ಬಾಣನ ಕಾಲವೂ ಕ್ರಿ. ಶ. ೬ ನೇ ಶತಮಾನದ ಉತ್ತರಾರ್ಧವೋ ಇಲ್ಲವೆ ೭ ನೇ ಶತಮಾನದ ಪೂರ್ವಾರ್ಧವೋ ಆಗಿರಬಹುದು.

(ಉ) ಬಾಣನ ಕೃತಿಗಳು

ಬಾಣಭಟ್ಟನ ಕೃತಿಗಳಲ್ಲಿ ಪ್ರಖ್ಯಾತವಾದವು 'ಹರ್ಷಚರಿತೆ' ಮತ್ತು 'ಕಾದಂಬರಿ'. ಇವುಗಳನ್ನು ಬಿಟ್ಟರೆ ಉಳಿದವುಗಳ ವಿಚಾರದಲ್ಲಿ ವಿಮರ್ಶಕರ ಅಭಿಪ್ರಾಯ ಏಕಮುಖವಾಗಿಲ್ಲ. ಗದ್ಯದಲ್ಲಿರುವಂತೆ ಪದ್ಯದಲ್ಲಿಯೂ 'ಕಾದಂಬರಿ' (ಶ್ಲೋಕ-ಬದ್ಧ ಕಾದಂಬರೀ) ಯನ್ನು ರಚಿಸಿರಬೇಕೆಂಬ ಸೂಚನೆಯೇನೋ ಬಂದಿದೆ. ಆದರೆ ಆ ಕೃತಿ ಸಿಕ್ಕಿಲ್ಲ. ಹಾಗೆಯೇ ಅವನಿಂದ ರಚಿತವಾಯಿತೆಂದು ಹೇಳಲಾದ "ಮುಕುಟ ತಾಡಿತಕಾ" ಎಂಬ ಗ್ರಂಥವೂ ದೊರಕಿಲ್ಲ. 'ಪಾರ್ವತೀ ಪರಿಣಯ' ವೆಂಬ ನಾಟಕದ ಕರ್ತೃತ್ವವೂ ಬಾಣನಿಗೆ ಕೊಡಲ್ಪಟ್ಟಿದೆ. ಅಲ್ಲಿನ ಪ್ರಸ್ತಾವನೆಯಲ್ಲೇನೋ 'ವತ್ಸಾನ್ವಯ ಜಲಧಿ ಸಂಭವೋ ಬಾಣಃ' ಎಂದು ತಿಳಿಸಿದೆ. ಆದರೆ ಆ ಕೃತಿಗಳಲ್ಲಿನ ಶೈಲಿ, ಕಥಾ ಸಂವಿಧಾನ ಮುಂತಾದವು ಬಾಣನ ಇತರ ಕೃತಿಗಳಲ್ಲಿರುವುದಕ್ಕಿಂತ ಭಿನ್ನವೆಂದು ಕೆಲವು ವಿದ್ವಾಂಸರ ಮತ. ಇವಲ್ಲದೆ "ಚಂಡೀ ಶತಕ" ವೆಂಬ ನೂರು ಶ್ಲೋಕಗಳನ್ನೊಳಗೊಂಡ 'ಚಂಡೀ' ಅಥವಾ "ದುರ್ಗಾಮಹಿಮೆ"ಯು ಬಾಣನಿಂದ ರಚಿತವಾಗಿದೆಯೆಂದು ನಂಬಲಾಗಿದೆ. ಬಾಣನ ಕವಿತಾ ಸಾಮರ್ಥ್ಯ, ಶೈಲಿಗಳನ್ನು ಪ್ರತಿಪಾದಿಸುವಾಗ ಅವನ

ಕಾದಂಬರೀ ಮತ್ತು ಹರ್ಷಚರಿತೆಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುವುದು ರೂಢಿಯಾಗಿದೆ. ಆದುದರಿಂದ ಈ ಎರಡು ಕೃತಿಗಳ (ಕಥಾ) ಸಾರಾಂಶವನ್ನು ಮೊದಲು ತಿಳಿಸುವುದು ಉಚಿತ

೩. (ಅ) ಹರ್ಷಚರಿತೆ

ಹರ್ಷಚರಿತೆಯು ಎಂಟು ಆಶ್ವಾಸಗಳನ್ನೊಳಗೊಂಡಿದೆ. ಆದರೂ ಅಪೂರ್ಣವಾಗಿದೆ. ಕಥಾಸಾರಾಂಶ ಸ್ಥೂಲವಾಗಿ ಈ ರೀತಿಯಾಗಿದೆ :—

ಆಶ್ವಾಸ ಒಂದು ಮತ್ತು ಎರಡು : ಮಂಗಳ ಶ್ಲೋಕಗಳನ್ನು ಹೇಳಿ ತನ್ನ ಹಿಂದಿನ ಕವಿಗಳನ್ನು ಭಕ್ತಿಯಿಂದ ನೆನೆದು ಗೌರವಿಸಿ ಬಾಣನು ತನ್ನ ಕಥೆಯನ್ನು ಹೇಳಲು ಆರಂಭಿಸುತ್ತಾನೆ.

ಆಶ್ವಾಸ ಮೂರು : ಬಾಣನ ಆತ್ಮಕಥೆಯೇ ಮುಂದುವರಿಯುತ್ತದೆ. ಬಾಣನು ರಾಜಾಸ್ಥಾನದಿಂದ ಹಿಂತಿರುಗಿದುದು. ಆತನಿಗೆ ಕೊಟ್ಟ ಸ್ವಾಗತ, ಸನ್ಮಾನ ನಂತರ ಅವನ ಸೋದರಪುತ್ರರಿಂದ ಶ್ರೀಹರ್ಷ ಸಾರ್ವಭೌಮನ ಕಥೆಯನ್ನು ಕೇಳುವ ಕುತೂಹಲ ಪೂರ್ಣಪ್ರಶ್ನೆ ಮುಂತಾದವು ವರ್ಣಿತವಾಗಿವೆ. ಮಾರನೆಯ ದಿನ ಬಾಣನು ಹರ್ಷನ ಕಥೆಯನ್ನು ಹೇಳತೊಡಗಿದನು :—

ಭರತಖಂಡದಲ್ಲಿ ಶ್ರೀಕಂಠದೇಶವೆಂಬುವುದಿರುವುದು. ಸ್ಥಾಣೇಶ್ವರ ಅದರ ಒಂದು ಭಾಗ. ಇದನ್ನಾಳಿ ಕೀರ್ತಿಶೇಷರಾದವರಲ್ಲಿ "ಪುಷ್ಪಭೂತಿ" ಎಂಬ ದೊರೆಯು ಮುಖ್ಯನು. ಇವನು ದಕ್ಷಿಣದೇಶದ ಶೈವಾಚಾರ್ಯರಾಗಿದ್ದ ಭೈರವರೊಡನೆ

ಸ್ನೇಹಮಾಡಿಕೊಂಡನು. ಅದ್ಭುತವಾದ "ಅಟ್ಟಹಾಸ"ವೆಂಬ ಹೆಸರಿನ ಖಡ್ಗವನ್ನು ಅವನಿಂದ ಪಡೆದು ಅವನ ಯಜ್ಞವನ್ನು ರಕ್ಷಿಸಿದನು. ಈ ಸಂದರ್ಭದಲ್ಲಿಯೇ ಲಕ್ಷ್ಮೀದೇವಿಯ ಸಂದರ್ಶನವಾಯಿತು. ಆ ದೇವಿಯಿಂದ ತಾನು ಶ್ರೇಷ್ಠ ರಾಷ್ಟ್ರ ನಿರ್ಮಾಪಕನಾಗುವನೆಂದೂ, ತನ್ನ ವಂಶದಲ್ಲಿ ಮುಂದೆ ಹರ್ಷನೆಂಬುವನು ಪ್ರಖ್ಯಾತನಾಗುವನೆಂದೂ ವಾಗ್ದಾನ ಪಡೆದನು.

ಆಶ್ವಾಸ ನಾಲ್ಕು: ಈ ಪುಷ್ಪಭೂತಿಯ ವಂಶದಲ್ಲಿ ಮುಂದೆ ಪ್ರಭಾಕರವರ್ಧನನು ಜನಿಸಿದನು. ಅವನನ್ನು ಪ್ರತಾಪಶೀಲನೆಂದೂ ಕರೆಯುತ್ತಿದ್ದರು. ಅವನು ಹೂಣರನ್ನು ಜಯಿಸಿ ವಿಖ್ಯಾತನಾದನು. ಪ್ರಬಲ ಪರಾಕ್ರಮಿಯಾದ ಈತನೇ ಶ್ರೀಹರ್ಷನ ತಂದೆ. ಶ್ರೀಹರ್ಷನನ್ನು ಹರ್ಷವರ್ಧನನೆಂದೂ ಕರೆಯುತ್ತಿದ್ದರು. "ಯಶೋಮತಿ" ಎಂಬುವಳೇ ಶ್ರೀಹರ್ಷನ ಜನ್ಮಧಾರಿಣಿ. ಶ್ರೀಹರ್ಷನಿಗೆ ರಾಜ್ಯವರ್ಧನನೆಂಬ ಅಣ್ಣನೂ, ರಾಜ್ಯಶ್ರೀ ಎಂಬ ತಂಗಿಯೂ ಇದ್ದರು. "ರಾಜ್ಯಶ್ರೀ" ಜನನಕ್ಕೆ ಸ್ವಲ್ಪಕಾಲ ಮುಂಚೆ ಯಶೋಮತಿಯ ಸಹೋದರನ ಮಗ ಎಂಟು ವರ್ಷ ವಯಸ್ಸಿನ "ಭಂಡಿ" ಯೂ ರಾಜಪುತ್ರರ ಜೊತೆಯಲ್ಲಿ ಬೆಳೆಯಲು ಬಂದು ಸೇರಿದನು. ಕೆಲ ಕಾಲನಂತರ ಪ್ರಭಾಕರವರ್ಧನನು ಮಾಳವದೇಶದ ರಾಜಪುತ್ರರಾಗಿದ್ದ ಕುಮಾರಗುಪ್ತ ಮತ್ತು ಮಾಧವಗುಪ್ತರೆಂಬುವರನ್ನು ಕರೆತಂದು ತನ್ನ ಮಕ್ಕಳ ಜೊತೆಯಲ್ಲೇ ಬೆಳಯಲು ಏರ್ಪಾಟುಮಾಡಿದನು. ಇವರೆಲ್ಲರೂ ಅತ್ಯಂತ ಆಪ್ತರಾಗಿ ಒಬ್ಬರೊನ್ನೊಬ್ಬರು ಅಗಲದೆ ಇರುತ್ತಿದ್ದರು. ಹೀಗಿರಲು ರಾಜ್ಯಶ್ರೀಗೆ ಮದುವೆಯಕಾಲ ಸನ್ನಿಹಿತವಾಯಿತು. ರಾಜಕುಮಾರಿಗೆ ಯೋಗ್ಯವೆನಿಸಿದ ಎಲ್ಲ ನೈಪುಣ್ಯ ಕೌಶಲ

ಗಳಿಂದ ಶೋಭಿಸುತ್ತಿದ್ದ ಅವಳ ವಿವಾಹವು ಗ್ರಹವರ್ಮನೊಡನೆ ನೆರವೇರಿತು. ಅವನು ಮೌಖರಿವಂಶದ ಅವಂತಿವರ್ಮನ ಹಿರಿಯ ಮಗ. ಸತಿಪತಿಗಳು ತುಂಬು ಪ್ರೇಮದಿಂದ ಕಳು ಹಿಸಲ್ಪಟ್ಟವರಾಗಿ ತಮ್ಮ ದೇಶವಾದ ಕಾನ್ಯಕುಬ್ಜವನ್ನು ಬಂದು ತಲುಪಿದರು.

ಆಶ್ವಾಸ ಐದು : ಹೀಗೆ ಕೆಲವು ಕಾಲ ಕಳೆಯಿತು. ಪ್ರಭಾಕರವರ್ಧನನು ವಯೋಗಳಿತನಾದನು. ಇದೇ ಸಮಯ ವನ್ನು ಎದಿರುನೋಡುತ್ತಿದ್ದ ಹೂಣರೆಂಬ ದುಷ್ಟರು ಪ್ರಜೆ ಗಳನ್ನು ಹಿಂಸಿಸತೊಡಗಿದರು. ಇದನ್ನು ಅರಿತ ರಾಜನು ಅವನ ನಿಗ್ರಹಕ್ಕಾಗಿ ಸೈನ್ಯವನ್ನು ಸಜ್ಜುಗೊಳಿಸಿ ರಾಜ್ಯವರ್ಧನ ನೊಡನೆ ಕಳುಹಿಸಿದನು. ಉತ್ತರ ದಿಗ್ಭಾಗವನ್ನು ಕುರಿತು ಹೊರಟ್ಟಿದ್ದ ಅಣ್ಣನೊಡನೆ ಹರ್ಷವರ್ಧನನೂ ಸೈನ್ಯ ಸಮೇತ ನಾಗಿ ಹಿಮವತ್ಪರ್ವತದವರೆಗೂ ಹೋದನು. ರಾಜ್ಯವರ್ಧನನು ಎಲ್ಲರನ್ನೂ ಅಲ್ಲಿಯೇ ಬಿಟ್ಟು ಮಿತ ಪರಿವಾರದೊಡನೆ ಮುಂದೆ ಹೋದನು. ಹರ್ಷನು ಅಣ್ಣನ ಬರುವಿಕೆಯನ್ನೇ ಕಾಯುತ್ತ ಸುತ್ತಮುತ್ತಲಿನ ವನದೇವತೆಯ ನೈಸರ್ಗಿಕ ಸೌಂದರ್ಯವನ್ನು ನೋಡಿ ಆನಂದಿಸುತ್ತಾ ಇದ್ದನು. ಹೀಗಿರಲು ಒಂದಾನೊಂದು ದಿನ ಬಹು ಹೊತ್ತಿನವರೆಗೂ ಬೇಟೆಯಾಡಿ ಆಯಾಸಗೊಂಡು ಹಾಸಿಗಯಲ್ಲಿ ಮಲಗಿದರೂ ನಿದ್ರೆಬಾರದೆ ಏನನ್ನೋ ಆಲೋ ಚಿಸುತ್ತಿದ್ದನು. ಆ ಸಮಯದಲ್ಲಿ ತನ್ನ ತಂದೆಯ ಆಪ್ತಭೃತ್ಯ ನಾದ ಕುರಂಗಕನೆಂಬವನು ಓಡಿ ಬಂದು ಪ್ರಭಾಕರವರ್ಧನನು ರೋಗಗ್ರಸ್ತನಾಗಿ ಹಾಸಿಗೆ ಹಿಡಿದಿರುವ ವಿಷಯವನ್ನು ಹೇಳಿ ಒಂದು ಪತ್ರವನ್ನು ತಲುಪಿಸಿದನು. ಹರ್ಷನು ಆ ಪತ್ರವನ್ನು ಓದಿಕೊಂಡು ಕೂಡಲೇ ಕುದುರೆಯೇರಿ ಏಕಾಂಗಿಯಾಗಿ

ಅಲ್ಲಿಂದ ಹೊರಟು ಗೋಳಿಡುತ್ತಿರುವ ಅರಮನೆಯನ್ನು ಪ್ರವೇಶಿಸಿದನು. ಅಲ್ಲಿ ಋಗ್ಣಶಯ್ಯೆಯಲ್ಲಿರುವ ತಂದೆಯನ್ನೂ ಅವನ ಮೇಲೆ ಒರಗಿ ಶೋಕತಪ್ತಳಾಗಿದ್ದ ತಾಯಿಯನ್ನೂ ನೋಡಿದನು. ಎರಡು ದಿನಗಳು ಕಳೆದವು. ರಾಜನ ಪ್ರಾಣವು ಪ್ರಯಾಣೋನ್ಮುಖವಾಗುತ್ತಿರುವುದನ್ನು ನೋಡಿದ ಯಶೋಮತಿಯು ವೈಧವ್ಯದುಃಖ ಬರಬಾರದೆಂದು ತಿಳಿದು ಹರ್ಷನು ನೋಡುತ್ತಿದ್ದಂತೆಯೇ ಚಿತಾರೋಹಣ ಮಾಡಿದಳು. ಸ್ವಲ್ಪ ಕಾಲದ ನಂತರ ಶ್ರೀಹರ್ಷನ ತಂದೆಯೂ ನಶ್ವರದೇಹವನ್ನು ತ್ಯಜಿಸಿದನು. ಅನಂತರ ಪುರಜನರೂ ಪುರೋಹಿತರೂ ಹರ್ಷನನ್ನು ಸಂತೈಸಿ, ರಾಜಮರ್ಯಾದೆಗಳೊಡನೆ ಸರಸ್ವತೀ ತೀರದಲ್ಲಿ ರಾಜನ ಕಳೇಬರವನ್ನು ವಿಧ್ಯುಕ್ತ ಕರ್ಮಗಳೊಡನೆ ಸಂಸ್ಕರಿಸಿದರು. ಶ್ರೀಹರ್ಷನು ಅಣ್ಣನ ಬಳಿಗೆ ದೂತರನ್ನು ಕಳುಹಿಸಿ ಅವನ ಬರುವಿಕೆಯನ್ನೇ ಕಾಯುತ್ತಿದ್ದನು.

ಆಶ್ವಾಸ—ಆರು: ಒಂದು ಪಕ್ಷ ಕಳೆಯಿತು. ರಾಜ್ಯವರ್ಧನನು ಹೂಣರನ್ನು ನಿಗ್ರಹಿಸಿ ಹಿಂತಿರುಗಿದನು. ಸೋದರರಿಬ್ಬರೂ ತಾಯಿತಂದೆಗಳ ಮರಣಕ್ಕೆ ದುಃಖಿಸುತ್ತಿರಲು ರಾಜ್ಯವರ್ಧನನು ರಾಜ್ಯಾಡಳಿತದಲ್ಲಿ ಜಿಗುಪ್ಸೆ ತಳೆದು ವನವಾಸಿಯಾಗಲು ತೀರ್ಮಾನಿಸಿದನು. ಶ್ರೀಹರ್ಷನು ಅಣ್ಣನ ಈ ತೀರ್ಮಾನವನ್ನು ಕೇಳಿ ಅತಿಯಾಗಿ ದುಃಖಿಸಿ ವಿನಯೋಕ್ತಿಗಳಿಂದ ಅವನನ್ನು ಸಮಾಧಾನಗೊಳಿಸುತ್ತಿರುವ ಸಮಯದಲ್ಲೇ ತಂಗಿಯಾದ ರಾಜ್ಯಶ್ರೀಯ ಪರಿಚಾರಕನಾದ ಸಂವಾದಕನೆಂಬುವನು ಓಡಿಬಂದು ಕಣ್ಣೀರುಡುತ್ತಾ, “ಸ್ವಾಮಿಾ, ಪ್ರಭಾಕರವರ್ಧನನು ಮರಣವಾದುದನ್ನು ಕೇಳಿ ಮಾಳವರಾಜನು ಗ್ರಹವರ್ಮನನ್ನು ಕೊಂದು ರಾಜ್ಯಶ್ರೀ ದೇವಿಯನ್ನು

ಬಂಧನದಲ್ಲಿಟ್ಟಿರುವನೆಂದು ಹೇಳಿದನು. ತಂಗಿಯ ದುರವಸ್ಥೆ ಯನ್ನು ಕೇಳಿದ ಕೂಡಲೇ ರಾಜ್ಯವರ್ಧನನು ಮಾಳವ ಕುಲ ವನ್ನೇ ನಾಶಮಾಡುವೆನೆಂದು ಪ್ರತಿಜ್ಞೆಮಾಡಿಕೊಂಡು ಮಾಳವ ರಾಜನ ಮೇಲೆ ಯುದ್ಧಕ್ಕೆ ಸಿದ್ಧನಾದನು. ಅಂಗಲಾಚಿ ಬೇಡಿಕೊಂಡರೂ ಕೇಳದೆ ಹರ್ಷನನ್ನು ತಾನು ಬರುವವರೆಗೂ ರಾಜ್ಯಾಧಿಕಾರ ಮಾಡುತ್ತಿರುವುದೆಂದು ಆಜ್ಞಾಪಿಸಿ ತಾನೊ ಬ್ಬನೇ ಬೇಕಾದ ಸೈನ್ಯದೊಡನೆ ಪ್ರಯಾಣ ಬೆಳಸಿದನು. ಕೆಲವು ದಿನಗಳು ಕಳೆಯಿತು. ಒಂದು ದಿನ ರಾಜ್ಯವರ್ಧನನ ಆಪ್ತಭೃತ್ಯನಾದ ಕುಂತಳನೆಂಬುವನು ಹರ್ಷನ ಬಳಿಗೆ ಬಂದು ತಲೆಬಾಗಿ ಕಣ್ಣೀರಿಡುತ್ತಾ ಹೇಳಿದನು: "ಜೀಯಾ, ಮಾಳವ ರಾಜನನ್ನು ಅನಾಯಾಸದಿಂದ ಗೆದ್ದು ಜಯಶೀಲರಾದ ತಮ್ಮ ಅಣ್ಣಂದಿರನ್ನು ನೋಡಿ ಗೌಡರಾಜನು ಮೋಸದಿಂದ ಕರೆಯಿಸಿ ಕೊಂಡು ಏಕಾಂಗಿಯಾಗಿ ಶಸ್ತ್ರವಿಹೀನನಾಗಿದ್ದಾಗ ಕೊಂದು ಬಿಟ್ಟಿರುವನು. ಅಲ್ಲದೆ ಅವನು ಈ ರಾಜ್ಯದ ಮೇಲೂ ಕೈ ಮಾಡುವ ಸಾಹಸದಿಂದಿದ್ದಾನೆ". ಇದನ್ನು ಕೇಳಿದ ಹರ್ಷನು ಹಿರಿಯ ಅಣ್ಣನು ಮೃತನಾದುದಕ್ಕೆ ಚಿಂತಿಸಿ, ಅತ್ಯಂತ ಕುಪಿತ ನಾಗಿ ಮೂರುದಿನಗಳೊಳಗಾಗಿ ಆ ನರಾಧಮ ಗೌಡರಾಜ ನನ್ನು ಬಲಿಹಾಕುವುದಾಗಿಯೂ, ಇಲ್ಲದಿದ್ದರೆ ಅಗ್ನಿ ಪ್ರವೇಶ ಮಾಡುವುದಾಗಿಯೂ ನಿಷ್ಕರ್ಷಿಸಿ ಸೈನ್ಯ ಸಮೇತನಾಗಿ ಹೊರಡಲುನುವಾದನು. ಸ್ಕಂದಗುಪ್ತನೆಂಬ ಹೆಸರಿನ ಹಸ್ತಿ ಬಲಾಧ್ಯಕ್ಷನು ರಾಜಕುಮಾರನಿಗೆ ಕೆಲವು ಅಮೂಲ್ಯ ಸಲಹೆ ಗಳನ್ನಿತ್ತನು. ದುಷ್ಟಮಿತ್ರರಿಂಪೊದಗಬಹುದಾದ ಕೇಡುಗಳ ದೃಷ್ಟಾಂತಗಳನ್ನೂ ಕೊಟ್ಟನು.

ಆಶ್ವಾಸ—ಏಳು : ಕೆಲವು ದಿನಗಳನಂತರ ಹರ್ಷನು

ಮೂರ್ಧಾಭಿಷಿಕ್ತನಾಗಿ ಮಂಗಳ ದಿವಸದಲ್ಲಿ ಪೂಜೆಮಾಡಿ ದಿಗ್ವಿಜಯಕ್ಕಾಗಿ ಬಿಜಯಂಗೈದನು. ದಿನದ ಕೊನೆಗೆ ಅವನನ್ನು ಸಂದರ್ಶಿಸಲು ಹಂಸವೇಗನೆಂಬ ಪ್ರಾಗ್ಜ್ಯೋತಿಷ (ಅಸ್ಸಾಂ) ದೇಶದ ದೊರೆಯಾದ ಭಾಸ್ಕರವರ್ಮನ ರಾಯಭಾರಿಯೊಬ್ಬನು ಬಂದು ತನ್ನ ದೊರೆಯಿಂದ ಕಾಣಿಕೆಗಳನ್ನರ್ಪಿಸಿ ಸ್ನೇಹ ಮಾಡಿಕೊಂಡನು. ಆ ಕಾಣಿಕೆಗಳ ಗುಂಪಿನಲ್ಲಿ ಸಾಕ್ಷಾತ್ ವರುಣನಿಂದ ಕೊಡಲ್ಪಟ್ಟ ಛತ್ರಿಯೂ ಸೇರಿದ್ದಿತು. ಹರ್ಷನು ಸಂತುಷ್ಟನಾಗಿ ತನ್ನ ಕಡೆಯಿಂದಲೂ ಬಳುವಳಿಯನ್ನೂ ಕಳುಹಿಸಿದನು. ನಂತರ ಮುಂದೆ ನಡೆಯಲು ಸಿದ್ಧನಾಗುತ್ತಿರಲು ಪ್ರತೀಹಾರಿಯೋರ್ವನು ಬಂದು ನಮಸ್ಕರಿಸಿ, ಸ್ವಾಮಿಾ, ತಮ್ಮ ಆಪ್ತನಾದ 'ಭಂಡಿ' ಎಂಬುವನು ಮಾಳವ ರಾಜನನ್ನು ಕೊಂದು ಅವನ ಸರ್ವಸ್ವವನ್ನು ತೆಗೆದುಕೊಂಡು ಬಂದು ಹೊರಗಡೆ ಕಾದಿರುವನು" ಎಂದು ಹೇಳಿದನು. ಇದನ್ನು ಕೇಳಿ ಭಂಡಿಯನ್ನು ಒಳಗೆ ಕರೆಯಿಸಿಕೊಂಡು ಅವನಿಂದ ಸಕಲ ವಿದ್ಯಮಾನಗಳನ್ನರಿತು ತನ್ನ ಅಣ್ಣನ ಮರಣವಿಚಾರವನ್ನು ಮತ್ತೆ ಮತ್ತೆ ಕೇಳಿ ಗೋಳಿಡುತ್ತಾ, ತಂಗಿಯ ವಿಚಾರವನ್ನು ಕೇಳಿದನು. ಅದಕ್ಕೆ ಭಂಡಿಯು "ಆಯುಷ್ಮಂತನೇ, ರಾಜ್ಯವರ್ಧನನನ್ನು ಕೊಂದ ಗೌಡರಾಜನೂ ಕೊಲ್ಲಲ್ಪಟ್ಟನು. ಆ ಸಮಯದಲ್ಲಿ ಕಾರಾಗೃಹದಿಂದ ರಾಜ್ಯಶ್ರೀಯು ತಪ್ಪಿಸಿಕೊಂಡು ಎಲ್ಲೋ ವಿಂಧ್ಯಾಟವಿಯಲ್ಲಿ ಕಾಣದಾದಳು. ಅವಳನ್ನು ಹುಡುಕಿತರಬೇಕೆಂದು ಬಹಳ ಜನರನ್ನು ಕಳಿಸಿದೆನು. ಆದರೂ ಸಿಗಲಿಲ್ಲ". ಎಂದು ನಿವೇದಿಸಿಕೊಂಡನು. ಬಳಿಕ ಹರ್ಷನು ತಾನೇ ನಿರ್ಭಾಗ್ಯತಂಗಿ ರಾಜ್ಯಶ್ರೀಯನ್ನು ಹುಡುಕಿಕೊಂಡು ಬರುವುದಾಗಿ ಹೇಳಿ ಮಿತಪರಿವಾರದೊಡನೆ ವಿಂಧ್ಯಾಟವಿಯನ್ನು ಪ್ರವೇಶಿಸಿದನು.

ಆಶ್ವಾಸ—ಎಂಟು: ಅಲ್ಲಿ ಅವಳನ್ನು ಹುಡುಕುತ್ತಾ ವ್ಯಾಘ್ರಕೇತುವೆಂಬ ಶಬರನಾಯಕನನ್ನು ಸಂಧಿಸಿ ಅವನ ಮೈತ್ರಿಯನ್ನು ಸಂಪಾದಿಸಿದನು. ಅಲ್ಲಿಂದ ಮುಂದೆ ಗ್ರಹ ವರ್ಮನ ಬಾಲ್ಯಸ್ನೇಹಿತನೂ ಉದ್ದಾಮ ಪಂಡಿತನೂ, ಮಹಾಜ್ಞಾನಿಯೂ, ಬೌದ್ಧಮತಾವಲಂಬಿಯೂ ಆಗಿ, ಯೌವನದಲ್ಲೇ ಕಾಷಾಯ ಧರಿಸಿದ್ದ ದಿವಾಕರ ಮಿತ್ರನೆಂಬ ಬೌದ್ಧ ಸಂನ್ಯಾಸಿಯ ಆಶ್ರಮವನ್ನು ಪ್ರವೇಶಿಸಿ ಅವನನ್ನು ಸಂದರ್ಶಿಸಿ ತನ್ನ ದೌರ್ಭಾಗ್ಯದ ರೋದನದ ಕಥೆಯನ್ನು ಹೇಳಿದನು. ಅದೇ ಸಮಯಕ್ಕೆ ಯುವಕನೋರ್ವನು ಗಾಬರಿ ಯಿಂದ ಅಲ್ಲಿಗೆ ಓಡಿಬಂದು ಸರ್ವರ ಸಮಕ್ಷಮದಲ್ಲಿ, "ಸ್ವಾಮಿಾ, ಅಗೋ! ಆ ಸ್ಥಳದಲ್ಲಿ ಶೋಕಾಕುಲತೆಯಾದ ಯುವತಿ ಯೋರ್ವಳು ಅಗ್ನಿಪ್ರವೇಶವನ್ನು ಮಾಡುತ್ತಿರುವಳು; ಅವಳನ್ನು ಉಳಿಸುವ ಭಾರ ತಮ್ಮದಾಗಿರುವುದು" ಎಂದು ನುಡಿದನು. ಈ ಮಾತನ್ನು ಕೇಳಿ, ತನ್ನ ತಂಗಿಯೇ ಆಗಿರ ಬೇಕೆಂದು ನಿಶ್ಚಯಿಸಿ ಆಕುಲಿತ ಹೃದಯನಾಗಿ ದಿವಾಕರ ಮಿತ್ರನೊಡನೆ ಆ ಸ್ಥಳಕ್ಕೆ ಹೋಗಿ ಅಗ್ನಿಪತನೋನ್ಮುಖ ಳಾಗಿದ್ದ ತಂಗಿಯ ಕೈಯನ್ನು ಹಿಡಿದು ಅವಳನ್ನು ಸಂತೈಸಿದನು. ರಾಜ್ಯಶ್ರೀಯು ಸಂನ್ಯಾಸಿನಿಯಾಗಲು ನಿರ್ಧರಿಸಿದಳು. ಆದರೆ ಹರ್ಷನು ತಾನು ಶತ್ರು ನಿರ್ನಾಮ ಮಾಡಿಬರುವವರೆಗೂ ದಿವಾಕರಮಿತ್ರನ ಆಶ್ರಯದಲ್ಲೇ ಅವಳಿರಬೇಕೆಂದು ಒಡಂಬಡಿ ಸಿದನು. ಅನಂತರ ತಾನೂ ಸಂನ್ಯಾಸವನ್ನು ಜೊತೆಯಲ್ಲಿ ಸ್ವೀಕರಿಸುವುದಾಗಿಯೂ ಹೇಳಿದನು. ದಿವಾಕರ ಮಿತ್ರನೂ ಇದಕ್ಕೆ ಒಪ್ಪಿ ಹರ್ಷನಿಗೆ ಅಮೂಲ್ಯವಾದ ಪಾತಾಳದ "ಮಂದಾಕಿನೀ ಕಂಠ"ವೆಂಬ ಮಾಲೆಯನ್ನು ಕೊಟ್ಟನು.

ಅದನ್ನು ಪಡೆದು ಹರ್ಷನು ಗಂಗಾನದಿಯ ದಡದ ಮೇಲೆ ಬೀಡು ಬಿಟ್ಟಿದ್ದ ತನ್ನ ಪಾಳಯಕ್ಕೆ ಹಿಂತಿರುಗಿದನು. ಅಲ್ಲಿ ತಂಗಿಯು ದುಃಖದ ಕಥೆಯನ್ನು ಹೇಳುತ್ತಾ ಹರ್ಷನು ಆ ದಿನವನ್ನು ಕಳೆದನು. ಇಲ್ಲಿಗೆ ಬಾಣರಚಿತ ಹರ್ಷಚರಿತೆ ಕೊನೆಗೊಳ್ಳುತ್ತದೆ.

(೩-ಆ) ಕಾದಂಬರಿ

ಕಾದಂಬರಿಯಲ್ಲಿ ಪೂರ್ವಭಾಗವೆಂದೂ, ಉತ್ತರ ಭಾಗವೆಂದೂ ಎರಡು ಭಾಗಗಳಿರುವುವು. ಪೂರ್ವಭಾಗವು ಬಾಣ ಪ್ರಣೀತವಾದುದು. ಉತ್ತರಭಾಗವು ಬಾಣನ ಪುತ್ರನಿಂದ ರಚಿತವಾದುದು. ಬಾಣನು ಪೂರ್ವಾರ್ಧವನ್ನು ಬರೆದು ಕಾಲವಶನಾದನು. ಇದರ ಕೊನೆಯಲ್ಲಿ ಕಾದಂಬರಿಯ ಆರಂಭ ಭಾಷಣವು ಪೂರ್ತಿಯಾಗದೆ ಅಷ್ಟಕ್ಕೇ ನಿಂತು ಹೋಗಿದೆ. ಕಾದಂಬರಿಯನ್ನು ಬಾಣನೇ ಸಮಾಪ್ತಿಗೊಳಿಸಿದ್ದರೆ ಅದೆಷ್ಟು ರಮ್ಯವಾಗಿರುತ್ತಿತ್ತೋ! ಕಾದಂಬರಿಯ ಕಥಾಸಾರಂಶವನ್ನು ಇಲ್ಲಿ ಕೊಡಲಾಗಿದೆ:

ಮಾಳವ ದೇಶದ ರಾಜಧಾನಿಯಾದ ವಿದಿಶೆಯೆಂಬ ಪಟ್ಟಣದಲ್ಲಿ ಶೂದ್ರಕನೆಂಬ ರಾಜನು ರಾಜ್ಯಭಾರ ಮಾಡುತ್ತಿದ್ದನು. ಒಂದುದಿವಸ ಪ್ರಭಾತ ಸಮಯದಲ್ಲಿ ರಮಣೀಯಾಕೃತಿಯ ಒಬ್ಬ ಚಂಡಾಲ ಕನ್ಯೆ ರಾಜನ ಒಡ್ಡೋಲಗವನ್ನು ಪ್ರವೇಶಿಸಿದಳು. ಅವಳ ಸೌಂದರ್ಯ ಮಾಧುರ್ಯಾದಿಗಳು ರಾಜನನ್ನೇ ಸ್ತಂಭೀಭೂತನನ್ನಾಗಿ ಮಾಡಿದವು. ಸ್ವಲ್ಪ ಹೊತ್ತಿನಲ್ಲಿಯೇ ಅವಳು ರಾಜನಿಗೆ ಸಲ್ಲತಕ್ಕ ಅಮೂಲ್ಯ ರತ್ನವೆಂದು ಭಾವಿಸಿ ತಂದಿದ್ದ ಒಂದು ಮುದ್ದುಗಿಣಿಯನ್ನು ಕನಕಶಲಾನಿರ್ಮಿತ

ಪಂಜರ ಸಹಿತ ಮುಂದಿಟ್ಟು, ಆ ಗಿಣಿ ಸರ್ವಶಾಸ್ತ್ರಜ್ಞನೆಂದೂ, ಕವಿಯೆಂದೂ, ವಿಮರ್ಶಕನೆಂದೂ ವರ್ಣಿಸಿದಳು. ಆಗ ಆ ಗಿಣಿಯು ರಾಜನಿಗೆ ಜಯ ಶಬ್ದದಿಂದ ವಂದನೆಯನ್ನು ಮಾಡಿ—ಕೂಡಲೇ ಒಂದು "ಆರ್ಯೆ" ಯನ್ನು ರಚಿಸಿ ಅವನನ್ನು ಸ್ತುತಿಸಿತು. ಅದನ್ನು ಕೇಳಿ ರಾಜನು ಅತಿ ವಿಸ್ಮಿತನಾದನು. ಮತ್ತು ಅದರ ವೃತ್ತಾಂತವನ್ನು ಕೇಳಲು ಕುತೂಹಲವನ್ನು ವ್ಯಕ್ತಪಡಿಸಿದನು. ಸ್ನಾನ ಭೋಜನಾನಂತರ ಆ ಗಿಣಿ ತನ್ನ ಕಥೆಯನ್ನು ಹೇಳಲು ಉಪಕ್ರಮಿಸಿತು.

ಗಿಳಿಯು ಹೇಳಿದ ಕಥೆ:—ವಿಂಧ್ಯಾಟವಿಯಲ್ಲಿ ದಂಡಕಾರಣ್ಯವಿದೆ. ಅಲ್ಲಿ ಅಗಸ್ತ್ಯಾಶ್ರಮವಿದೆ. ಅದರ ಸಮೀಪವರ್ತಿಯಾದ ಪಂಪಾಸರೋವರದ ದಡದಲ್ಲಿ ಭೂತಾಕಾರದ ಜೀರ್ಣ ಬೂರಗದ ಮರವಿದೆ. ಅವಕಾಶವಿದ್ದುದರಿಂದಲೂ, ಅತ್ಯುನ್ನತವಾಗಿದ್ದುದರಿಂದಲೂ ಅದರ ಪೊಟರೆಗಳಲ್ಲಿ, ಕೊಂಬೆಗಳ ಸಂದು—ತೊಗಟೆಗಳಲ್ಲಿ ಧೈರ್ಯದಿಂದ ಗಿಣಿಯ ಹಿಂಡುಗಳು ವಾಸಮಾಡುತ್ತಿದ್ದವು. ಅಂಥಾ ಒಂದಾನೊಂದು ಪೊಟರೆಯೇ ನನ್ನ ವೃದ್ಧ ತಂದೆಯ ವಾಸಸ್ಥಾನವಾಗಿತ್ತು. ನನ್ನ ತಾಯಿಯೂ ವೃದ್ಧಳಾಗಿದ್ದಳು. ಆ ವೃದ್ಧ ಮಾತಾಪಿತೃಗಳಿಗೆ ನಾನೊಬ್ಬನೇ ಮಗ. ನನ್ನ ಜನ್ಮಕಾಲದಲ್ಲಿಯೇ ನನ್ನ ತಾಯಿ ಗತಿಸಿದಳು. ಆದರೆ ನನ್ನ ತಂದೆ ಅತ್ಯಂತ ಮಮತೆಯಿಂದ ನನ್ನನ್ನು ಕಾಪಾಡುತ್ತಾ ಬಂದನು. ಹೀಗಿರಲು ಒಂದಾನೊಂದು ದಿನ ಬೇಡರ ಸೈನ್ಯ ಬಂದು ಆ ಕಾಡನ್ನು ಮುತ್ತಿತು. ಅವರೆಲ್ಲರೂ ಯಮಭಟರಂತಿದ್ದರು. ಅವರು ಅಲ್ಲಿ ವಿಶ್ರಮಿಸಿಕೊಂಡು ತೆರಳಿದರು. ಆದರೆ ಅವರಲ್ಲಿ ಒಬ್ಬ ಮುದಿ ಬೇಡನು ಹಿಂದೆ ನಿಂತು ನಮ್ಮ ಮರವನ್ನು ನೋಡಿ

ದನು. ಕೂಡಲೇ ಮರವೇರಿ ಅಲ್ಲಿದ್ದ ಪಕ್ಷಿಗಳ ಮರಿಗಳನ್ನು ಹಣ್ಣುಗಳಂತೆ ಕಿತ್ತು, ಕತ್ತು ಮುರಿದು ಕೆಳಗೆಸೆಯಲಾರಂಭಿಸಿದನು. ನನ್ನ ತಂದೆ ತನ್ನ ಜೀರ್ಣ ಪಕ್ಷಗಳಿಂದ ನನ್ನನ್ನು ಅವಿತಿಟ್ಟುಕೊಂಡು ರೋದಿಸಿದನು. ಆ ಬೇಡನು ನನ್ನ ತಂದೆಯನ್ನೂ ಕೊಂದನು. ಆದರೆ ಅವನ ತೊಡೆಯ ಮಧ್ಯೆ ಭಯದಿಂದ ಸಂಕುಚಿತನಾಗಿದ್ದ ನನ್ನನ್ನು ನೋಡದೆ ನನ್ನ ತಂದೆಯೊಡನೆಯೇ ನನ್ನನ್ನೂ ಕೆಳಕ್ಕೆ ಎಸೆದನು. ದೈವವಶಾತ್ ತರಗೆಲೆಗಳ ರಾಶಿಯ ಮೇಲೆ ಬೀಳಲು ನಾನು ಅಂಗ ವಿಕಲನೂ ಆಗದೆ ಬದುಕಿದೆ. ಆದರೆ ಬಹುವಾದ ಬಾಯಾರಿಕೆಯಾಯಿತು. ಬಿಸಿಲಿನ ತಾಪ, ನಿಶ್ಶಕ್ತಿ ಮತ್ತು ಭಯಗಳಿಂದ ಸೊರಗಿಹೋದೆ. ಹೆಜ್ಜೆಮುಂದಿಟ್ಟರೆ ಕುಸಿದು ಬೀಳುತ್ತಿದ್ದೆ. ಮಧ್ಯಾಹ್ನವಾಯಿತು; ಜೀವಿತದ ಆಸೆ ಬಿಡಲೊಲ್ಲದು; ಇರಲೊಲ್ಲದು; ನನ್ನ ಸುದೈವದಿಂದ ಅದೇ ಮಾರ್ಗದಲ್ಲೇ ತರುಣರೊಡನೆ ಸ್ನಾನಕ್ಕಾಗಿ ತೆರಳಿದ್ದ ಜಾಬಾಲಿ ಮುನಿಕುಮಾರ ಹಾರೀತನು ನನ್ನನ್ನು ಕಂಡು ಕನಿಕರದಿಂದ ಜಲಸ್ಥಳಕ್ಕೆ ಒಯ್ದು ಶೈತ್ಯೋಪಚಾರಮಾಡಿ, ಅವನೇ ತನ್ನ ಕೈಯಿಂದ ನನ್ನ ತಪ್ತಗಂಟಲನ್ನು ನೆನಸಿ ನನಗೆ ಪುನರ್ಜೀವವನ್ನು ಕರುಣಿಸಿದನು. ಅನಂತರ ತನ್ನ ತಂದೆಯ ಆಶ್ರಮಕ್ಕೆ ಕರೆದೊಯ್ದನು. ಎಲ್ಲರೂ ಸುತ್ತಿಕಟ್ಟಿಕೊಂಡು ನೋಡಿ ಆಶ್ಚರ್ಯದಿಂದಿರಲು ಜಾಬಾಲಿ ಮಹರ್ಷಿಯು ಗಂಭೀರ ದೃಷ್ಟಿಯಿಂದ ನನ್ನನ್ನು ನೋಡಿ, ಏನೋ ಧ್ಯಾನಿಸಿ, ಸ್ನಿಗ್ಧ ಮಂದ್ರ ಧ್ವನಿಯಲ್ಲಿ, "ಈತನು ಪ್ರಾಕೃತ ಪಾಪಫಲವನ್ನು ಅನುಭವಿಸುತ್ತಿದ್ದಾನೆ—ಮೋಹದಿಂದ ಈ ಕೆಳಜಾತಿಯಲ್ಲಿ ಜನ್ಮಪಡೆದಿದ್ದಾನೆ." ಎಂದು ತಿಳಿಸಿ ಸುಮ್ಮನಾದನು. ಆಗ ಅಲ್ಲಿದ್ದ ಋಷಿಗಳು ನನ್ನ

ಪೂರ್ವಕಥೆ ಮತ್ತು ಮುಂದಿನ ಸ್ಥಿತಿಗಳನ್ನು ತಿಳಿಯಲು ಇಚ್ಛಿಸಿ ಋಷಿಯನ್ನು ಬೇಡಿಕೊಂಡರು. ಅನಂತರ ಜಾಬಾಲಿ ಮುನಿ ಹೇಳತೊಡಗಿದನು.

ಜಾಬಾಲಿ ಮಹರ್ಷಿಗಳು ಹೇಳಿದ ಕಥೆ :—ಅವಂತೀ ದೇಶದ ಉಜ್ಜಯನಿಯಲ್ಲಿ ತಾರಾಪೀಡನೆಂಬ ಅರಸನು ಶುಕನಾಸನೆಂಬ ಮಂತ್ರಿಯೊಡನೆ ಧರ್ಮದಿಂದ ರಾಜ್ಯಭಾರ ಮಾಡುತ್ತಿದ್ದನು. ಆತನ ರಾಣಿ ವಿಲಾಸವತಿ. ಸಮಸ್ತ ಸುಖ ಗಳನ್ನು ಅನುಭವಿಸುತ್ತಿದ್ದರೂ ರಾಜದಂಪತಿಗಳು ಸಂತಾನಸುಖ ವಿಲ್ಲದೆ ಕೊರಗುತ್ತಿದ್ದರು. ಪುತ್ರಾಪೇಕ್ಷಿಗಳಾಗಿ ಅನೇಕ ವ್ರತ ನಿಯಮೋಪಾಸನೆಗಳನ್ನು ಆಚರಿಸುತ್ತಿದ್ದರು. ಕೊನೆಗೆ ಪುತ್ರನ ಜನನವನ್ನು ಸೂಚಿಸುವ ಶುಭಕನಸನ್ನು ರಾಣಿಯು ಒಮ್ಮೆ ಕಂಡಳು. ಕೆಲಕಾಲಾನಂತರ ಗರ್ಭವನ್ನು ಧರಿಸಿದ ರಾಣಿಯು ಸಕಾಲದಲ್ಲಿ ಚಂದ್ರಾಪೀಡನೆಂಬ ಅನ್ವರ್ಥನಾಮದ ಪುತ್ರರತ್ನ ವನ್ನು ಪಡೆದಳು. ಅದೇ ದಿನವೇ ಶುಕನಾಸನ ಪತ್ನಿ ಮನೋ ರಮೆಯಲ್ಲಿಯೂ ವೈಶಂಪಾಯನನೆಂಬ ಪುತ್ರನು ಜನಿಸಿದನು. ಶೈಶವವು ಕಳೆಯಿತು. ಅವರಿಬ್ಬರೂ ಪ್ರಾಣಮಿತ್ರರಾದರು. ಇಬ್ಬರಿಗೂ ಜೊತೆಯಲ್ಲಿಯೇ ವಿದ್ಯಾಭ್ಯಾಸವಾಯಿತು.

ಹದಿನಾರು ವರ್ಷಗಳು ಕಳೆದವು. ಸಕಲಕಲಾ ಪಂಡಿತರೂ, ಸುಕುಮಾರ ಶರೀರರೂ ಆಗಿ ಅವರು ಬೆಳೆದರು. ಶಸ್ತ್ರ ಶಾಸ್ತ್ರ ಜ್ಞಾನದಿಂದಲೂ — ಗಾಂಭೀರ್ಯ ಮಾಧುರ್ಯಗಳಿಂದಲೂ ಕೂಡಿ ಪ್ರಾಪ್ತವಯಸ್ಕನಾಗಿದ್ದ ಚಂದ್ರಾಪೀಡನಿಗೆ ಯೌವ ರಾಜ್ಯಾಭಿಷೇಕವಾಯಿತು. ರಾಜನು ಇಂದ್ರಾಯುಧವೆಂಬ ಸಮುದ್ರದಲ್ಲಿ ಹುಟ್ಟಿದ ಒಂದು ದಿವ್ಯಾಶ್ವವನ್ನೂ, ರಾಣಿಯು ಶೀಲಾಚಾರ್ಯಸಂಪನ್ನಳಾದ, 'ಪತ್ರಲೇಖೆ' ಎಂಬ ರಾಜ

ಕುಮಾರಿಯೋರ್ವಳನ್ನೂ ಅವನ ಸೇವೆಗಾಗಿ ಕೊಟ್ಟರು. ಪತ್ರಲೇಖೆ ರಾಜಕುಮಾರನ ತಾಂಬೂಲಕರಂಕವಾಹಿನಿಯಾದಳು. ಹೀಗೆ ಕೆಲಕಾಲ ಕಳೆಯಿತು. ಆಗಿನ ಸಂಪ್ರದಾಯವನ್ನು ಅನುಸರಿಸಿ ಯುವರಾಜ ಚಂದ್ರಾಪೀಡನು ದಿಗ್ವಿಜಯಯಾತ್ರೆಯನ್ನು ಕೈಕೊಂಡನು. ವೈಶಂಪಾಯನನೂ ಜೊತೆಯಲ್ಲಿ ತೆರಳಿದನು.

ದಿಗ್ವಿಜಯಯಾತ್ರೆಯ ಅಂತಿಮಘಟ್ಟ; ಕೈಲಾಸ ಪರ್ವತದ ಬಳಿ ಪಾಳಯ ಬೀಡು ಬಿಟ್ಟಿತ್ತು. ಒಮ್ಮೆ ಸಂಜೆ ಆ ಕೈಲಾಸ ಪರ್ವತದ ಸೌಮ್ಯವೂ ರಮ್ಯವೂ ಆದ ಪ್ರಕೃತಿಯ ಸೌಭಾಗ್ಯವನ್ನು ಅನುಭವಿಸಿ ಆನಂದಿಸಬೇಕೆಂದು ಚಂದ್ರಾಪೀಡನು ಎಂದೂ ಅಗಲದಿದ್ದ ವೈಶಂಪಾಯನನ್ನು ಬಿಟ್ಟು, ಒಬ್ಬನೇ ತನ್ನ ಕುದುರೆಯನ್ನೇರಿ ಹೊರಟನು. ಅಲ್ಲಿ ವಿಚಿತ್ರವಾದ ಕಿನ್ನರ ಮಿಥುನವೊಂದನ್ನು ವೀಕ್ಷಿಸಿದನು. ಅವುಗಳ ಆಕಾರ ಹಾಗೂ ರೂಪು ಇವನನ್ನು ಬೆರಗುಗೊಳಿಸಿ ಕುತೂಹಲವನ್ನು ಹೆಚ್ಚಿಸಿತು. ಕೂಡಲೇ ಇಂದ್ರಾಯುಧವನ್ನು ಏರಿ ಅವುಗಳೆಡೆಗೆ ಹಾರಿದನು. ಆದರೆ ಕಿನ್ನರ ಮಿಥುನ ಓಡಿ ಓಡಿ ಕೊನೆಗೆ ಕಣ್ಮರೆಯಾಯಿತು. ಬೇಟೆಯ ಭರದಲ್ಲಿ ಕಾಣದಿದ್ದ ಕಾಲ ಮತ್ತು ದೂರ ಈಗ ಅನುಭವವಾಯಿತು. ಮಧ್ಯಾಹ್ನವಾಗಿದೆ: ದಾರಿತಿಳಿಯದೆ ಬಹುದೂರ ಬಂದಿದ್ದಾನೆ. ಕುದುರೆಯೂ ದಣಿದಿದೆ. ಅವನೂ ಬಳಲಿದ್ದಾನೆ. ಜಲಾಶಯವನ್ನು ಹುಡುಕಿ ಅಲ್ಲಿ ದಣಿವಾರಿಸಿಕೊಳ್ಳಬೇಕೆಂದು ನಿಶ್ಚಯಿಸಿ ನಡೆಯುತ್ತಿರಲು ಅಚ್ಛೋದ ಸರೋವರ ಸಿಕ್ಕಿತು. ಅಲ್ಲಿ ಕುದುರೆಗೆ ನೀರು ಕುಡಿಸಿ, ಕಡಿವಾಣ ಬಿಚ್ಚಿ, ಎಳೆಹುಲ್ಲು ತಿನ್ನಲುಬಿಟ್ಟು ತಾನೂ ನೀರು ಕುಡಿದು ವಿಶ್ರಮಿಸಿಕೊಳ್ಳುತ್ತಿರುವಾಗ ಆ ನಿರ್ಜನಾರಣ್ಯದಲ್ಲಿ ಎಲ್ಲಿಂದಲೊ

ದಿವ್ಯಗಾನವೊಂದು ಕೇಳಿಬಂತು. ಕುದುರೆಯೂ ಆಗಲೇ ತನ್ನ ಕಿವಿಯನ್ನು ನಿಮಿರೆಬ್ಬಿಸಿ ಆ ಮೋಹಕ ಧ್ವನಿಯನ್ನು ಕೇಳುತ್ತಿತ್ತು. ಆ ಧ್ವನಿಯನ್ನೇ ಹಿಂಬಾಲಿಸಿ ಹೋಗಲು ಅಲ್ಲಿ ಒಂದು ಆಶ್ಚರ್ಯವನ್ನು ಕಂಡನು. ಅಲ್ಲೊಂದು ಸಿದ್ಧಾಯತನ! ಅದರೊಳಗೆ ಸ್ವಚ್ಛಸ್ಫಟಿಕ ಚತುರ್ಮುಖ ಲಿಂಗ!! ಅಪೂರ್ವ ಸುಂದರಿಯೂ, ನವಯೌವನಶಾಲಿನಿಯೂ ತೇಜೋ ಲಾವಣ್ಯಮಯಿಯೂ ಆದ ತಾಪಸ ರೂಪಿಣಿಯೋರ್ವಳು ಆ ಲಿಂಗವನ್ನು ಅನನ್ಯ ಭಕ್ತಿಯಿಂದ ಪೂಜಿಗೈದು ವೀಣೆಯ ಅಲೌಕಿಕ ಇಂಪಿನೊಡನೆ ಬೆರೆತ ತನ್ನ ಧ್ವನಿಯಿಂದ ಗಾನ ಮಾಡುತ್ತಿದ್ದಳು!!! ಸ್ವಲ್ಪ ಹೊತ್ತು ಕಾದು—ಆಕೆ ಬಹಿರ್ಮುಖಳಾದ ಮೇಲೆ ಚಂದ್ರಾಪೀಡನು ನಮ್ರನಾಗಿ ಭಕ್ತಿ ಗೌರವ ಗಾಂಭೀರ್ಯಗಳಿಂದ ಅವಳನ್ನು ಸಂದರ್ಶಿಸಿದನು. ಅವಳ ಆದರಾತಿಥ್ಯ ಶೀಲಾದಿಗುಣಗಳಿಂದ ಧೈರ್ಯಗೊಂಡು ಮಾತನಾಡಿ ತನ್ನ ವೃತ್ತಾಂತವನ್ನು ಅರುಹಿ ಆಕೆಯ ವೃತ್ತಾಂತವನ್ನು ಕೇಳಿದನು. ಆಕೆಯ ಕಣ್ಣಿನಲ್ಲಿ ಧಾರಾಕಾರವಾಗಿ ನೀರುರುಳಿತು. ಆಳವಾದ ದುಃಖವನ್ನು ಹೇಗೋ ತಡೆದು ಗದ್ಗದ ಕಂಠದಿಂದ ತನ್ನ ಕಥೆಯನ್ನು ಹೇಳತೊಡಗಿದಳು.

ಮಹಾಶ್ವೇತೆಯ ಕಥೆ: ನಾನು ಹಂಸನೆಂಬ ಗಂಧರ್ವ ರಾಜನ, ಗೌರಿಯೆಂಬ ಅಪ್ಸರ ಸ್ತ್ರೀಯ ಏಕೈಕ ಪುತ್ರಿ. ನನ್ನ ಶುಭ್ರವರ್ಣದಿಂದಲೇ ನನಗೆ ಮಹಾಶ್ವೇತೆಯೆಂದು ನಾಮಕರಣವಾಯ್ತು. ಮಾತಾಪಿತೃಗಳು ಅತ್ಯಂತ ಪ್ರೀತಿಯಿಂದ ನನ್ನನ್ನು ಸಾಕಿದರು. ಯೌವನೋದಯವಾಯಿತು. ಒಮ್ಮೆ ವಸಂತ ಸಮಯದಲ್ಲಿ ನನ್ನ ತಾಯಿಯೊಡನೆ ಸ್ನಾನಕ್ಕಾಗಿ ಈ ಸರಸ್ಸಿಗೆ ಬಂದಾಗ ಒಬ್ಬ ಸುಂದರ ಮುನಿಕುಮಾರನನ್ನು

ಕಂಡೆ. ಅವನ ಸೌಂದರ್ಯ ನನ್ನನ್ನು ಮೋಹ ಪರವಶಳನ್ನಾಗಿ ಮಾಡಿತು. ನಮಸ್ಕಾರಮಾಡುವ ನೆಪದಿಂದ ಅವನ ಪಾದಗಳನ್ನು ಮುಟ್ಟಿ, ಅವನ ಮುಖವನ್ನೇ ನೋಡುತ್ತಾ ಏಳಲನುವಾದೆ. ಒಳಗೆ ವಿಕಾರ, ಹೊರಗೆ ನಮಸ್ಕಾರ! ಕಾಮವಿಕಾರಕ್ಕೊಳಗಾದ ನನ್ನನ್ನು ನೋಡಿ ಆ ಮುನಿಕುಮಾರನಲ್ಲೂ ಇಂದ್ರಿಯನಿಗ್ರಹ ಜಾರಿತು. ಯೌವನದ ಚಾಪಲ್ಯ ಮೂಡಿತು. ಕಾರಣ ಸಿಕ್ಕಿದುದರಿಂದ ಅವನ ಕಿವಿಯಲ್ಲಿ ಧರಿಸಿದ್ದ ಅಲೌಕಿಕ ಸುಗಂಧದಾಯಕವಾಗಿದ್ದ,ವನದೇವತೆಯ ಪ್ರಸಾದವಾಗಿ ತನಗೆ ಬಂದಿದ್ದ ಕುಸುಮ ಮಂಜರಿಯನ್ನು ನನ್ನ ಕಿವಿಯ ಮೇಲೆ ಶೃಂಗರಿಸಲನುವಾದನು. ಪ್ರಪ್ರಥಮ ಸ್ಪರ್ಶಸುಖದ ಸೌಭಾಗ್ಯ ಅವನನ್ನೂ ನನ್ನನ್ನೂ ಮೈಮರೆಯುವಂತೆ ಮಾಡಿತು. ಅವನ ಕರ ಕಂಪಿಸತೊಡಗಿ ಅಕ್ಷರಮಾಲೆ ಕೆಳಗೆ ಜಾರಿ ಬೀಳಲು ಕೂಡಲೇ ಅದನ್ನು ನಾನು ಕೊರಳಲ್ಲಿ ಹಾಕಿಕೊಂಡು, ಅವನ ಆಲಿಂಗನ ಸುಖವನ್ನೇ ಅನುಭವಿಸಿದಷ್ಟು ಆನಂದಪರವಶಳಾದೆ. ಅನಂತರ ಅವನು ಸ್ನೇಹಿತ ಕಪಿಂಜಲನಿಂದ ಗದರಿಸಲ್ಪಟ್ಟವನಾಗಿ ಅಕ್ಷರಮಾಲೆಯನ್ನು ಹಿಂದಕ್ಕೆ ಕೊಡು ಎಂದು ಕೇಳಲು ನಾನು ಅದರ ಬದಲು ನನ್ನ ಹಾರವನ್ನೇ ಕೊಟ್ಟೆನು. ಆಗ ಅವನು ಅದನ್ನು ಗಮನಿಸದೇ ತೆಗೆದುಕೊಂಡು ನನ್ನಲ್ಲೇ ಇಟ್ಟ ದೃಷ್ಟಿಯುಳ್ಳವನಾಗಿ ನಡೆದನು.

ಬಳಿಕ ನಾನು ಮನಸ್ಸಿಲ್ಲದೆ ಮನೆಗೆ ಹೋದೆ. ಸ್ವಲ್ಪ ಹೊತ್ತಿನಲ್ಲೇ ನನ್ನ ಸೇವಿಕೆಯಾದ ಮಕರಿಕೆ ಆ ಮುನಿಕುಮಾರನು ಕಳುಹಿಸಿದ ಪ್ರೇಮಪತ್ರ ಒಂದನ್ನು ತಂದುಕೊಟ್ಟಳು. ಕಷ್ಟದಿಂದ ಸಂಜೆಯುವರೆಗೂ ಕಾಲ ಕಳೆದೆ. ಸಂಜೆಯಲ್ಲಿ ಆ ಮುನಿಕುಮಾರನ ಗೆಳೆಯ ಕಪಿಂಜಲನು ಬಂದು ತನ್ನ ಸ್ನೇಹಿತನ

ಮದನಾವಸ್ಥೆಯನ್ನು ಮನಕರಗುವಂತೆ ವರ್ಣಿಸಿ ನನ್ನನ್ನು ಕೂಡಲೇ ಬರುವಂತೆ ಹೇಳಿ ತನ್ನ ಮಿತ್ರನ ಪ್ರಾಣದಾನ ಬೇಡಿದನು. ಆಗ ನನ್ನ ತಾಯಿಯು ಬರುವ ಸೂಚನೆ ಯಾಯಿತು. ತ್ವರಿತವಾಗಿ ಅವನನ್ನು ಕಳುಹಿಸಿ ನನ್ನ ತಾಯಿಯು ತೆರಳಿದ ನಂತರ ನನ್ನ ಸ್ನೇಹಿತೆ ತರಲಿಕೆಯೊಡನೆ ಮುನಿಕುಮಾರನು ಇದ್ದ ಸ್ಥಳಕ್ಕೆ ಬಂದೆನು. ಆದರೆ ದಾರಿಯಲ್ಲಿ ಅಪಶಕುನಗಳು ಕಂಡವು. ನನ್ನ ಬಲಗಣ್ಣು ಅದುರಿತು; ಹೃದಯ ನಡುಗಿತು. ಕಪಿಂಜಲನು ಅಳು ತ್ತಿದ್ದನು. ಎದೆಯೊಡೆದು ಆತನಲ್ಲಿಗೆ ಹೋಗುವುದರೊಳಗಾಗಿ "ಎಲವೋ ಪಾಪಿ, ಚಂದ್ರ, ನನ್ನಂತೆ ನೀನೂ ಪ್ರಿಯೆಯ ಸಮಾಗಮ ಕಾಲದಲ್ಲಿ ಸಾಯಿ" ಎಂಬ ಕಠೋರ ವಾಕ್ಯವು ಕೇಳಿಸಿತು. ಧಾವಿಸಿ, ಅಲ್ಲಿಯೇ ಸತ್ತು ಬಿದ್ದಿದ್ದ ಪುಂಡರೀಕನ ಮೇಲೆ ಬಿದ್ದು ಬಗೆ ಬಗೆಯಿಂದ ಪ್ರಲಾಪಿಸಿ ಇನ್ನೇಕೆ ಇರಬೇಕೆಂದು ಆಲೋಚಿಸುತ್ತಾ ಚಿತೆಯನ್ನು ಸಿದ್ಧಗೊಳಿಸಲು ಗೆಳತಿಗೆ ಹೇಳಿದೆನು. ಆಗ ಒಂದು ಅದ್ಭುತ ಪ್ರಸಂಗವು ನಡೆ ಯಿತು. "ವತ್ಸೆ, ಮಹಾಶ್ವೇತೆ, ಸಾಯುವ ಯೋಚನೆ ಮಾಡ ದಿರು. ನೀನು ಮತ್ತೆ ಈತನನ್ನು ಕೂಡುವೆ" ಎಂದು ಹೇಳಿ ಯಾವುದೋ ದಿವ್ಯ ಶರೀರವೊಂದು ಪುಂಡರೀಕನ ದೇಹವನ್ನು ಎತ್ತಿಕೊಂಡು ಹೋಯಿತು. ಕೂಡಲೇ ಕಪಿಂಜಲನು, "ನನ್ನ ಗೆಳೆಯನನ್ನು ಎಲ್ಲಿಗೆ ಎತ್ತಿಕೊಂಡು ಹೋಗುತ್ತೀ" ಎಂದು ಕೋಪಭ್ರಾಂತಿಪರವಶನಾಗಿ ಆಕಾಶಕ್ಕೆ ಅವನನ್ನು ಹಿಂಬಾ ಲಿಸಿ ನೆಗೆದನು. ತರಳಿಕೆ ನನ್ನನ್ನು ಸಮಾಧಾನ ಪಡಿಸಿದಳು. ಆ ಕೊಳದಲ್ಲಿ ಸ್ನಾನ ಮಾಡಿಸಿದಳು. ಆತನ ಮೇಲಣ ಪ್ರೀತಿ ಯಿಂದ ಆತನದೇ ಆದ ವಲ್ಕಲ—ಜಪಮಾಲೆ ಕಮಂಡಲು

ಗಳನ್ನು ಸ್ವೀಕರಿಸಿ ಆತನ ವೇಶವನ್ನೇ ತೊಟ್ಟು ತಪಶ್ಚರಣೆಯಲ್ಲಿದ್ದೇನೆ. ತಾಯಿತಂದೆಗಳನ್ನೂ ಬಂಧುವರ್ಗವನ್ನೂ ಬಿಟ್ಟು ಅನಾಥೆಯಂತೆ ಅವನ ಪುನರಾಗಮನವನ್ನೇ ನಿರೀಕ್ಷಿಸುತ್ತಿದ್ದೇನೆ—ಎಂದು ತಿಳಿಸಿ ಕಣ್ಣೀರಿಟ್ಟಳು. ಚಂದ್ರಾಪೀಡನು ಇವನ್ನೆಲ್ಲವನ್ನು ಕೇಳಿ, "ಗೆಳತಿಯಾದ ತರಳಿಕೆ ಎಲ್ಲಿ?" ಎಂದು ಪ್ರಶ್ನಿಸಿದನು. ಆಗ ಮಹಾಶ್ವೇತೆ, "ನನಗೆ ಕಾದಂಬರಿ ಎಂಬ ಪ್ರಿಯ ಸ್ನೇಹಿತೆಯೊಬ್ಬಳಿದ್ದಾಳೆ. ಅವಳು ಗಂಧರ್ವ ರಾಜನಾದ ಚಿತ್ರರಥ ಮತ್ತು ಅವನ ಪತ್ನಿ ಮದಿರಾದೇವಿಯ ಒಬ್ಬಳೇ ಮಗಳು. ಶೋಕಾಕುಲಿತೆಯಾದ ನನ್ನನ್ನು ನೋಡಿ ನನಗೆ ಪ್ರಿಯಸಮಾಗಮವಾಗುವವರೆಗೂ ತಾನೂ ಮದುವೆ ಮಾಡಿಕೊಳ್ಳುವುದಿಲ್ಲವೆಂದು ಹಟಹಿಡಿದಿದ್ದಾಳೆ. ಅದರಿಂದ ಅವಳ ಮಾತಾಪಿತೃಗಳು ದುಃಖಗೊಂಡಿದ್ದಾರೆ. ತಂದೆಯ ಮಾತಿನಂತೆ ನಡೆಯಬೇಕೆಂದು ಬುದ್ಧಿ ಹೇಳಿ ಬರಲು ತರಳಿಕೆಯನ್ನು ನೀವು ಬರುವ ಮುನ್ನ ಅಲ್ಲಿಗೆ ಕಳುಹಿಸಿದೆ" ಎಂದು ಹೇಳಿದಳು.

ಜಾಬಾಲಿಯು ಹೇಳಿದ ಮುಂದಿನ ಕಥೆ :

ಮಾರನೆಯ ದಿನ ಬೆಳಗ್ಗೆಯೇ ತರಳಿಕೆ ಹಿಂತಿರುಗಿದಳು. ಆದರೆ ಕಾದಂಬರಿಯು ದೃಢ ತೀರ್ಮಾನವನ್ನು ಕದಲಿಸಲಾಗದುದನ್ನೂ ತಿಳಿಸಿದಳು. ಆಗ ಮಹಾಶ್ವೇತೆಯೇ ಅಲ್ಲಿಗೆ ಹೋಗಲು ತೀರ್ಮಾನಿಸಿ ಚಂದ್ರಾಪೀಡನನ್ನೂ ಜೊತೆಯಲ್ಲಿ ಬರುವಂತೆ ನಮ್ರತೆಯಿಂದ ಪ್ರಾರ್ಥಿಸಿದಳು. ಸ್ವತಃ ದಾಕ್ಷಿಣ್ಯ ಪರವಶನಾದ ರಾಜಕುಮಾರನು ಅದಕ್ಕೆ ಒಪ್ಪಿ ತೆರಳಿದನು. ಹೇಮಕೂಟಕ್ಕೆ ಹೋದಾಗ ಕಾದಂಬರಿಯ ಪ್ರಥಮ

ದರ್ಶನದಲ್ಲಿಯೇ ಇಬ್ಬರಲ್ಲಿಯೂ ಪ್ರಣಯಾಂಕುರವಾಯಿತು. ಮಹಾಶ್ವೇತೆಯಿಂದ ಪರಿಚಯ ಸಂಪ್ರದಾಯಗಳು ನಡೆದವು. ಕಾದಂಬರಿಯೇ ತಾಂಬೂಲವನ್ನು ರಾಜಕುಮಾರನಿಗೆ ಕೊಟ್ಟು ಗೌರವಿಸಿದಳು. ಮಹಾರಾಜ ಚಿತ್ರರಥನು ಮಹಾಶ್ವೇತೆಯ ದರ್ಶನಕ್ಕೆ ಬರಲು—ಈ ಪ್ರಥಮ ಭೇಟಿಯು ಅಲ್ಲಿಗೇ ನಿಂತಿತು. ಆಗಲೇ ಕಾದಂಬರಿಯ ಮನವೆಲ್ಲವೂ ಆತನಿಗೆ ಸೂರೆಯಾಗಿ ಹೋಗಿತ್ತು. ಆ ರಾತ್ರಿ ಚಂದ್ರಾಪೀಡನೂ ಕಾದಂಬರಿಯೂ ಉಪ್ಪರಿಗೆಯ ಮೇಲೆ ನಿಂತು ಬೆಳ್ಳಿಯ ಬೆಳದಿಂಗಳ ಚೆಲುವಿನಲ್ಲಿ ಅಂಕುರಿಸಿದ್ದ ಪ್ರೇಮವನ್ನು ಬೆಳೆಸಿಕೊಂಡರು. ಕಾದಂಬರಿಯು ಕಳುಹಿಸಿದ್ದ ಶೇಷವೆಂಬ ಮುತ್ತಿನಹಾರವನ್ನು ಚಂದ್ರಾಪೀಡನು ಸ್ವೀಕರಿಸಿದನು. ಕೊನೆಗೆ ಕಾದಂಬರಿಯೇ ಮಿತಪರಿವಾರದೊಡನೆ ಬಂದು ಚಂದ್ರಾಪೀಡನೊಡನೆ ಕೆಲಕಾಲವಿದ್ದು ಸೌಜನ್ಯಪೂರ್ಣ ಸಂಸ್ಕೃತಿಯನ್ನು ತೋರಿ ಹಿಂತಿರುಗಿದಳು.

ಬೆಳಗಾಯಿತು. ಚಂಧ್ರಾಪೀಡನು ಹೊರಡಲೇಬೇಕಾಗಿದ್ದುದರಿಂದ ಮಹಾಶ್ವೇತೆ ಮತ್ತು ಕಾದಂಬರಿಯರ ಅಪ್ಪಣೆಬೇಡಿ ಅಚ್ಛೋದ ಸರೋವರದವರೆಗೆ ಪ್ರಯಾಣಮಾಡಿದನು. ಆ ವೇಳೆಗೆ ಅವನನ್ನು ಹುಡುಕುತ್ತಾ ಅವನ ಸೈನ್ಯವು ಅಲ್ಲಿಗೆ ಬಂದಿತ್ತು. ರಾತ್ರಿ ಕಳೆಯಿತು. ಬೆಳಗಾಗುತ್ತಿರುವಾಗಲೇ ಕೇಯೂರಕನೆಂಬುವನು ಬಂದು ಚಂದ್ರಾಪೀಡನು ಹೇಮಕೂಟದಲ್ಲಿಯೇ ಮರೆತು ಬಂದಿದ್ದ ಶೇಷಹಾರವನ್ನೂ ಮತ್ತಿತರ ಬಹುಮಾನವಸ್ತುಗಳನ್ನೂ ಕೊಟ್ಟು–ಕಾದಂಬರಿಯ ಹೃದಯದ ಮದನ ತಾಪವನ್ನು ವರ್ಣಿಸಿ ಕಾದಂಬರಿಯ ಅಪೇಕ್ಷೆಯಂತೆ ಪುನಃ ಚಂದ್ರಾಪೀಡನು ಹೇಮಕೂಟಕ್ಕೆ ಹೋಗುವಂತೆ ಮಾಡಿದನು. ಚಂದ್ರಾಪೀಡನು ಅಲ್ಲಿಗೆ ಪತ್ರಲೇಖೆಯೊಡನೆ ಹೋಗಿ

ಕಾದಂಬರಿಯನ್ನು ಭೇಟಿಮಾಡಿದನು. ಅವಳಿಷ್ಟದಂತೆ ಪತ್ರಲೇಖೆಯನ್ನು ಅಲ್ಲಿಯೇ ಬಿಟ್ಟು ಹಿಂತಿರುಗಿದನು. ಆ ವೇಳೆಗೆ ಮಾತಾಪಿತೃಗಳಿಂದ ಹಿಂತಿರುಗುವಂತೆ ಆದೇಶವೂ ಬಂದಿತ್ತು. ಆ ಸುದ್ದಿಯನ್ನು ಕಾದಂಬರಿಗೆ ಹೇಳಿಕಳುಹಿಸಿ ಪತ್ರಲೇಖೆಯನ್ನು ಕರೆತರಲು ಮೇಘನಾದನೆಂಬುವನನ್ನು ಅಲ್ಲಿಯೇ ಬಿಟ್ಟು, ತನ್ನ ಸೈನ್ಯವನ್ನು ನಿಧಾನವಾಗಿ ಕರೆತರಲು ವೈಶಂಪಾಯನನಿಗೆ ತಿಳಿಸಿ ತಾನು ಉಜ್ಜಯಿನಿಗೆ ಹೊರಟನು.

ಉಜ್ಜಯನಿಗೆ ಹಿಂತಿರುಗಿದುದು ತಾಯಿತಂದೆಗಳಿಗೆ ಸಂತೋಷವಾಯಿತು. ಆದರೆ ಚಂದ್ರಾಪೀಡನು ಸದಾ ಕಾದಂಬರಿಯನ್ನೇ ಚಿಂತಿಸುತ್ತಿದ್ದನು. ಕೆಲವು ದಿನಗಳನಂತರ ಪತ್ರಲೇಖೆಯು ಬಂದು ಕಾದಂಬರಿಯ ವಿರಹವೇದನೆಯನ್ನು ವರ್ಣಿಸಲು ಉದ್ವಿಗ್ನಚಿತ್ತನಾದನು.....ಇಲ್ಲಿಗೆ ಬಾಣನು ಬರೆದ ಕಥೆಯು ನಿಲ್ಲುತ್ತದೆ, ಮುಂದಿನ ಕಥೆ ಅವನ ಪುತ್ರ—ಭೂಷಣ ಬಾಣನ ಕೃತಿಯಾಗಿದೆ.

ಕಾದಂಬರೀ—ಉತ್ತರ ಭಾಗ

ಪತ್ರಲೇಖೆ ಮತ್ತು ಕೇಯೂರಕನಿಂದ ಕಾದಂಬರಿಯ ವಿರಹವರ್ಣನೆಯನ್ನು ಕೇಳಿದ ಚಂದ್ರಾಪೀಡನು ಅವಳನ್ನು ನೋಡಲು ತಾನೇ ಬರುವೆನೆಂದು ತಿಳಿಸಲು ಅವರಿಬ್ಬರನ್ನೂ ಕಾದಂಬರಿಯೆಡಗೆ ಕಳುಹಿಸಿದನು. ದಿನಗಳು ಉರುಳಿದವು. ಇತ್ತ ವೈಶಂಪಾಯನನ ಸುಳಿವೇ ಇಲ್ಲ. ಹಿಂತಿರುಗಿದ ಅವನ ಸೈನಿಕರು ವೈಶಂಪಾಯನನು ವಿಚಿತ್ರ ಸ್ಥಿತಿಯಲ್ಲಿದ್ದಾನೆಂದೂ ಅಲ್ಲಿಂದ ಹಿಂತಿರುಗಲು ಇಷ್ಟಪಡುತ್ತಿಲ್ಲವೆಂದೂ ತಿಳಿಸಿದರು.

ಅವನನ್ನು ಹಿಂದಕ್ಕೆ ಕರೆತರಲು ಚಂದ್ರಾಪೀಡನು ತಂದೆ ತಾಯಿಗಳ ಒಪ್ಪಿಗೆ ಪಡೆದು ಹೊರಟನು.

ಚಂದ್ರಾಪೀಡನು ಇಂದ್ರಾಯುಧವೇರಿ ಅವನನ್ನು ಅರಸುತ್ತಾ ಮಹಾಶ್ವೇತೆಯ ಆಶ್ರಮಕ್ಕೆ ಬಂದನು. ಅಲ್ಲಿ ಅವಳು ಕಣ್ಣೀರಿಡುತ್ತಾ ದುಃಖ ಸಂತಪ್ತಳಾಗಿ ಕುಳಿತಿದ್ದಳು. ಚಂದ್ರಾಪೀಡನು ಕಾದಂಬರಿಗೇನೋ ಅನಿಷ್ಟ ಪ್ರಾಪ್ತಿಯಾಗಿರಬೇಕೆಂದು ಊಹಿಸಿ ಕಾರಣವನ್ನು ಕೇಳಿದನು. ಆಕೆಯು ಹೇಳತೊಡಗಿದಳು:—ನೀವು ಉಜ್ಜಯಿನಿಗೆ ಹೋದ ಮೇಲೆ ನಾನು ಇಲ್ಲಿಗೆ ಹಿಂತಿರುಗಿ ಬಂದು ತಪಶ್ಚರ್ಯೆಯಲ್ಲಿರಲು ಬ್ರಾಹ್ಮಣ ಯುವಕನೊರ್ವನು ನನ್ನನ್ನು ನೋಡಿ ಅಸಮೀಚೀನ ಕಾಮಕ್ಕೆ ಬಲಿಯಾಗಿ ಪದೇ ಪದೇ ನನಗೆ ಆತಂಕವನ್ನುಂಟು ಮಾಡಿದನು. ಒಂದು ಬೆಳದಿಂಗಳ ರಾತ್ರಿ ಅವನು ಮೆಲ್ಲಗೆ ಬಂದು ಗಿಣಿಯಂತೆ ಪ್ರೇಮ ಮಾತುಗಳನ್ನುಪಕ್ರಮಿಸಿದ. ಕೋಪದಿಂದ ' ಗಿಣಿಯಾಗಿ ಹುಟ್ಟು ' ಎಂದು ಶಪಿಸಿದೆ. ಕೂಡಲೇ ಅವನು ಮೃತಿಹೊಂದಿ ಬಿದ್ದನು. ನಂತರ ಅವನು ನಿನ್ನ ಮಿತ್ರನೆಂದು ತಿಳಿಯಿತು."—ಇವನ್ನು ಕೇಳಿ ಚಂದ್ರಾಪೀಡನು ಎದೆಯೊಡೆದು ಕೆಳಕ್ಕೆ ಉರುಳಿದನು. ಮಹಾಶ್ವೇತೆಯೂ ಮೂರ್ಛೆಹೋದಳು. ತರಳಿಕೆ ರೋದಿಸತೊಡಗಿದಳು. ಇದೇ ವೇಳೆಗೆ ಚಂದ್ರಾಪೀಡನ ಆಗಮನವನ್ನು ತಿಳಿದು ಅಲ್ಲಿಗೆ ಬಂದ ಕಾದಂಬರಿ ಮತ್ತು ಪತ್ರಲೇಖೆಯರೂ ಮೂರ್ಛೆಹೊಂದಿದರು. ಪ್ರಜ್ಞೆ ಬಂದ ಮೇಲೆ ಕಾದಂಬರಿ ಪ್ರಾಣತ್ಯಾಗಕ್ಕೆ ಸನ್ನದ್ಧಳಾದಳು. ಪುನಃ ದಿವ್ಯಧ್ವನಿಯೊಂದು ಸಂತೈಸಿ ಮಾತನಾಡಿ ಅವರ ಭವಿಷ್ಯ ಸಮಾಗಮವನ್ನು ತಿಳಿಸಿತು. ಆ ದೇಹವನ್ನು ರಕ್ಷಿಸಬೇಕೆಂದೂ ಸೂಚಿಸಿತು. ಬಳಿಕ ಪತ್ರಲೇಖೆ ಮೂರ್ಛೆಯಿಂದೆದ್ದಳು.

ಕೂಡಲೇ ಇಂದ್ರಾಯುಧದ ಬಳಿಗೆ ಓಡಿ ಹೋಗಿ ಅದರೊಡನೆ ಅಚ್ಛೋದ ಸರಸ್ಸಿನಲ್ಲಿ ಧುಮುಕಿದಳು. ಇದೇನು ಆಶ್ಚರ್ಯವೆಂದು ನೋಡುವುದರೊಳಗೆ ಕಪಿಂಜಲನು ಎದ್ದುಬಂದು ಮಹಾಶ್ವೇತೆಗೆ ಹೀಗೆ ಹೇಳಿದನು. "ಪುಂಡರೀಕನು ಪ್ರಾಣ ಸಂಕಟದಲ್ಲಿದ್ದಾಗ ಹೆಮ್ಮೆಯಿಂದ ಮೆರೆಯುತ್ತಾ ನಗುತ್ತಿದ್ದಂತೆ ಕಂಡ ಚಂದ್ರನನ್ನು 'ನೀನು ಎರಡುಸಲ ಮನುಷ್ಯನಾಗಿ ಹುಟ್ಟು' ಎಂದು ಶಪಿಸಿದನು. ಆದರಿಂದ ಕುಪಿತನಾದ ಚಂದ್ರನು 'ನೀನೂ ನನ್ನೊಡನೆ ಸುಖದುಃಖದಲ್ಲಿ ಭಾಗಿಯಾಗು' ಎಂದು ಪ್ರತಿ ಶಾಪಕೊಟ್ಟನು. ಅನಂತರ ಅವನೇ ಪುಂಡರೀಕನ ಶರೀರವನ್ನು ಒಯ್ದು ಚಂದ್ರಲೋಕದಲ್ಲಿ ರಕ್ಷಿಸುತ್ತಿದ್ದನು. ಚಂದ್ರನು ನನ್ನನ್ನು ಕುರಿತು, 'ನೀನು ಹೋಗಿ ಶ್ವೇತಕೇತು ಮಹರ್ಷಿಗೆ ಆಯುಷ್ಕಾಮದಾನ ಹೋಮಗಳನ್ನು ಮಗನ ಪ್ರಾಣರಕ್ಷಣೆಗಾಗಿ ಮಾಡುವಂತೆ ತಿಳಿಸು' ಎಂದು ಹೇಳಿದನು. ಅಲ್ಲಿಂದ ಹಿಂತಿರುಗುತ್ತಿರುವಲ್ಲಿ ಅರಿಯದೆ ದೇವಲೋಕದ ವೈಮಾನಿಕನಿಗೆ ಕಾಲು ಸೋಕಿಸಿ ಓಡುತ್ತಿರಲು ಆತನು ಕೋಪಗೊಂಡು 'ಕುದುರೆಯ ಜನ್ಮವನ್ನು ತಾಳು' ಎಂದು ಶಪಿಸಿದನು. ಕುದುರೆಯಾದರೂ ನನ್ನ ಮಿತ್ರನ ಬಳಿ ಇರುವಂತೆ ಕರುಣಿಸಬೇಕೆಂದು ಆತನನ್ನು ಬೇಡಲು, ಅವನು ಒಪ್ಪಿ ಚಂದ್ರಾಪೀಡನ ಬಳಿ ಇಂದ್ರಾಯುಧವೆಂಬ ಹೆಸರಿನ ಅಶ್ವವಾಗುವಂತೆ ಹೇಳಿದನು. ಆದರಂತೆ ಕುದುರೆಯಾಗಿ ಚಂದ್ರಾಪೀಡನ ವಾಹನವಾದೆ. ಈಗ ವಾಹನತ್ವವು ಕಳೆಯಿತು. ಇನ್ನು ಶ್ವೇತಕೇತುಗಳ ಬಳಿಗೆ ಹೋಗುತ್ತಿದ್ದೇನೆ" ಎಂದು ಹೇಳಿ ಹೊರಟುಹೋದನು. ಆ ವೇಳೆಗೆ ಚಾರರಿಂದ ಮಕ್ಕಳ ವಿಚಾರ ತಿಳಿದು ತಾರಾಪೀಡ ಮತ್ತು ಶುಕನಾಸರು ಪತ್ನಿಪರಿವಾರದೊಡನೆ ಅಲ್ಲಿಗೆ ಬಂದರು.

ಹೀಗೆ ಪುಂಡರೀಕನು ಶ್ವೇತಕೇತುವಿಗೆ ಲಕ್ಷ್ಮಿಯಲ್ಲಿ ಮಗನಾಗಿ ಜನಿಸಿ ಕಾಮಪರವಶತೆಯ ಪರಿಣಾಮವಾಗಿ ದೇವತ್ವದಿಂದ ಚ್ಯುತನಾಗಿ ಶುಕನಾಸನಿಗೆ ವೈಶಂಪಾಯನನೆಂಬ ಹೆಸರಿನಿಂದ ಪುತ್ರನಾಗಿ ಮತ್ತೆ ಹುಟ್ಟಿ, ಪುನಃ ಕಾಮಿಯಾಗಿ ಮಹಾಶ್ವೇತೆಯ ಶಾಪದಿಂದ ಈ ಗಿಣಿಯಾದನು ಎಂದು ಜಾಬಾಲಿ ಋಷಿಯು ನುಡಿದನು.

ಗಿಣಿಯು ಹೇಳಿದ ಮುಂದಿನ ತನ್ನ ಕಥೆ

"ಆಗ ನನಗೆ ಜ್ಞಾನೋದಯವಾಯ್ತು. ನಾನು ಜಾಬಾಲಿಗಳನ್ನು ಕುರಿತು ಮತ್ತೆ ಮಹಾಶ್ವೇತೆಯ ಮೇಲೆ ನನ್ನ ಅನುರಾಗ ಹೆಚ್ಚುತ್ತಿದೆ. ಚಂದ್ರಾಪೀಡನೆಲ್ಲಿದ್ದಾನೆ?" ಎಂದು ಕೇಳಿದೆ. ಅವರು ಸ್ವಲ್ಪಕಾಲ ಸುಮ್ಮನಿರಲು ಸೂಚಿಸಿ ಹೊರಟುಹೋದರು. ಸ್ವಲ್ಪ ಹೊತ್ತಿನಲ್ಲೇ ನನ್ನ ಪೂರ್ವಜನ್ಮದ ಮಿತ್ರನಾದ ಕಪಿಂಜಲನು ಬಂದು ಪೂರ್ವ ವೃತ್ತಾಂತವನ್ನೆಲ್ಲಾ ಅರುಹಿ ನಾನು ಇನ್ನೂ ಅಲ್ಲೇ ಸ್ವಲ್ಪಕಾಲ ಇರಬೇಕೆಂದು ಹೇಳಿದನು. ಕೆಲಕಾಲಾನಂತರ ರೆಕ್ಕೆ ಬಲಿತು ಹಾರುವ ಶಕ್ತಿ ಬರಲು ಚಂದ್ರಾಪೀಡನ ಉತ್ಪತ್ತಿಯನ್ನು ತಿಳಿದ ನಾನು ಅವನಿದ್ದೆಡೆಗೆ ಹಾರಿದೆ. ಆದರೆ ಬಳಲಿಕೆಯಿಂದ ಒಂದು ವೃಕ್ಷದ ಮೇಲೆ ವಿಶ್ರಮಿಸಿಕೊಳ್ಳಲು ಮಲಗಿದೆ. ಪುನಃ ಎಚ್ಚತ್ತಾಗ ಬಲೆಗೆ ಸಿಕ್ಕಿಬಿದ್ದಿದ್ದೆ. ನನ್ನನ್ನು ಹಿಡಿದ ಚಂಡಾಲನು ನನ್ನನ್ನು ಒಬ್ಬ ಚಂಡಾಲ ಕನ್ಯೆಗೆ ಕೊಟ್ಟನು. ನನ್ನನ್ನು ಆಕೆ ಈ ಪಂಜರದಲ್ಲಿರಿಸಿ ಇಲ್ಲಿಗೆ ಕರೆತಂದಳು.

ನನ್ನ ಕಥೆ ಇಷ್ಟು ಎಂದು ಗಿಣಿ ತನ್ನ ಮಾತನ್ನು ಪೂರೈಸಿತು. ಈ ಮಾತನ್ನು ಕೇಳಿ ರಾಜನು ಚಂಡಾಲ ಕನ್ಯೆಯನ್ನು ಕರೆಸಲು

ಆಕೆ ಬಂದು ಶೂದ್ರಕನೇ ಚಂದ್ರಾಪೀಡನಾಗಿದ್ದವನು ಚಂದ್ರನೆಂದೂ ಈಗ ಜನ್ಮಾವಸಾನ ಕಾಲವೆಂದೂ, ಗಿಳಿಯೇ ವೈಶಂಪಾಯನನಾಗಿದ್ದ ಪುಂಡರೀಕನೆಂದೂ, ತಾನು ಸಾಕ್ಷಾತ್ ಲಕ್ಷ್ಮೀದೇವಿಯೆಂದೂ ಹೇಳಿ ಮಿಂಚಿನಂತೆ ಗಗನಕ್ಕೆ ಹಾರಿದಳು. ಈ ಮಾತುಗಳನ್ನು ಕೇಳಿ ರಾಜನು ಮೃತಿಹೊಂದುತ್ತಿದ್ದಂತೆಯೇ, ಕಾದಂಬರಿ ಮತ್ತು ಮಹಾಶ್ವೇತೆಯರ ಸಂರಕ್ಷಣೆಯಲ್ಲಿದ್ದ ಚಂದ್ರಾಪೀಡನ ಶರೀರವು ಕಾದಂಬರಿಯ ಕರಸ್ಪರ್ಶವಾದೊಡನೆಯೇ ಎದ್ದು ನಿಂತುಕೊಂಡು, "ಪ್ರಿಯೆ, ಇಗೋ ನಾನು ಈಗ ತಾನೆ ಶೂದ್ರಕರಾಜನ ಜನ್ಮವನ್ನು ತ್ಯಜಿಸಿ, ಪೂರ್ವರೂಪವನ್ನು ಹೊಂದಿ ಚಂದ್ರಾಪೀಡನಾಗಿ ಬಂದಿದ್ದೇನೆ. ಇನ್ನು ಶಾಪದ ಭಯವಿಲ್ಲ. ಇಲ್ಲಿಯೋ, ಚಂದ್ರಲೋಕದಲ್ಲಿಯೋ ನಮ್ಮ ಇಷ್ಟಬಂದಂತೆ ಜೊತೆಗೂಡಿ ಬಾಳೋಣ. ಇಷ್ಟರಲ್ಲಿಯೇ ಮಹಾಶ್ವೇತೆಯೂ ತನ್ನ ಪ್ರಿಯನನ್ನು ಪಡೆಯುವಳು" ಎಂದು ತಿಳಿಸುತ್ತಿದ್ದಂತೆಯೇ ಪುಂಡರೀಕನು ಗಿಣಿರೂಪದಿಂದ ಮುಕ್ತನಾಗಿ ಮೊದಲಿನ ಶರೀರವನ್ನು ಧರಿಸಿ ಇವರನ್ನು ಸೇರಿಕೊಂಡನು. ಕಪಿಂಜಲನು ಬಂದು ಶ್ವೇತಕೇತುವಿನ ಊರ್ಧ್ವಲೋಕ ಗಮನದ ವಿಚಾರವನ್ನು ತಿಳಿಸಿದನು. ತಮ್ಮ ಮಕ್ಕಳನ್ನು ಮತ್ತೆ ಪಡೆದ ತಾರಾಪೀಡ ವಿಲಾಸವತಿಯರು ಮತ್ತು ಶುಕನಾಸ ಮನೋರಮೆಯರು ಅತ್ಯಂತ ಹರ್ಷಗೊಂಡರು. ಆ ವೇಳೆಗೆ ಸರಿಯಾಗಿ ಹೇಮಕೂಟದಿಂದಲೂ ಕಾದಂಬರಿಯ ಮಾತಾಪಿತೃಗಳು ಆಗಮಿಸಿದರು. ಹೇಮಕೂಟದಲ್ಲಿ ವೈಭವಪೂರಿತವಾಗಿ ವಿವಾಹಗಳು ನೆರವೇರಿದವು. ನೂತನ ದಂಪತಿಗಳು ಅಲ್ಲಿಯೇ ಕೆಲವು ಕಾಲ ಕಳೆಯುತ್ತಿದ್ದರು. ಒಂದು ದಿನ ಕಾದಂಬರಿಯು ಪತ್ರಲೇಖೆಯ ವಿಚಾರ ಕೇಳಲು,

ಚಂದ್ರಾಪೀಡನು ಅವಳು ತನ್ನ ಪತ್ನಿ ರೋಹಿಣಿಯ ಗೆಳತಿಯೆಂದೂ, ತನಗಾಗಿ ಭೂಮಿಯಲ್ಲಿ ಅವತರಿಸಿದ್ದಳೆಂದೂ, ಈಗ ಚಂದ್ರಲೋಕದಲ್ಲಿರುವಳೆಂದೂ ತಿಳಿಸಿದನು. ಕೆಲಕಾಲಾನಂತರ ಚಂದ್ರಾಪೀಡನು ಅತ್ತೆಮಾವಂದಿರ ಅಪ್ಪಣೆ ಪಡೆದು ಉಜ್ಜಯನಿಗೆ ಬಂದನು. ಅಲ್ಲಿ ಪುಂಡರೀಕನನ್ನು ರಾಜನನ್ನಾಗಿಯೂ, ಮಹಾಶ್ವೇತೆಯನ್ನು ರಾಣಿಯನ್ನಾಗಿಯೂ ಮಾಡಿದನು. ತಾನು ಕೆಲಕಾಲ ಉಜ್ಜಯನಿಯಲ್ಲಿಯೂ, ಕೆಲಕಾಲ ಹೇಮಕೂಟದಲ್ಲಿಯೂ, ಮತ್ತೆ ಚಂದ್ರಲೋಕದಲ್ಲಿಯೂ ಇರುತ್ತಾ ಸುಖವಾಗಿ ಕಾಲಕಳೆಯುತ್ತಿದ್ದನು—ಇಲ್ಲಿಗೆ ಕಾದಂಬರಿಯ ಉತ್ತರ ಭಾಗದ ಕಥೆಯು ಸಮಾಪ್ತಿಯಾಗುತ್ತದೆ.

(ಇ) ಪಾರ್ವತೀ ಪರಿಣಯ ನಾಟಕ.

ಈ ನಾಟಕವನ್ನು ರಚಿಸಿರುವ ಬಾಣನು ಕಾದಂಬರಿ, ಹರ್ಷಚರಿತೆಗಳನ್ನು ರಚಿಸಿದ ಬಾಣಭಟ್ಟನೇ ಹೌದೋ ಅಲ್ಲವೋ ಎಂಬ ವಿಚಾರ ಇನ್ನೂ ತೀರ್ಮಾನವಾಗಿಲ್ಲ. ಪ್ರಸ್ತಾವನೆಯಲ್ಲಿ ಸೂತ್ರಧಾರನು ಈರೀತಿ ಹೇಳುತ್ತಾನೆ:

> ಅಸ್ತಿ ಕವಿಸಾರ್ವಭೌಮೋ ವತ್ಸಾನ್ವಯ ಜಲಧಿ (ಕೌಸ್ತುಭೋ) ಸಂಭವೋ ಬಾಣಃ ।
> ನೃತ್ಯತಿ ಯದ್ರಸನಾಯಾಂ ವೇಧೋಮುಖರಂಗಲಾಸಿಕಾ ವಾಣೀ॥
>
> (ಅಂಕ. ೧. ಶ್ಲೋಕ : ೪)

ಮತ್ತೆ ನಾಟಕವು ಮುಗಿದಮೇಲೆ,

"ಶ್ರೀ ಬಾಣಕೃತಂ ಪಾರ್ವತೀ ಪರಿಣಯ ನಾಟಕಂ ಸಂಪೂರ್ಣಮ್"

ಎಂಬ ಪರಿಸಮಾಪ್ತಿ ವಾಕ್ಯವೂ ಕೆಲವು ಹಸ್ತಪ್ರತಿಗಳಲ್ಲಿ ಕಂಡು ಬರುತ್ತದೆ. ಇಂತಹ ನಾಟಕವನ್ನು ಬಾಣನು ರಚಿಸಿರುವುದು ಅಸಂಭವನೀಯವೇನೂ ಅಲ್ಲ. ಇದರ ಕಥಾವಸ್ತುವು ಕುಮಾರ ಸಂಭವದ ವಸ್ತುವೇ ಆಗಿದೆ. ಅಲ್ಲದೆ ಇಲ್ಲಿನ ಕಥನ ಸಂವಿಧಾನ ಪದಬಂಧ ಮತ್ತು ಭಾವ ಪ್ರಕಾಶನವೂ ಕುಮಾರ ಸಂಭವವನ್ನೇ ಅನುಸರಿಸಿದೆ. ಇದು ಐದು ಅಂಕಗಳಿಂದ ಕೂಡಿದೆ: ಕಥೆಯ ಸಾರಾಂಶ ಈ ರೀತಿ ಇದೆ:—

ಮೊದಲನೆಯ ಅಂಕ: ನಾರದ ಮಹರ್ಷಿಗಳು ಹಿಮವಂತನಿಗೆ ಪಾರ್ವತಿಯು ಚಂದ್ರಶೇಖರನನ್ನು ಪತಿಯನ್ನಾಗಿ ಪಡೆಯುವಳೆಂದು ತಿಳಿಸಿ ಹಿಮವಂತನ ವರಾನ್ವೇಷಣೆಯ ದುಗುಡವನ್ನು ದೂರೀಕರಿಸುತ್ತಾನೆ. ಅಂತೆಯೇ ಮಗಳನ್ನು ತಪೋನಿರತನಾಗಿದ್ದ ಇಂದುಮೌಳಿಯ ಸೇವೆಗೆ ಕಳುಹಿಸಲು ಮೇನೆಯೊಡನೆ ಉಜ್ಜುಗಿಸುತ್ತಾನೆ.

ಎರಡನೆಯ ಅಂಕ: ಇತ್ತ ಪಾರ್ವತಿಯು ಮಹದೇವನನ್ನು ಸೇವಿಸಿ ಆರಾಧಿಸಲು ದಿನ ದಿನವೂ ಬರುತ್ತಾಳೆ. ಅತ್ತ ದೇವಲೋಕದಲ್ಲಿ ಇಂದ್ರನು ಬೃಹಸ್ಪತಿಯೊಡನೆ ದುಷ್ಟ ತಾರಕಾಸುರನ ನಿಗ್ರಹೋಪಾಯವನ್ನು ಚರ್ಚಿಸುತ್ತಾನೆ. ಬೃಹಸ್ಪತಿಯು, ಗಿರಿಜಾ ಗಿರೀಶರ ಪುತ್ರ ಸೇನಾನಿಯ ಜನ್ಮವಾಗಬೇಕಾಗಿರುವುದನ್ನು ಹಿಂದೆ ಬ್ರಹ್ಮನು ಹೇಳಿದ ಮಾತಿನಿಂದಲೇ ಜ್ಞಾಪಿಸುತ್ತಾನೆ. ಗಿರಿಜೆಯೂ ಶಂಭುವಿನ ಸೇವೆಯಲ್ಲೇ ಇರುವುದು ಇಂದ್ರನಿಗೆ ಪ್ರೋತ್ಸಾಹ ಕೊಟ್ಟಿತಾದರೂ, ಸುರಗುರುವು ರುದ್ರನ ತಪೋಭಂಗಕಾರ್ಯವನ್ನು ಎಚ್ಚರಿಕೆಯಿಂದಲೇ ಮಾಡಬೇಕೆಂದು ಸಲಹೆ ಕೊಡುತ್ತಾನೆ. ಇಂದ್ರನು ಮನ್ಮಥನನ್ನು ಆಹ್ವಾನಿಸಿ ಶಿವ—ಶಿವೆಯರ ಸಮಾಗಮ ಕಾರ್ಯದ

ಜವಾಬ್ದಾರಿಯನ್ನು ಅವನಿಗೆ ವಿಧಾಯಕ ಮಾಡುತ್ತಾನೆ. ಆಜ್ಞೆಯನ್ನು ಭಕ್ತಿಯಿಂದ ಶಿರಸಾವಹಿಸಿ, ಜಂಭದಿಂದಲೇ ಕಾಮನು ಸ್ಥಾಣ್ವಾಶ್ರಮಕ್ಕೆ ತೆರಳುತ್ತಾನೆ.

ಮೂರನೆಯ ಅಂಕ : ಇದನ್ನೆಲ್ಲವನ್ನೂ ನೋಡಲು ತೆರಳಿದ್ದ ನಾರದರಿಂದ — ಸ್ಥಾಣ್ವಾಶ್ರಮದಲ್ಲಿನ ವಸಂತಾವಿರ್ಭಾವದ ವರ್ಣನೆ. ಮನ್ಮಥನು ಸಮಯವನ್ನು ಕಾದು ತನ್ನ ಅಮೋಘ ಮೋಹನಾಸ್ತ್ರವನ್ನು ಈಶ್ವರನ ಕಡೆಗೆ ಬಿಡುತ್ತಾನೆ. ಕೊನೆಗೆ ತ್ರಿಣೇತ್ರನ ನಯನಾನಲದಿಂದ ಕಾಮನು ದಗ್ಧನಾಗುತ್ತಾನೆ. ರತಿಯು ಮೋಹಗೊಳ್ಳುತ್ತಾಳೆ. ದೈವವಾಣಿಯು ಅವಳನ್ನು ಸಂತೈಸಿ ಪತಿಯೊಡನೆ ಮತ್ತೆ ಅವಳ ಸಮಾಗಮದ ಭವಿಷ್ಯವನ್ನು ತಿಳಿಸುತ್ತದೆ. ಶಿವನು ಸ್ತ್ರೀ ಸನ್ನಿವೇಶವನ್ನೇ ತ್ಯಜಿಸಿ ತನ್ನ ಭೂತಗಣಗಳೊಂದಿಗೆ ಅಂತರ್ಧಾನನಾಗುತ್ತಾನೆ. ಗೌರಿಯು ನಿರಾಶೆಯಿಂದ ಮನೆಗೆ ಹಿಂತಿರುಗುತ್ತಾಳೆ.—ಈ ಎಲ್ಲ ವಿಷಯವೂ ಇಂದ್ರನಿಗೆ ನಾರದರಿಂದ ತಿಳಿಯುತ್ತಿರುವಾಗಲೇ ಅಲ್ಲಿಗೆ ಬಂದ ದೇವಗಣಿಕೆ ರಂಭೆಯು ಶಿವನನ್ನು ಒಲಿಸಿಕೊಳ್ಳಲು ಪಾರ್ವತಿಯು ಉಗ್ರತಪವನ್ನು ಕೈಗೊಂಡಿರುವಳೆಂದೂ ತಿಳಿಸುತ್ತಾಳೆ.

ನಾಲ್ಕನೆಯ ಅಂಕ : ಪಾರ್ವತಿಯ ಸಖಿಯಿಂದ ಪಾರ್ವತಿಯ ತಪಸ್ಸಿನ ಉದ್ದೇಶವನ್ನು ಅರಿತ ನಂದಿಯು ತನ್ನ ಸ್ವಾಮಿಯಾದ ಶಿವನಿಗೆ ಅದನ್ನು ವಿವರಿಸುತ್ತಾನೆ. ಆಗ ಶಂಕರನು ವಟುರೂಪವನ್ನು ಧರಿಸಿ ಪಾರ್ವತಿಯ ಆಶ್ರಮಕ್ಕೆ ತೆರಳಿ, ಅವಳಿತ್ತ ಆದರದ ಆತಿಥ್ಯವನ್ನು ಸ್ವೀಕರಿಸಿ, ಅವಳ ಮನಸ್ಸನ್ನು ಪರೀಕ್ಷಿಸಿ—ಕೊನೆಗೆ ಅವಳನ್ನು ಆನಂದದಿಂದ ಒಲಿಯುತ್ತಾನೆ.

ಐದನೆಯ ಅಂಕ : ಸಪ್ತರ್ಷಿಗಳೇ ಅರುಂಧತೀ ಸಮೇತರಾಗಿ ಬಂದು ಹಿಮವಂತನನ್ನು, ಶಂಕರನಿಗೆ ಪಾರ್ವತಿಯನ್ನು ಕೊಟ್ಟು ವಿವಾಹವನ್ನು ಬೆಳೆಸಬೇಕೆಂದು ಪ್ರಾರ್ಥಿಸುತ್ತಾರೆ. ಹಿಮವಂತನು ಮೇನಾದೇವಿಯ ಒಪ್ಪಿಗೆಯಿಂದ ಆ ಸಲಹೆಯನ್ನು ಅನುಮೋದಿಸುತ್ತಾನೆ. ಕೂಡಲೇ ಓಷಧಿಪ್ರಸ್ಥವು ವೈಭವದಿಂದ ಅಲಂಕೃತವಾಗುತ್ತದೆ. ವಿವಾಹದ ಶುಭದಿನ ಪಾರ್ವತಿಯು ವಧುವಿನ ವೇಷದಲ್ಲಿ ಕಂಗೊಳಿಸುತ್ತಾಳೆ. ಶಂಕರನೂ ವರನರೂಪದಲ್ಲಿ ಮೋಹನಾಕಾರನಾಗಿದ್ದಾನೆ. ಬೃಹಸ್ಪತಿಯೇ ಪೌರೋಹಿತ್ಯವನ್ನುವಹಿಸಿ ಅವರಿಬ್ಬರ ಪಾಣಿಗ್ರಹಣ ಮಾಡಿಸುತ್ತಾನೆ. ವಿವಾಹದ ನಂತರ ಜಗತ್ಪಿತೃಗಳೇ ಆದರೂ ಸಂಪ್ರದಾಯವನ್ನು ಅನುಸರಿಸಿ ಹಿರಿಯರಿಗೆಲ್ಲಾ ನಮಸ್ಕರಿಸುತ್ತಾರೆ. ಆಗ ಬ್ರಹ್ಮನು 'ಕುಮಾರಸ್ವಾಮಿ'ಯನ್ನು ಪಡೆಯುವಂತೆ ಆಶೀರ್ವದಿಸುತ್ತಾನೆ. ಆಗಲೇ ಮನ್ಮಥನೂ ಪೂರ್ವರೂಪ ತಳೆದು ರತಿ ಮತ್ತು ವಸಂತರೊಡನೆ ಅಲ್ಲಿಗೆ ಬರುತ್ತಾನೆ. ಎಲ್ಲರೂ ಹರ್ಷದಿಂದ ಸ್ವಸ್ಥಾನಗಳಿಗೆ ತೆರಳುತ್ತಾರೆ. ಬ್ರಹ್ಮನು ಹೇಳುವ ಭರತವಾಕ್ಯದಿಂದ ನಾಟಕವು ಸಮಾಪ್ತಿಗೊಳ್ಳುತ್ತದೆ.

ನಾಟಕದ ದೃಷ್ಟಿಯಿಂದಲೇ ಪರೀಕ್ಷಿಸಿದರೆ ಇಲ್ಲಿ ಹೆಚ್ಚಿನ ಕೌಶಲವೇನೂ ಕಾಣಬರುವುದಿಲ್ಲ. ಶೈಲಿಯೇನೋ ಸುಲಭವಾಗಿದೆ. ನಾರದನ ಪಾತ್ರ ಮುಖ್ಯವಾಗಿದೆ. ಪಾರ್ವತಿಯ ವಧು—ರೂಪವು ರಮ್ಯವಾಗಿ ವರ್ಣಿತವಾಗಿದೆ.

(ಈ) ಚಂಡೀಶತಕ.

ಇದು ಚಂಡೀ ಅಥವಾ ದುರ್ಗಾದೇವಿಯ ವರ್ಣನೆಯಾಗಿದೆ.

ಇದಕ್ಕೆ ಸಂಬಂಧಪಟ್ಟ ಒಂದು ದಂತ ಕಥೆಯಿದೆ. ಶ್ರೀಹರ್ಷನ ಆಸ್ಥಾನದಲ್ಲಿ ಕವಿಯಾಗಿದ್ದ ಮತ್ತು ಬಾಣಭಟ್ಟನ ಮಾವನೆಂದು ಹೇಳಲ್ಪಟ್ಟಿರುವ ಮಯೂರನು ಯಾವುದೋ ತೀವ್ರವಾದ ಒಂದು ವ್ಯಾಧಿಯಿಂದ ನರಳುತ್ತಿದ್ದನಂತೆ. ಅದರ ಪರಿಹಾರಾರ್ಥ ವಾಗಿ ಸೂರ್ಯದೇವನನ್ನು ನೂರು ಶ್ಲೋಕಗಳನ್ನು ರಚಿಸಿ ಸ್ತುತಿಸಿದನಂತೆ. ತತ್ಪರಿಣಾಮವಾಗಿ ಅವನು ಗುಣಕಂಡನಂತೆ. ಇದು ಬಾಣನಲ್ಲಿ ಕವಿತೆಯ ಮತ್ಸರವನ್ನು ಕೆರಳಿಸಿ—ಅವನೂ ಸ್ವಕವಿತಾ ಶಕ್ತಿಯನ್ನು ಪರೀಕ್ಷಿಸಲು ತನ್ನ ದೇಹದ ಅಂಗ ವೊಂದನ್ನು ಕತ್ತರಿಸಿಕೊಂಡು, ನೂರು ಶ್ಲೋಕಗಳಲ್ಲಿ ಚಂಡಿಯನ್ನು ಸ್ತುತಿಸಿ ಅವಳ ಅನುಗ್ರಹದಿಂದ ಆ ಅಂಗವನ್ನು ಮತ್ತೆ ಪಡೆದುಕೊಂಡನಂತೆ. ಇದರ ಸತ್ಯವೆಷ್ಟೋ ತಿಳಿಯದು. ಆದರೆ ಸುಕವಿತೆಗೆ ಯಾವುದು ತಾನೆ ಅಸಾಧ್ಯ ? ಚಂಡೀಶತಕದ ಕಥಾಭಾಗವು ಮಾರ್ಕಂಡೇಯ ಪುರಾಣದ ದೇವೀಮಹಾತ್ಮ್ಯೆಗೆ ಸೇರಿದುದು. ಚಂಡಿಯು ಮಹಿಷಾಸುರನನ್ನು ಸಂಹರಿಸಿ ದೇವತೆ ಗಳಿಗೆ ರಕ್ಷಣೆಕೊಟ್ಟ ಮಹಾಮಾತೆ. ಚಂಡೀಶತಕವು ಆ ಭಾಗವನ್ನು ವರ್ಣಿಸುತ್ತದೆ. ಸುಮಾರು ಅರವತ್ತು ಶ್ಲೋಕಗಳಲ್ಲಿ ಚಂಡಿಯು ಮಹಿಷಾಸುರನನ್ನು ಪಾದಾಘಾತದಲ್ಲಿ ಅದು ಮಿಟ್ಟಿದ್ದುದೇ ವರ್ಣಿತವಾಗಿದೆ. ೨೫, ೪೫, ೫೪ನೇ ಶ್ಲೋಕಗಳು ಯೋಗಮಾಯೆ ಅಥವಾ ಕಾಳಿಯನ್ನು ಕೊಲ್ಲಲೆತ್ನಿಸಿದ ಕಂಸನ ವಿಚಾರವನ್ನು ತಿಳಿಸುತ್ತವೆ. ಈಶ್ವರನು ಕಾಮದಹನವನ್ನು ಕೈಗೊಂಡಾಗ ಆದ ಪಾರ್ವತಿಯ ನಿರಾಶೆಗಾಗಿ ಚಂಡಿಯ ಕ್ಷಮಾಯಾಚನೆಯು ೪೬ ನೇ ಶ್ಲೋಕದಲ್ಲಿ ವರ್ಣಿತವಾಗಿದೆ. ಈ ಕೃತಿಯಲ್ಲಿನ ಮುಖ್ಯರಸಗಳೆಂದರೆ, ರೌದ್ರ, ಅದ್ಭುತ, ಭಯಾನಕ, ವೀರ ಮತ್ತು ಬೀಭತ್ಸ. ಉದಾಹರಣೆಗಾಗಿ ಆಯ್ದ ಕೆಲವು ಶ್ಲೋಕಗಳನ್ನು ಪರಿಶಿಷ್ಟದಲ್ಲಿ ಕೊಟ್ಟಿದೆ.

೪. ಗದ್ಯಕಾವ್ಯ ವಿಮರ್ಶೆ

(ಅ) ಹರ್ಷಚರಿತೆ : ಇದು ಚಾರಿತ್ರಕ ಗ್ರಂಥ. ಹರ್ಷ ಸಾರ್ವಭೌಮನ ಶೌರ್ಯ ಔದಾರ್ಯಗಳನ್ನೂ, ಬಂಧುಜನ ಪ್ರೀತಿಯನ್ನೂ ವರ್ಣಿಸುತ್ತದೆ. ಇಂತಹ ಚಾರಿತ್ರಕ ಕೃತಿಯಲ್ಲಿ ಕವಿಯ ಕಲ್ಪನಾ ಸಾಮರ್ಥ್ಯಕ್ಕೆ ಅಷ್ಟು ಅವಕಾಶವಿರುವುದಿಲ್ಲ. ಘಟನೆಗಳೂ, ಸನ್ನಿವೇಶಗಳೂ, ಚಾರಿತ್ರಕ ಸತ್ಯದ ಪರಿಮಿತಿಯಲ್ಲಿರಬೇಕಾಗುತ್ತದೆ. ಆದರೂ ಎಲ್ಲೆಲ್ಲಿ ಅವಕಾಶವಿದೆಯೋ ಅಲ್ಲೆಲ್ಲಾ ಕವಿಯು ತನ್ನ ಸ್ವಪ್ರತಿಭೆ, ಕಲ್ಪನೆಗಳಿಂದ ಚರಿತ್ರೆಯ ಪರಿಮಿತಿಯನ್ನು ಮೀರಿ ಕಾವ್ಯಾಂಶವನ್ನು ಸೃಷ್ಟಿಸಿ ಕೃತಿಯ ಸೊಬಗನ್ನು ಹೆಚ್ಚಿಸಿದ್ದಾನೆ. ಹಾಗಿಲ್ಲದಿದ್ದರೆ ಈ ಕೃತಿ ಚಾರಿತ್ರಕ ಘಟನೆಗಳು ಅವುಗಳು ನಡೆದ ಕಾಲ ಸನ್ನಿವೇಶಗಳ ಒಂದು ನೀರಸ ಪಟ್ಟಿಯಾಗುತ್ತಿತ್ತು. ಇಲ್ಲಿನ ವರ್ಣನೆಗಳೂ, ಅನುಭವಗಳೂ ಮನೋಜ್ಞವಾಗಿದ್ದು ಓದುಗರಿಗೆ ಕಾವ್ಯಾನುಭವವನ್ನು ತರಬಲ್ಲುವಾಗಿವೆ. ಇಲ್ಲಿ ಕಥೆಯೇನೋ ಹೆಚ್ಚಿನ ಸ್ಥಾನಗಳಿಸಿಲ್ಲ. ವರ್ಣನೆಯೇ ಪ್ರಧಾನವಾಗಿದೆ.

ರಸೋತ್ಕರ್ಷತೆಯ ದೃಷ್ಟಿಯಿಂದಲೇ ನೋಡಿದರೆ ಈ ಕೃತಿ ಗಣನೀಯವಾಗಲಾರದು. ಶೃಂಗಾರ ರಸವನ್ನು ಆಸ್ವಾದಿಸಬೇಕೆನ್ನುವವರಿಗಂತೂ ಇದರಲ್ಲಿ ಅವಕಾಶವೇ ಇಲ್ಲ. ವೀರರಸ ಮಾತ್ರ ಅಲ್ಲಲ್ಲಿ ಕಂಡುಬರುತ್ತದೆ. ಕರುಣಾರಸವೇ ಇಲ್ಲಿನ ಪ್ರಧಾನರಸ.

ಹರ್ಷಚರಿತೆಯಲ್ಲಿ ಬರುವ ವರ್ಣನೆಗಳಲ್ಲಿ ಮುಖ್ಯವಾದುವು : ಶ್ರೀಕಂಠರಾಜ್ಯವೈಭವ ವರ್ಣನೆ, ಪಟ್ಟದ ಕುದುರೆಯ ವರ್ಣನೆ, ರಾಣಿ ಯಶೋಮತಿದೇವಿಯ ವರ್ಣನೆ, ರಾಜ್ಯವರ್ಧ

ನನು ಹರ್ಷನಿಗೆ ಮಾಡಿದ ಉಪದೇಶ ವರ್ಣನೆ, ವಿಂಧ್ಯಾಟವೀ ವರ್ಣನೆ ಮತ್ತು ದಿವಾಕರ ಮಿತ್ರನ ಆಶ್ರಮದ ವರ್ಣನೆಗಳು. ಇವುಗಳಲ್ಲಿ ಪ್ರತಿಯೊಂದೂ ಪೂರ್ಣವಾಗಿದ್ದು ಬಾಣನ ವರ್ಣನಾ ಸಾಮರ್ಥ್ಯವನ್ನು, ಕಲ್ಪನೆಯ ಉನ್ನತ ಕೌಶಲವನ್ನೂ, ಪದಬಂಧ ಪ್ರೌಢಿಮೆಯನ್ನೂ ತೋರಿಸಲು ಶಕ್ತವಾಗಿದೆ.

ಚರಿತ್ರೆಯ ವಿದ್ಯಾರ್ಥಿಗಳಿಗೆ ಈ ಕೃತಿಯ ಉಪಯೋಗ ಬಹುಗಣನೀಯವಾಗಿದೆ. ಹರ್ಷನ ಕಾಲದ ಚರಿತ್ರೆಯ ನಿರ್ಮಾಣದಲ್ಲಿ ಇದು ಪ್ರಧಾನವಾದ ಸಹಾಯಕೃತಿ. ಇದರ ಆರಂಭದಲ್ಲಿ ಬಾಣನು ತನಗಿಂತ ಹಿಂದೆ ಇದ್ದು ಕೀರ್ತಿಗಳಿಸಿದ್ದ ಕೆಲವು ಕವಿಗಳನ್ನು ಸ್ಮರಣೆಮಾಡಿದ್ದಾನೆ. ಆದುದರಿಂದ ಅವರ ಕಾಲನಿರ್ಣಯಕ್ಕೆ ಇದೊಂದು ಮೈಲಿಗಲ್ಲು. ರಸೋತ್ಕರ್ಷತೆಯಲ್ಲಿ, ವರ್ಣನೆಯ ಪ್ರೌಢಿಮೆಯಲ್ಲಿ, ಕಲ್ಪನಾ ಸೃಷ್ಟಿಯ ಗುಣದಲ್ಲಿ, ಕಥನಾ ಕೌಶಲದಲ್ಲಿ ಈ ಕೃತಿ ಕಾದಂಬರಿಗಿಂತ ಬಹು ಹಿಂದಿದೆ. ಆದರೂ ಗದ್ಯಕಾವ್ಯ ಶ್ರೇಣಿಯಲ್ಲಿ ತನ್ನದೇ ಆದ ಒಂದು ಉಜ್ವಲಕಾಂತಿಯಿಂದ ತಲೆ ಎತ್ತಿ ನಿಲ್ಲುವುವರಲ್ಲಿ ಸಂದೇಹವಿಲ್ಲ.

(ಆ) ಪಾತ್ರ ಪರಿಚಯ

ಬಾಣನು ಪಾತ್ರ ಸೃಷ್ಟಿಯಲ್ಲಿಯೂ, ಬೆಳವಣಿಗೆಯಲ್ಲಿಯೂ ಒಂದು ಅನ್ಯಾದೃಶ ಸಾಮರ್ಥ್ಯ ಪಡೆದಿದ್ದಾನೆ. ಹರ್ಷಚರಿತೆಯಲ್ಲಿ ಕವಿಯ ಶಕ್ತಿ ಅಷ್ಟು ಆಕರ್ಷಣೀಯವಾಗಿ ಕಂಡುಬಂದಿಲ್ಲ. ಆದರೂ ಓದುಗರ ಹೃದಯದಲ್ಲಿ ಪ್ರತಿಯೊಂದು ಪಾತ್ರವೂ ಚಿರಂತನವಾಗಿ ನಿಲ್ಲುವುದರಲ್ಲಿ ಸಂಶಯವಿಲ್ಲ. ಹರ್ಷ

ಚರಿತೆಯು ಒಂದು ಸಂಸಾರದಲ್ಲಿರಬೇಕಾದ, ಮಾತಾಪಿತೃ ಭಕ್ತಿ, ಪುತ್ರವಾತ್ಸಲ್ಯ, ಸಹೋದರಪ್ರೇಮವೇ ಮುಂತಾದ ಪವಿತ್ರಬಾಂಧವ್ಯ ವಿಶೇಷಗಳನ್ನು ಪ್ರತಿಪಾದಿಸುವ ಒಂದು ಮಹೋನ್ನತ ಕೃತಿ. ಈ ದೃಷ್ಟಿಯಿಂದ ಈ ಕೃತಿ ನಮ್ಮ ಹಿಂದೂಸಂಸ್ಕೃತಿಯ ಒಂದು ಕೈಗನ್ನಡಿ. ಮುಖ್ಯವಾದ ಕೆಲವು ಪಾತ್ರಗಳ ವಿಮರ್ಶೆ ಈ ಮಾತಿನ ಯಥಾರ್ಥವನ್ನು ಪ್ರಕಾಶಪಡಿಸುತ್ತದೆ.

ಶ್ರೀಹರ್ಷ : ಶ್ರೀಹರ್ಷದೇವನ ಸಮಸ್ತ ವೈಭವಗಳನ್ನು ಪೂರ್ಣವಾಗಿ ವರ್ಣಿಸಲು ತಾನು ಅಶಕ್ತನೆಂದೂ, ಆದುದರಿಂದ ಸ್ವಲ್ಪ ಭಾಗವನ್ನು ಮಾತ್ರ ವಿವರಿಸುವುದಾಗಿಯೂ ಬಾಣನೇ ಹರ್ಷಚರಿತೆಯ ೩ನೆಯ ಆಶ್ವಾಸದಲ್ಲಿ ತಿಳಿಸಿದ್ದಾನೆ. ಆ ವಾಕ್ಯವು ಹರ್ಷನ ಜೀವಿತದ ಹಿರಿಮೆಗೆ ಒಂದು ಸೂಕ್ಷ್ಮವಾದ ಸೂಚನೆಯಂತಿದೆ. "ನಹೀಶ್ವರ ವ್ಯಾಹೃತಯಃ ಕದಾಚಿತ್ಪುಷ್ಯಂತಿ ಲೋಕೇ ವಿಪರೀತಮರ್ಥಂ" ಎಂಬ ಮಾತು ಕಾಳಿದಾಸನದು; ಅದನ್ನೇ ಬಾಣನು ಪಾರ್ವತೀ ಪರಿಣಯ ನಾಟಕದಲ್ಲಿಯೂ ಸುಲಭಮಾಡಿ, "ನಹೀಶ್ವರಾಣಾಂ ವ್ಯಾಹೃತಯೋ ವ್ಯಭಿಚರಂತಿ" ("ದೇವತೆಗಳ ವಾಕ್ಯ ಎಂದಿಗೂ ಸುಳ್ಳಾಗದು")—ಎಂದು ಹೇಳಿದ್ದಾನೆ. ಹರ್ಷನ ಪೂರ್ವಿಕನಾದ ಪುಷ್ಪಭೂಪತಿಗೆ ಲಕ್ಷ್ಮೀದೇವಿಯು ಆ ವಂಶಕ್ಕೇ ತಿಲಕ ಪ್ರಾಯನಾಗಿ ಹರ್ಷನೆಂಬುವನು ಜನ್ಮ ತಾಳುವನೆಂದು ಭರವಸೆ ಕೊಟ್ಟಿದ್ದಳು. ಅದು ಯಥಾರ್ಥವಾಯಿತು.

ಹರ್ಷನು ಶ್ರೇಷ್ಠ ಕ್ಷತ್ರಿಯ ದಂಪತಿಗಳಾದ ಪ್ರಭಾಕರವರ್ಧನ ಮತ್ತು ಯಶೋಮತಿ ಇವರ ಪುತ್ರ. ಇವನಿಗೆ ರಾಜ್ಯವರ್ಧನ

ನೆಂಬ ಅಣ್ಣನೂ, ರಾಜ್ಯಶ್ರೀ ಎಂಬ ತಂಗಿಯೂ ಇದ್ದರು. ತಂದೆಯ ಕ್ಷಾತ್ರ ಧರ್ಮವೂ, ಪ್ರಜಾನುರಾಗವೂ, ತಾಯಿಯ ದೈವಭಕ್ತಿ, ಧರ್ಮಶ್ರದ್ಧೆಗಳೂ ಹರ್ಷನಿಗೆ ಆದರ್ಶವಾದವು. ಅಣ್ಣ ರಾಜ್ಯವರ್ಧನನ ಅಭಿಮಾನವಂತೂ ಅನ್ಯಾದೃಶ ವಾದುದು. ಜೊತೆಗೆ ಮುದ್ದು ತಂಗಿ ರಾಜ್ಯಶ್ರೀ. ಈ ಸಂಸಾರ ದಲ್ಲಿ ಹರ್ಷನು ಮಮತೆ ವಾತ್ಸಲ್ಯಗಳಿಂದ ಸುತ್ತುವರಿಯಲ್ಪಟ್ಟು ಆ ಗುಣಗಳಿಗೆ ಸತ್ಪಾತ್ರನೂ ಆದನು. ಹರ್ಷನು ಅಣ್ಣನಿಗಿಂತ ವಯಸ್ಸಿನಲ್ಲಿ ಬಹು ಕಿರಿಯನೇನೂ ಅಲ್ಲ. ಆದರೂ ರಾಜ್ಯ ವರ್ಧನನು ಕ್ಲೇಶಕರವಾದ ಯಾವ ಕಾರ್ಯಕ್ಕೂ ತಾನೇ ಮುನ್ನುಗ್ಗಿ ಹರ್ಷನಲ್ಲಿ ವಾತ್ಸಲ್ಯ ತೋರುತ್ತಿದ್ದನು. ಆದರೆ ಜನ್ಮಸಹಜವಾದ ಕ್ಷಾತ್ರತೇಜಸ್ಸು, ಪರಾಕ್ರಮ ಹರ್ಷ ನಲ್ಲಿತ್ತು. ಜೊತೆಗೆ ಶಸ್ತ್ರಶಾಸ್ತ್ರಗಳಲ್ಲಿ ಪಾಂಡಿತ್ಯವಿತ್ತು. ಇದರಿಂದಲೇ ರಾಜ್ಯವರ್ಧನನು—"ನೀನಿನ್ನೂ ಹುಡುಗ, ಮನೆಯಲ್ಲಿಯೇ ಇರು," ಎಂದು ಹೇಳಿದರೂ ಬಲವಂತದಿಂದ ಅವನನ್ನು ಒಲಿಸಿಕೊಂಡು ಅವನೊಡನೆ ಉತ್ತರದಿಕ್ಕಿನ ವಿಜಯಯಾತ್ರೆಯಲ್ಲಿ ಸೇರಿದನು. ಒಂದು ದಿನವೂ ಅಣ್ಣನನ್ನು ಬಿಟ್ಟಿರಲಾರ. ಆದರೆ ವಿಜಯಯಾತ್ರೆಯ ಕೊನೆಯ ಘಟ್ಟದಲ್ಲಿ ಅಣ್ಣನ ವಾತ್ಸಲ್ಯಕ್ಕೆ ಸಿಕ್ಕಿ ಅವನ ಆಸೆಯಂತೆ ಹಿಂದುಳಿಯ ಬೇಕಾಯಿತು.

ತಂದೆ ಪ್ರಭಾಕರವರ್ಧನನ ಮರಣವೂ, ತಾಯಿ ಯಶೋ ಮತಿಯ ಅಗ್ನಿಪ್ರವೇಶವೂ ಅವನ ಹೃದಯವನ್ನೇ ಕರಗಿಸಿದುವು. ಈ ಶೋಕವರ್ಣನೆಯು ಕರುಣರಸಕ್ಕೆ ಒಂದು ಶ್ರೇಷ್ಠ ದೃಷ್ಟಾಂತ ವಾಗಿರುವಂತೆಯೇ ಹರ್ಷನ ಮಾತಾಪಿತೃಭಕ್ತಿಗೂ ಉದಾ ಹರಣೆಯಾಗಿದೆ. ಹರ್ಷನ ಭ್ರಾತೃಪ್ರೇಮ ನಿಷ್ಕಲ್ಮಷವಾದುದು.

ಆದುದರಿಂದಲೇ ಅಣ್ಣನು ರಾಜ್ಯವನ್ನು ಒಲ್ಲೆನೆಂದು ಹೇಳಿದರೂ ಅವನನ್ನು ವಿನಯದಿಂದ ಒಪ್ಪುವಂತೆ ಮಾಡಲೆತ್ನಿಸಿದುದು. ಮುಂದೆ ತನ್ನ ಅಣ್ಣನ ಅಕಾಲ ಮರಣವನ್ನೂ, ತಂಗಿಯ ಕಷ್ಟಸ್ಥಿತಿಯನ್ನೂ ಅರಿತಾಗ ಅವನ ಕ್ಷಾತ್ರರಕ್ತ ಕುದಿದೆದ್ದಿತು. ತನ್ನ ಅಣ್ಣನ ಮರಣಕ್ಕೆ ಕಾರಣನಾದ ಕೃತ್ರಿಮಿ ಗೌಡರಾಜನ ತಲೆ ಚೆಂಡಾಡಲು ಉಗ್ರ ಪ್ರತಿಜ್ಞೆಯನ್ನು ಕೈಗೊಂಡು ಅತುಲ ಬಲದೊಡನೆ ಯುದ್ಧಕ್ಕೆ ನಡೆದನು. ಈ ವಿಜಯಯಾತ್ರೆಯು ಹರ್ಷನ ಶಕ್ತಿ ಸಾಮರ್ಥ್ಯಗಳನ್ನು ಚೆನ್ನಾಗಿ ವರ್ಣಿಸುತ್ತದೆ. ಹರ್ಷನ ಸಹೋದರಿ ರಾಜ್ಯಶ್ರೀಯ ಕರುಣಾಜನಕ ಸ್ಥಿತಿಯನ್ನು ಕಣ್ಣಾರೆ ಕಂಡಾಗ ಅವನು ಕರಗಿಹೋದನು. ಅವನಲ್ಲಿ ಆಗಲೇ ವೈರಾಗ್ಯೋದಯವಾಗಿತ್ತು.

ಇದು ಹರ್ಷನ ಪಾತ್ರದಲ್ಲಿನ ಒಂದು ಭಾಗ; ಹರ್ಷನು ಚಕ್ರವರ್ತಿಯಾಗಿ ಅತುಲ ವೀರ್ಯ ಪರಾಕ್ರಮಗಳ ಮೂರ್ತಿಯಾಗಿದ್ದಂತೆಯೇ, ಕಲೋಪಾಸಕನೂ ಆಗಿದ್ದನು. ಅನೇಕ ಕವಿಗಳಿಗೆ ಆಶ್ರಯದಾತನಾಗಿದ್ದುದಲ್ಲದೆ ತಾನು ಕವಿಯೂ, ವಿಮರ್ಶಕನೂ ಆಗಿದ್ದನು. ಬಾಣನು ಚಿತ್ರಿಸಿರುವ ಅವನ ಜೀವನದಲ್ಲಿ ಶೃಂಗಾರ ರಸ ಪ್ರಧಾನವಾದ ಅಂಶವೇನೂ ಕಂಡು ಬರುವುದಿಲ್ಲ. ಆದರೆ ಹರ್ಷನು ರಚಿಸಿರುವ ನಾಟಕಗಳು ಶೃಂಗಾರ ರಸಕ್ಕೆ ಪ್ರಧಾನವಾಗಿವೆ. ಹರ್ಷನ ಪ್ರಾಪಂಚಿಕ ಜ್ಞಾನ ಅಗಾಧವಾದುದು. ವ್ಯಕ್ತಿಗಳ ಶಕ್ತಿ ಸಾಮರ್ಥ್ಯವನ್ನು ಸುಲಭವಾಗಿ ಅರಿತು ಅದಕ್ಕೆ ಸನ್ಮಾನ ಮಾಡುವ ಉದಾರ ಹೃದಯ ಅವನದಾಗಿತ್ತು. ಹರ್ಷಚರಿತೆಯಲ್ಲಿಯೂ, ಬೇರೆ ಇತಿಹಾಸ ಗ್ರಂಥಗಳಲ್ಲಿಯೂ, ಅವನಿಗೆ ದೊರೆತಿರುವ ಹಿರಿಯ ಸ್ಥಾನಕ್ಕೆ ನಿಜವಾಗಿಯೂ ಅವನು ಪಾತ್ರನೆಂಬುವುದರಲ್ಲಿ

ಸಂಶಯವಿಲ್ಲ. ಏಕೆಂದರೆ ಅವನು ಗುಣಗಳ ಗಣಿ; ಗುಣಿಗಳ ಆಶ್ರಯಿ; ವಿಶ್ವದಾಶ್ರಯಸ್ಥಾನ, ವಿದ್ಯಾಭಂಡಾರ.

ರಾಜ್ಯವರ್ಧನ: ರಾಜ್ಯವರ್ಧನನು ಪ್ರಭಾಕರವರ್ಧನ ಮತ್ತು ಯಶೋಮತಿಯರ ಜ್ಯೇಷ್ಠ ಪುತ್ರ. ಕವಿಯ ಗಮನವೆಲ್ಲಾ ಹರ್ಷವರ್ಧನನ ಹಿರಿಮೆಯ ವರ್ಣನೆಕಡೆ ಸೆಳದಿದ್ದಿತಾದರೂ, ರಾಜ್ಯವರ್ಧನನ ಮಾತಾಪಿತೃಭಕ್ತಿಯೂ, ಭ್ರಾತೃ ಭಗಿನೀ ವಾತ್ಸಲ್ಯವೂ ಹೃದಯಂಗಮವಾಗಿ ನಿರೂಪಿತವಾಗಿವೆ. ಹರ್ಷನನ್ನು ಕಂಡರೆ ರಾಜ್ಯವರ್ಧನನಿಗೆ ಪ್ರಾಣ. ಕ್ಲೇಶಕರವಾದ ಯಾವ ಕೆಲಸಕ್ಕೂ ತಾನೇ ಮುಂದೆನುಗ್ಗಿ ಅಣ್ಣನ ಜವಾಬ್ದಾರಿಯನ್ನು ನಿರ್ವಹಿಸುವುದು ಅವನ ಸ್ವಭಾವ. ಉತ್ತರ ದೇಶದ ಕಡೆ ದಿಗ್ವಿಜಯ ಯಾತ್ರೆಯನ್ನು ಕೈಕೊಂಡಾಗ ತನ್ನ ನಿಜ ಪ್ರತಾಪವನ್ನು ರಾಜರುಗಳಿಗೆ ತೋರಿಸಿದ್ದನು. ತಾಯಿ ತಂದೆಗಳ ಮರಣ ವಾರ್ತೆ ಅವನನ್ನು ವೈರಾಗ್ಯದೆಡೆಗೆ ಸೆಳೆಯಿತು. ಹಿರಿಯನಾಗಿದ್ದು ರಾಜ್ಯಕ್ಕೆ ಕ್ರಮವಾಗಿ ಬಂದ ಉತ್ತರಾಧಿಕಾರಿಯಾದರೂ, ರಾಜ್ಯ ತನಗೆ ಬೇಡವೆಂನೂ ತಾನು ಅರಣ್ಯದಲ್ಲಿನ ಶಾಂತಿ ಜೀವನವನ್ನ ರಸುವದಾಗಿಯೂ, ತಿಳಿಸಿದ. ಇದರಲ್ಲಿ ಯಾವ ಹೇಡಿತನವೂ ಇಲ್ಲ. ಏಕೆಂದರೆ ಸಮಸ್ತ ರಾಜರುಗಳನ್ನು ಗೆದ್ದು ವಿಜಯ ಪತಾಕೆ ಏರಿಸಿ ಅದೇ ತಾನೆ ಹಿಂತಿರುಗಿದ್ದನು. ಆದುದರಿಂದಲೇ ಅವನು ಹರ್ಷನನ್ನು ರಾಜನಾಗಲು ಒಪ್ಪಿಸಲಿಚ್ಛಿಸಿದನು. ರಾಜ್ಯಲೋಭದಿಂದ ರಕ್ತಪಾತವಾಗಿ ತಂದೆ–ಮಕ್ಕಳ; ಅಣ್ಣ–ತಮ್ಮಂದಿರ ಬಾಂಧವ್ಯ ಮಣ್ಣುಪಾಲಾದ ಉದಾಹರಣೆಗಳು ಇತಿಹಾಸದ ಪುಟಗಳಲ್ಲಿ ಅನೇಕವಿರಬಹುದು. ಆದರೆ ಹರ್ಷವರ್ಧನ–ರಾಜ್ಯವರ್ಧನರ ತ್ಯಾಗಬುದ್ಧಿಯು ಭಾರತದ ಇತಿಹಾಸಕ್ಕೆ ಶ್ರೇಷ್ಠ ಉದಾಹರಣೆಯಾಗಿ ಪ್ರಕಾಶಗೊಂಡಿದೆ.

ರಾಜ್ಯವರ್ಧನನು ರಣವೀರನೇನೋ ಅಹುದು; ಆದರೆ ಕೃತ್ರಿಮವನ್ನು ಅರಿಯಬಲ್ಲ ರಾಜಕಾರಿಣಿಯಲ್ಲ. ಆದುದರಿಂದಲೇ ಗೌಡರಾಜನ ಕೃತ್ರಿಮವನ್ನರಿಯಲಾರದೆ ಪ್ರಾಣಾರ್ಪಣೆ ಮಾಡಿದುದು. ಅವನ ಜೀವಿತದ ಕಾಲ ಕಡಿಮೆ; ಅದರೆ ಗುಣಗಳ ದೃಷ್ಟಿಯಿಂದ ಮಹತ್ವ ಪೂರ್ಣವಾದುದು. ಒಟ್ಟಿನಲ್ಲಿ ಅವನು ಶೌರ್ಯ ತ್ಯಾಗಗಳ ಮೂರ್ತಿ; ಭ್ರಾತೃ ಭಗಿನೀ ವಾತ್ಸಲ್ಯದ ಸಾಕಾರ ರೂಪ.

(ಇ) ಕಾದಂಬರಿ

ಕಾದಂಬರಿಕಥೆಯು ಬಾಣಕವಿಯ ಸ್ವಂತಸೃಷ್ಟಿಯೇನಲ್ಲ. ಅದರ ಮೂಲವು ಗುಣಾಢ್ಯನ ಬೃಹತ್ಕಥೆಯಾಗಿರಬಹುದು. ಬೃಹತ್ಕಥೆ ಈಗ ದೊರೆತಿಲ್ಲ. ಅದು ಪೈಶಾಚೀಭಾಷೆಯಲ್ಲಿದ್ದಿತೆಂದು ತಿಳಿದುಬಂದಿದೆ. ರಾಮಾಯಣ ಮಹಾಭಾರತ ಮತ್ತು ಪುರಾಣಗಳಂತೆ ಅದೂ ಸಹ ಅನೇಕ ಕವಿಗಳಿಗೆ ಕಥಾವಸ್ತುವನ್ನೊದಗಿಸಿದೆ. ಅಲ್ಲಿ ಬರುವ ಸುಮನಸನ ಕಥಾಭಾಗದ ಅಂಶವನ್ನು ಬಾಣನು ತನ್ನ ಕಾದಂಬರಿಗೆ ಅಳವಡಿಸಿಕೊಂಡಿರಬಹುದು. ಅಂದಮಾತ್ರಕ್ಕೆ ಬಾಣನ ಹಿರಿಮೆಗೆ ಯಾವ ಕುಂದುಕವೂ ಇಲ್ಲ. ಸಾಧಾರಣವಾಗಿ ಪ್ರಖ್ಯಾತ ಕವಿಗಳೆಲ್ಲಾ ಅವರು ಯಾವ ದೇಶದವರೇ ಇರಲಿ-ಕಥಾವಸ್ತುವನ್ನು ಸ್ವಂತವಾಗಿ ಸೃಷ್ಟಿಸುವ ಯತ್ನವನ್ನು ಮಾಡಿಯೇ ಇಲ್ಲ. ಅದರಿಂದ ಅವರಿಗೆ ದೊರಕಿರುವ ಹಿರಿಮೆ ಅವರ ಕಥೆಯ ಮೂಲ ಆಕರಗಳಿಗೆ ಸೇರಲಾರದು. ಅದನ್ನು ಅಳವಡಿಸಿ, ಬದಲಾಯಿಸಿ, ಬಣ್ಣಕಟ್ಟಿ, ಬೆಳಸಿ ಹೇಳುವ ಅವರ ಕಥನ ಕೌಶಲ, ಪಾತ್ರ ರಚನಾವೈಖರಿ, ಪದಬಂಧಪ್ರೌಢಿಮೆ, ರಸೋತ್ಕರ್ಷತೆ

ಮುಂತಾದ ಕಲಾ ನೈಪುಣ್ಯಕ್ಕೇ ಸೇರಿದುದು ಆ ಹಿರಿಮೆ. ಬಾಣಭಟ್ಟನ ಕಾದಂಬರಿಯೂ ಅಷ್ಟೆ. ಅದು ಜೀವಕಳೆಯಿಂದ ರಂಜಿಸುತ್ತಿರುವುದು ಮೂಲಕಥೆಯ ಕಾರಣದಿಂದಲ್ಲ, ಬಾಣನ ಕವಿತಾ ಸಂಜೀವಿನಿಯಿಂದ.

ಕಾದಂಬರಿಯ ಕಥಾಸೂತ್ರವು ಸುಲಭವಾಗಿಲ್ಲ. ತೊಡಕುಗಳಿಂದ ಕೂಡಿದೆ. ಇದು ಅನೇಕ ಕಥೆಗಳ ಜೋಡಣೆಯ ಫಲ. ಮೊದಲನೆಯದಾಗಿ ಉಜ್ಜಯಿನಿಯ ರಾಜಕುಮಾರನಾದ ಚಂದ್ರಾಪೀಡ ಮತ್ತು ಗಂಧರ್ವರಾಜಕುಮಾರಿ ಕಾದಂಬರಿಯರ ಪ್ರಣಯ ಕಥೆ ವರ್ಣಿತವಾಗಿದೆ. ಅದರ ಜೊತೆಗೆ ಪುಂಡರೀಕ ಮಹಾಶ್ವೇತೆಯರ ಪ್ರಣಯದ ಕಥೆಯೂ ಸೇರಿದೆ. ಈ ಎರಡು ಕಥೆಗಳೂ ಒಂದರೊಡನೊಂದು ಬೆರತು ಹಾಸು ಹೊಕ್ಕಾಗಿವೆ. ಈ ಕಥೆಯ ಪಾತ್ರಗಳೂ ಸಾಮಾನ್ಯವಲ್ಲ. ಕಥಾನಾಯಕಿ ಉಪನಾಯಕಿಯರಾದ ಕಾದಂಬರಿ ಮಹಾಶ್ವೇತೆಯರು ಗಂಧರ್ವ ಅಪ್ಸರೆಯರ ವಂಶಕ್ಕೆ ಸೇರಿದವರು. ಇವರು ವರಿಸಿದ ಪುರುಷರು ದೇವಾಂಶಸಂಭೂತರಾಗಿ ಮಾನವ ಜನ್ಮದಲ್ಲಿರುವವರು. ಇವರಿಬ್ಬರೂ ಶಾಪ-ಪ್ರತಿಶಾಪಗಳ ಪರಿಣಾಮವಾಗಿ ಬೇರೆ ಬೇರೆ ಜನ್ಮಗಳಲ್ಲಿ ಕಾಣಿಸಿಕೊಳ್ಳುವರು. ಪುಂಡರೀಕನಿಂದ ಶಾಪಪಡೆದ ಚಂದ್ರನೇ ಚಂದ್ರಾಪೀಡನಾಗಿ ಕಾದಂಬರಿಯನ್ನು ವರಿಸುವನು. ಈ ಮಧ್ಯೆ ಶೂದ್ರಕರಾಜನ ಜನ್ಮದಲ್ಲಿಯೂ ಕಾಣಿಸಿಕೊಳ್ಳುವನು. ಪುಂಡರೀಕನು ದೇಹ ತ್ಯಾಗಮಾಡುವ ಸಮಯದಲ್ಲಿ ಚಂದ್ರನಿಗೆ ಶಾಪಕೊಟ್ಟು ತಾನೂ ಅವನ ಆಗ್ರಹಕ್ಕೆ ಸಿಕ್ಕಿ ಪ್ರತಿಶಾಪವನ್ನು ಪಡೆಯುವನು. ಅನಂತರ ಚಂದ್ರನು ಚಂದ್ರಾಪೀಡನಾಗಿ ಜನಿಸಿದಾಗ ತಾನೂ ಅವನ ಪರಮಮಿತ್ರ ವೈಶಂಪಾಯನನಾಗಿ ಜನಿಸುವನು.

ಆಗ ಪೂರ್ವವಾಸನೆಯು ಅದಮ್ಯ ಬಲದಿಂದ ಮತ್ತೆ ಮಹಾಶ್ವೇತೆಯಲ್ಲಿ ಮೋಹಗೊಂಡು ಅವಳ ಶಾಪದಿಂದ ಗಿಳಿಯ ಜನ್ಮ ಪಡೆದು ಶಾಪವಿಮೋಚನೆಯಾದ ಮೇಲೆ ಪುಂಡರೀಕನ ಶರೀರವನ್ನು ಮರಳಿ ಪಡೆದು ಮಹಾಶ್ವೇತೆಯನ್ನು ವಿವಾಹವಾಗುವನು. ಕಥೆಯು ಆರಂಭವಾಗುವುದು ಚಂದ್ರಾಪೀಡನು ಶೂದ್ರಕನಾಗಿಯೂ ಪುಂಡರೀಕನು ಗಿಳಿಯಾಗಿಯೂ ಜನ್ಮ ಗ್ರಹಣ ಮಾಡಿ ಇನ್ನೇನು ಆ ಜನ್ಮ ಕಳೆಯುವ ಕಾಲದಲ್ಲಿ. ಈ ಕಥೆಯಲ್ಲವನ್ನೂ ಕಣ್ಣಿಗೆ ಗೋಚರವಾಗುವಂತೆ ಹೇಳುವುದನ್ನು ಕೇಳುತ್ತೇವೆಯೇ ವಿನಃ ನೋಡವುದಿಲ್ಲ. ಈ ಪಾತ್ರಗಳ ಜತೆಗೆ, ಋಷಿಕುಮಾರ ಕಪಿಂಜಲನು ಕುದುರೆಯಾಗುವುದೂ, ಲಕ್ಷ್ಮೀದೇವಿ ಚಂಡಾಲಕನ್ಯೆಯಾಗಿರುವುದೂ ಸೇರಿದೆ.

ಕಥನ ಕೌಶಲ : ಈ ಕಥೆಯನ್ನು ಹೇಳಿರುವ ವಿಧಾನವೂ ಅದ್ಭುತಾಶ್ಚರ್ಯಗಳಿಂದಲೇ ಕೂಡಿದೆ. ಗಿಣಿಯ ಪರಿಚಯವನ್ನು ಮಾಡಿಸುವವರೆಗಿನ ಕಥೆಯ ಭಾಗವನ್ನು ಕವಿಯೇ ಹೇಳುತ್ತಾನೆ ಅನಂತರ ಗಿಳಿಯೇ ತನ್ನ ಕಥೆಯನ್ನು ಹೇಳಲುಪಕ್ರಮಿಸುತ್ತದೆ. ಈ ಗಿಳಿಯ ಕಥೆಯು ಅನೇಕ ಕಥೆಗಳಿಂದ ಕೂಡಿ ತೊಡಕಾಗುತ್ತದೆ. ಐಂದ್ರಜಾಲಕನ ಮಾಯಾಪೆಟ್ಟಿಗೆಯಂತೆ ಕಥೆಯೊಳಗೆ ಕಥೆ ಇದ್ದು ವಿಸ್ಮಯವನ್ನುಂಟುಮಾಡುತ್ತದೆ. ಗಿಳಿಯು ಹೇಳುವ ಕಥೆಯಲ್ಲಿ, ಜಾಬಾಲಿಮಹರ್ಷಿಗಳು ಹೇಳಿದ ಕಥೆ, ಅದರಲ್ಲಿ ಮಹಾಶ್ವೇತೆಯ ಕಥೆ, ಅದರಲ್ಲಿ ಕಪಿಂಜಲನು ಹೇಳಿದ ಪುಂಡರೀಕ ಋಷಿಕುಮಾರನ ಜನ್ಮಕಥೆ, ಇತ್ಯಾದಿಯಾಗಿದ್ದು, ಈ ಕಥೆಯನ್ನೆಲ್ಲಾ ಶೂದ್ರಕ ಮಹಾರಾಜನಿಗೆ ಗಿಳಿಯು ಹೇಳುತ್ತಿರುವಂತೆ ರಚಿಸಿದೆ. ಕೊನೆಗೆ ಚಂಡಾಲಕನ್ಯೆ ತಾನಾರೆಂಬುದನ್ನೂ,

ಶೂದ್ರಕ ಮತ್ತು ಗಿಳಿ ಯಾರೆಂಬುದನ್ನೂ ತಿಳಿಸುತ್ತಾಳೆ. ಕಥೆಯ ಆರಂಭಭಾಗದಂತೆಯೇ ಕೊನೆಯ ಭಾಗವನ್ನು ಕವಿಯೇ ಹೇಳಿ ಸಮಾಪ್ತಿಗೊಳಿಸುತ್ತಾನೆ. ಕಥೆಯಲ್ಲಿ ಕಥೆಯನ್ನು ಅದುಮಿಟ್ಟು ವಿಸ್ಮಯ ತರುವ ಈ ಸಂವಿಧಾನ ಓದುಗರಿಗೆ 'ಅರೇಬಿಯನ್‌ನೈಟ್ಸ್' ಗ್ರಂಥವನ್ನು ನೆನಪಿಗೆ ತರುವುದು. ಈ ಕಥಾಸಂವಿಧಾನದಲ್ಲಿ ಕಥೆಯ ಆದಿಯೆಲ್ಲಿ? ಅಂತ್ಯವೆಲ್ಲಿ? ಎಂಬ ಕುತೂಹಲ ಆಶ್ಚರ್ಯಗಳು ಕೆರಳಿ ಮುಂದೆ ಓದುವ ಆಸೆಯನ್ನು ಪ್ರಬಲಿಸುತ್ತದೆ. ಆದರೆ ಸುಲಲಿತವಾಗಿ ಅರ್ಥಮಾಡಿಕೊಂಡು ಜೀರ್ಣಿಸಿಕೊಳ್ಳಬೇಕಾದರೆ ಶ್ರಮವಾಗುತ್ತದೆ. ಈ ನಾನಾ ಬಿಡಿ ಕಥೆಗಳನ್ನು ಅತಿ ಮಧುರವಾಗಿ, ಸಮಂಜಸವಾಗಿ ಸೇರಿಸಿರುವ ಕವಿಯ ಕಥನ ಕೌಶಲಕ್ಕೆ ಎಲ್ಲರೂ ತಲೆಬಾಗಬೇಕಾಗುತ್ತದೆ. ಒಂದೊಂದೂ ಸುಮಾರಾದ ನೀಳ್ಗತೆಯೇ ಆಗಿದ್ದು ಯಾವುದೊಂದು ಇಲ್ಲದಿದ್ದರೂ ಒಟ್ಟಿನ ಕಥೆ ನಡೆಯಲಾರದಂತೆ ನೆಯ್ಯಲ್ಪಟ್ಟಿದೆ.

ಕಥೆಯು ಪ್ರಾರಂಭವಾಗುವುದೇ ಒಂದು ಚಿತ್ತಾಕರ್ಷಕ ಅದ್ಭುತ ರೀತಿಯಲ್ಲಿ. ಪಾಶ್ಚಾತ್ಯ ಮಹಾಕಾವ್ಯಗಳ ಸಂವಿಧಾನದಂತೆ ಕಥೆಯನ್ನು ಅಂತಿಮ ಘಟನೆಗೆ ಸ್ವಲ್ಪ ಮೊದಲಿನಿಂದ ಪ್ರಾರಂಭಮಾಡಿದ್ದಾನೆ. ಎಲ್ಲವೂ ಯಾವುದೋ ರಹಸ್ಯದಲ್ಲಿ, ಆಶ್ಚರ್ಯದಲ್ಲಿ ಅಂತರ್ಗತವಾಗಿದೆ. ಮುಂದೆ ಏನು? ಹೇಗೆ? ಎಂಬ ಕುತೂಹಲ ಘಳಿಗೆ ಘಳಿಗೆಯಲ್ಲೂ ಬೆಳೆಯುತ್ತಿರುತ್ತದೆ. ಆದರೆ ಈ ಕುತೂಹಲವನ್ನು ಪೂರೈಸಿ ಕವಿಯು ಜಾಗ್ರತೆ ಮುಂದೆ ಸಾಗುವುದೇ ಇಲ್ಲ. ಏಕೆಂದರೆ ಕವಿಗೆ ಈ ಕೃತಿಯಲ್ಲಿ ಮುಖ್ಯವಾದುದು ಕಥೆಯಲ್ಲ; ಅವನ ಮುಖ್ಯೋದ್ದೇಶ ಅಲೆ ಅಲೆಯಾದ ಕಲ್ಪನೆ, ಪ್ರೌಢವಾದ ಶಬ್ದರಚನೆ, ಚಾತುರ್ಯಪೂರ್ಣ

ವರ್ಣನೆ, ಇದರಿಂದ ಪ್ರತಿಯೊಂದು ಪಾತ್ರವನ್ನೂ, ಸನ್ನಿವೇಶವನ್ನೂ ಉಪಯೋಗಿಸಿಕೊಂಡು ಮನಸ್ಸು ತೃಪ್ತಿಹೊಂದುವಂತೆ ವರ್ಣಿಸಿ ಆನಂದಪಡುತ್ತಾನೆ. ಮೊದಲನೆಯ ವಾಕ್ಯದಲ್ಲಿ ಶೂದ್ರಕ ರಾಜನ ವರ್ಣನೆ ಪ್ರಾರಂಭವಾಗುತ್ತದೆ:

> "ಆಸೀದಶೇಷ ನರಪತಿ ಶಿರಃ ಸಮಭ್ಯರ್ಚಿತಶಾಸನಃ, ಪಾಕಶಾಸನ ಇವಾಪರಃ, ಚತುರುದಧಿ ಮಾಲಾಮೇಖಲಾಯಾ ಭುವೋ ಭರ್ತಾ, ಪ್ರತಾಪಾನುರಾಗಾವನತಸಮಸ್ತ ಸಾಮಂತಚಕ್ರಃ, ಚಕ್ರವರ್ತಿಲಕ್ಷಣೋಪೇತಃ, ಚಕ್ರಧರ ಇವ ಕರಕಮ-ಲೋಪಲಕ್ಷ್ಯಮಾಣ ಶಂಖಚಕ್ರಲಾಂಛನಃ, ಹರ ಇವ ಜಿತಮನ್ಮಥಃ, ಗುಹ ಇವ ಅಪ್ರತಿಹತಶಕ್ತಿಃ, ಕಮಲಯೋನಿರಿವ ವಿಮಾನೀಕೃತ ರಾಜಹಂಸಮಂಡಲಃ, ಜಲಧಿರಿವ ಲಕ್ಷ್ಮೀಪ್ರಸೂತಿಃ, ಗಂಗಾಪ್ರವಾಹ ಇವ ಭಗೀರಥಪಥಪ್ರವೃತ್ತಃ, ರವಿರಿವ ಪ್ರತಿದಿವಸೋಪಜಾಯಮಾನೋದಯಃ, ಮೇರುರಿವ ಸಕಲಭುವ-ನೋಪಜೀವ್ಯಮಾನಪಾದಚ್ಛಾಯಃ, ದಿಗ್ಗಜ ಇವಾನವರತಪ್ರವೃತ್ತದಾನಾದ್ರೀಕೃತಕರಃ, ಕರ್ತಾ ಮಹಾಶ್ಚರ್ಯಾಣಾಂ, ಆಹರ್ತಾ ಕ್ರತೂನಾಂ, ಆದರ್ಶಃ ಸರ್ವಶಾಸ್ತ್ರಾಣಾಂ, ಉತ್ಪತ್ತಿಃ ಕಲಾನಾಂ, ಕುಲಭವನಂ ಗುಣಾನಾಂ, ಆಗಮಃ ಕಾವ್ಯಾಮೃತರಸಾನಾಂ, ಉದಯಶೈಲೋ ಮಿತ್ರಮಂಡಲಸ್ಯ, ಉತ್ಪಾತಕೇತುಃ ಅಹಿತಜನಸ್ಯ, ಪ್ರವರ್ತಯಿತಾ ಗೋಷ್ಠೀಬಂಧಾನಾಂ, ಆಶ್ರಯೋ ರಸಿಕಾನಾಂ, ಅಗ್ರಣೀಃ ವಿದಗ್ಧಾನಾಂ, ವೈನತೇಯ ಇವ ವಿನತಾನಂದ ಜನನಃ. ವೈನ್ಯ ಇವ ಚಾಪಕೋಟಿಸಮುತ್ಸಾರಿತಸಕಲಾರಾತಿಕುಲಾಚಲೋ ರಾಜಾ ಶೂದ್ರಕೋ ನಾಮ ॥"

ಹೀಗೆ ಜಲಪಾತದಂತೆ ಧುಮುಕಿ ಧರೆಗಿಳಿದ ಕಥೆ ಕೂಡಲೆ ಅನೇಕ ವರ್ಣನೆಗಳ ಅಣೆಕಟ್ಟುಗಳಲ್ಲಿ ನಿಂತು, ಕವಿಯು ಹರಿಯಲು ಅವಕಾಶಕೊಟ್ಟಾಗ ಮಾತ್ರ ಮುಂದುವರಿಯುತ್ತದೆ! ನಾವೇನೋ ಶೂದ್ರಕನೆಂಬ ರಾಜನೊಬ್ಬನಿದ್ದ ಎಂದು ಹೇಳಿ

ಮುಂದುವರೆಯಬಹುದು. ಆದರೆ ಬಾಣನ ಕಾವ್ಯಕಲೆ ಅದಲ್ಲ. ವರ್ಣನೆಯನ್ನು ಪೂರ್ಣವಾಗಿ ಹೇಳಿ ಒಂದು ಸಮಗ್ರ ಚಿತ್ರವನ್ನು ರಚಿಸಿಯೇ ಅವನು ಮುಂದುವರಿಯುವುದು. ಹೀಗಾಗಿ ಆ ರಾಜನ ರಾಜಧಾನಿ ವಿದಿಶೆ, ಅಲ್ಲಿರುವ ನದಿ ವೇತ್ರವತಿ, ಆ ರಾಜನ ಒಡ್ಡೋಲಗ ವೈಭವ, ಅವನ ದೈಹಿಕ ವ್ಯಾಯಾಮ, ಸ್ನಾನ, ಭೋಜನ ಪರಿಧಾನಗಳೇ ಮುಂತಾದುವೆಲ್ಲಾ ಸಾವಧಾನ ವಾಗಿಯೇ ವರ್ಣಿತವಾಗಿವೆ. ಅಂದಮಾತ್ರಕ್ಕೆ ಶೂದ್ರಕನ ಪಾತ್ರವೇನೂ ಅಷ್ಟು ಹಿರಿಯದಲ್ಲ. ಅವನು ಮೊದಲು ಕಾಣಿಸಿ ಕೊಂಡವನು ಮತ್ತೆ ಬರುವುದು ಕಥೆಯ ಅಂತಿಮಘಟ್ಟದ ಲ್ಲಿಯೇ. ಕಥೆಯನ್ನು ಕೇಳುವ ಜವಾಬ್ದಾರಿ ಅವನದು ಅಷ್ಟೆ. ಹೀಗೆ ವರ್ಣನೆಗಳ ದೀರ್ಘತೆಯಿಂದಲೇ ಯಾವುದೊಂದು ಪಾತ್ರವನ್ನೂ ಮುಖ್ಯವೆಂದು ಭಾವಿಸಿದರೆ ನಾವು ತಪ್ಪು ಮಾಡುತ್ತೇವೆ. ಮುಖ್ಯವೋ ಅಲ್ಲವೋ ಬಾಣನು ಪ್ರತಿಯೊಂದು ಪಾತ್ರವನ್ನೂ ಶಬ್ದಶಕ್ತಿಯಿಂದ ಕಡೆದು ನಿಲ್ಲಿಸಿಬಿಡುತ್ತಾನೆ. ಎಲ್ಲೂ ಕೃಪಣತೆಯ ಮಾತೇ ಇಲ್ಲ. ಇದು ಒಡ್ಡೋಲಗದ ಬಾಗಿಲು ಕಾಯುವ ಪ್ರತೀಹಾರಿಯ ಶಬ್ದಚಿತ್ರ :

"ಏಕದಾ ತು ನಾತಿದೂರೋದಿತೇ ನವನಲಿನದಲಸಂಪುಟಭಿದಿ ಕಿಂಚಿದುನ್ಮುಕ್ತಪಾಟಲಿಮ್ನಿ ಭಗವತಿ ಸಹಸ್ರಮರೀಚಿಮಾಲಿನಿ ರಾಜಾನ ಮಾಸ್ಥಾನಮಂಡಪಗತಮಂಗನಾಜನವಿರುದ್ಧೇನ ವಾಮ ಪಾರ್ಶ್ವಾವಲಂಬಿನಾ ಕೌಕ್ಷೇಯಕೇಣ ಸಂನಿಹಿತ ವಿಷಧರೇವ ಚಂದನಲತಾ ಭೀಷಣರ ಮಣೀಯಾಕೃತಿಃ, ಅವಿರಲ ಚಂದ ನಾನುಲೇಪನ ಧವಲಿತಸ್ತನತಟೋನ್ಮಜ್ಜದೈರಾವತಕುಂಭ ಮಂಡಲೇವ ಮಂದಾಕಿನೀ, ಚೂಡಾಮಣಿ ಪ್ರತಿಬಿಂಬಚ್ಛಲೇನ ರಾಜಾಜ್ಞೇವ ಮೂರ್ತಿಮತೀ ರಾಜಭಿಃ ಶಿರೋಭಿರುಹ್ಯ ಮಾನಾ, ಶರದಿವ ಕಲಹಂಸ ಧವಲಾಂಬರಾ, ಜಾಮದಗ್ನ್ಯ ಪರಶುಧಾರೇವ

ವಶೀಕೃತ ಸಕಲರಾಜ ಮಂಡಲಾ, ವಿಂಧ್ಯವನ ಭೂಮಿರಿವ ವೇತ್ರಲತಾವತೀ, ರಾಜ್ಯಾಧಿ ದೇವತೇವ ವಿಗ್ರಹಿಣೀ ಪ್ರತೀಹಾರೀ ಸಮುಪುಸೃತ್ಯ ಕ್ಷಿತಿತಲನಿಹಿತ ಜಾನುಕರಕಮಲಾ ಸವಿನಯಮಬ್ರವೀತ್ ‖ ”

ಇದು ಚಂಡಾಲಕನ್ಯೆಯ ವರ್ಣನಾ ಚಿತ್ರ :

“ ದೇವ, ದ್ವಾರಸ್ಥಿತಾ ಸುರಲೋಕ ಮಾರೋಹತಸ್ತ್ರಿಶಂಕೋರಿವ ಕುಪಿತಶತಮುಖ—
ಹುಂಕಾರ ನಿಪಾತಿತಾ ರಾಜಲಕ್ಷ್ಮೀರ್ದಕ್ಷಿಣಾ ಪಥಾದಾಗತಾ ಚಾಂಡಾಲಕನ್ಯಕಾ ”.

ಇನ್ನುಮುಂದೆ ರಾಜಧಾನಿಗಳ, ಋಷ್ಯಾಶ್ರಮಗಳ, ಋಷಿಶ್ರೇಷ್ಠರ, ಬೇಟೆಗಾರರ, ಸಿದ್ಧಾಯತನ ಸರೋವರಗಳ, ಜೈತ್ರಯಾತ್ರೆಯ, ಹಗಲು ರಾತ್ರಿಗಳ ವರ್ಣನೆಗಳು ಪ್ರತಿಯೊಂದೂ ಒಂದೊಂದು ಪ್ರಪಂಚವೆಂಬಂತೆ ಚಿತ್ರಿತವಾಗಿವೆ. ಎಲ್ಲವೂ ಪುಷ್ಟಿಯಾದ ವರ್ಣನೆಗಳೇ. ಏಕೆಂದರೆ ಯಾವುದನ್ನೂ ಕವಿಯು ಅರ್ಧ ಮನಸ್ಸಿನಿಂದ ಚಿತ್ರಿಸಿಲ್ಲ. ಪ್ರತಿಯೊಂದರಲ್ಲಿಯೂ ಕುಸುರಿ ಕೆಲಸದ ಸೂಕ್ಷ್ಮತೆಯೂ, ಕೌಶಲವೂ ನಿರಂತರವಾಗಿ ಎದ್ದು ಕಾಣುವುದು. ವ್ಯಕ್ತಿಗಳ ವರ್ಣನೆಯೂ ಉಜ್ವಲವಾಗಿಯೇ ಇದೆ. ಮುಖ್ಯವ್ಯಕ್ತಿಗಳ ಮಾತಂತಿರಲಿ : ಒಡ್ಡೋಲಗದ ಬಾಗಿಲು ಕಾಯುವವಳ, ಗಿಳಿಯ ಒಡತಿ ಚಂಡಾಲ ಕನ್ಯೆಯ ವರ್ಣನೆಗಳೂ ಅದೇ ಕುಂಚದಲ್ಲಿಯೇ ಪೂರ್ಣವಾಗಿ ಚಿತ್ರಿತವಾಗಿದೆ. ಈ ಒಂದೊಂದೂ ಕವಿಯ ಅಗಾಧ ಕಲ್ಪನಾ ಕೌಶಲದಲ್ಲಿ ಸೃಷ್ಟಿಗೊಂಡ, ಸಂಸ್ಕೃತ ಕವಿತಾಗುಣದಲ್ಲಿ ಮಿಂದ, ಗೀರ್ಗುಂಫದ ಪೆಂಪಿನಲ್ಲಿ ಬೆಳೆದ ಬೆಡಗಿನ ಚಿತ್ರಗಳು. ಬಾಣನು ಮಾಡಿರುವ ಶಬ್ದಚಿತ್ರಣವನ್ನು ಮೀರಿಸಬಲ್ಲ ಇನ್ನೊಬ್ಬ ಕವಿ

ಇನ್ನೂ ಬಂದಿಲ್ಲ, ಹಿಂದೆ ಇರಲಿಲ್ಲ. ಈ ಶಬ್ದಚಿತ್ರಗಳನ್ನು ವರ್ಣಗಳಿಂದ ಕುಂಚದಲ್ಲಿ ತರಬೇಕಾದರೆ ಎಂತಹ ಚಿತ್ರಕಾರ ನಿಗೂ ಕಷ್ಟಸಾಧ್ಯ!

ಬಾಣನ ನಿಸರ್ಗವರ್ಣನೆಗಳೂ ಅತ್ಯಂತ ರಮಣೀಯವಾಗಿವೆ. ಚಂದ್ರೋದಯ, ಸೂರ್ಯೋದಯ, ಸಂಧ್ಯೆ, ರಾತ್ರಿ ಮತ್ತು ಪ್ರಭಾತಗಳ ವರ್ಣನೆಗಳೂ ಉತ್ತಮ ರೇಖಾಚಿತ್ರಗಳಿಂದ ಕೂಡಿವೆ. ಸನ್ನಿವೇಶದ ಔಚಿತ್ಯವನ್ನು ಅನುಸರಿಸಿ ಸೃಷ್ಟಿಗೊಂಡ ಈ ವರ್ಣನೆಗಳು ಹೃದಯಂಗಮವಾಗಿವೆ. ಚಂದ್ರಾಪೀಡ ಕಾದಂಬರಿಯರ ಪ್ರಥಮದರ್ಶನ ಕಾಲದಲ್ಲಿ ಕಾಣಿಸಿಕೊಂಡ ಚಂದ್ರಬಿಂಬಕ್ಕೂ, ಪುಂಡರೀಕನ ಮರಣದ ಸಮಯದಲ್ಲಿ ಕಾಣಿಸಿಕೊಂಡ ಚಂದ್ರಬಿಂಬಕ್ಕೂ ವರ್ಣನೆಯಲ್ಲಿ ತುಂಬಾ ವ್ಯತ್ಯಾಸವಿದ್ದು—ಆಯಾ ಸನ್ನಿವೇಶಗಳಿಗೆ ಉಚಿತವಾಗಿದೆ. ಒಂದು ಪ್ರಮೋದಪ್ರದವಾದರೆ ಇನ್ನೊಂದು ದುಃಖಮೂಲ. ವರ್ಣಗಳ ಸೂಕ್ಷ್ಮತೆಯನ್ನು ಕೊಡುವುದರಲ್ಲಿ ಬಾಣನ ಶಕ್ತಿ ಅಸಾಮಾನ್ಯ. ನಮಗೆ ಗೊತ್ತಿರುವುದು ಕೆಂಪು, ಬಿಳುಪು, ಹಸುರು, ನೀಲಿ ಇತ್ಯಾದಿ ಮಾತ್ರ. ಆದರೆ ಕೆಂಪಿನಲ್ಲಿ ಸೂಕ್ಷ್ಮವಾದ ಎಷ್ಟು ವಿಧವಿದೆ? ಹಾಗೆಯೇ ನೀಲಿಯಲ್ಲಿ? ಎಲ್ಲವೂ ಬಾಣನ ಸೂಕ್ಷ್ಮಕಣ್ಣಿಗೆ ಗೋಚರವಾಗುತ್ತದೆ. ಒಂದು ಕಡೆ "ಮಧುಮದ ಉಪರಕ್ತ ಕೇರಲೀ ಕಪೋಲ ಕೋಮಲಚ್ಛವಿನಾ ಪಲ್ಲವೇನ" ಎಂದು ಚಿಗುರಿನ ಕೆಂಪನ್ನು ಹೇಳಿದರೆ, ಇನ್ನೊಂದು ಕಡೆ ದಾಳಿಂಬೆ ಬೀಜದ ಕೆಂಪನ್ನು, "ಹರಿನಖರ ಭಿನ್ನ ಮತ್ತ ಮಾತಂಗ ಮುಕ್ತ ರಕ್ತಾರ್ದ್ರ ಫಲತ್ವಿಂಷಿ" ಎಂದು ಹೇಳುತ್ತಾನೆ. ನೇರಳೆಹಣ್ಣಿನ ರಸವನ್ನು ನಾವು ನೋಡಿದ್ದೇವೆ. ಆದರೆ ಅದರ ಬಣ್ಣವನ್ನು ಮಾತ್ರ

ಬಾಣನ ಬಾಯಿಂದಲೇ ಕೇಳಬೇಕು : "ಆಮತ್ತ ಕೋಕಿಲ—ಲೋಚನಚ್ಛವಿಃ ನೀಲಪಾಟಲಃ" ಎಂದು ಅವನು ವರ್ಣಿಸುತ್ತಾನೆ. ಶಾಲ್ಮಲೀವೃಕ್ಷದ ಗೂಡುಗಳಲ್ಲಿದ್ದ ಗಿಳಿಯ ತತ್ತಿಗಳ ವಯಸ್ಸನ್ನು ಕೇವಲ ಅವುಗಳ ಬಣ್ಣ ಹೇಳಿಯೇ ನಮಗೆ ತಿಳಿಸಿ ನಮ್ಮಲ್ಲಿ ಕರುಣೆ ಮೂಡುವಂತೆ ಮಾಡಿರುವ ಬಾಣನ ಶ್ರೇಷ್ಠ ಕವಿತಾಗುಣಕ್ಕೆ ಎಲ್ಲರೂ ಮಣಿಯಲೇಬೇಕು. ಬಿಳಿಪೂ ಅಷ್ಟೆ : ನಾಗರಹಾವಿನ ಪೊರೆಯಂತೆ; ಶರನ್ಮೇಘದ ಚಕ್ಕೆಯಂತೆ, ಅಮೃತ ಫೇನದಂತೆ, ಗಿರಿಶಾಟ್ಟಹಾಸದಂತೆ, ಚಂದ್ರಕಾಂತಿ ದ್ರವೀಕೃತವಾದಂತೆ, ಹಿಮಗಿರಿ ಕರಗಿ ಹರಿದಂತೆ. ಶಬ್ದ—ಧ್ವನಿಯೆಂದರೆ ಎಷ್ಟೋ ವಿಧವಾಗಿರಬಹುದು. ಆ ವೈವಿಧ್ಯತೆಯನ್ನು ಬಾಣನ ಮಾತಿನಲ್ಲೇ ಕೇಳಬೇಕು. ಧ್ವನಿಗೆ ತಕ್ಕಂತೆ ಪದ. ಪದದ ಉಚ್ಚಾರಣೆಯಿಂದಲೇ ಅರ್ಥವೂ ಸಿದ್ಧಿಸಬೇಕು. ಅವನ ಮಾತನ್ನೇ ಕೇಳಿ :

"ರಣಿತಮಣೀನಾಂ ಮಣಿನೂಪುರಾಣಾಂ ನಿನಾದೇನ, ವಾರವಿಲಾಸಿನೀ ಜನಸ್ಯ ಸಂಚರತೋ ಜಘನಸ್ಥಲಾಸ್ಫಾಲನರಸಿತ ರತ್ನಮಾಲಿಕಾನಾಂ ಮೇಖಲಾನಾಂ ಮನೋಹಾರಿಣಾ ಝುಂಕಾರೇಣ, ನೂಪುರ ರವಾಕೃಷ್ಟಾನಾಂಚ ಕಲಹಂಸಕಾನಾಂ ಕೋಲಾಹಲೇನ, ರಸನಾರಸಿತೋತ್ಸುಕಿತಾನಾಂ ಚ ತಾರತರವಿರಾವಿಣಾಂ ಉಲ್ಲಿಖ್ಯಮಾನಕಾಂಸ್ಯಕ್ರೇಂಕಾರ ದೀರ್ಘೇಣ ಗೃಹಸಾರಸಾನಾಂ ಕೂಜತೇನ, ಕಿರೀಟಕೋಟಿಭಿಃ ಉಲ್ಲಿಖ್ಯಮಾನಸ್ಯ ಮಣಿಕುಟ್ಟಿಮಸ್ಯಸ್ವನೇನ. ಪ್ರಣಾಮಪರ್ಯಸ್ತಾನಾಂ ಅತಿ ಕಠಿಣಮಣಿಕುಟ್ಟಿಮನಿಪತಿತ ರಣರಣಾಯಿತಾನಾಂ ಚ ಮಣಿಕರ್ಣಪೂರಾಣಾಂ ನಿನಾದೇನ, ಮಧುಲಿಹಾಂ ಹುಂಕೃತೇನ, ಕೇಯೂರ ಕೋಟಿತಾಡಿತಾನಾಂ ಕ್ವಣಿತಮುಖರತ್ನ ದಾಮ್ನಾಂ ಚ ಮಣಿಸ್ತಂಭಾನಾಂ ರಣಿತೇನ"

ಈ ಪಂಕ್ತಿಗಳನ್ನು ನಾವು ಓದುತ್ತಿದ್ದಾಗ 'ರವಿಕಾಣದು

ದನ್ನು ಕವಿಕಂಡ’ ಎಂಬ ಮಾತು ಯಥಾರ್ಥವಾಗಿ ಕಾಣು ತ್ತದೆ. ಒಟ್ಟಿನಲ್ಲಿ ಬಾಣನು ವರ್ಣಿಸದ ಜೀವಲೋಕವಿಲ್ಲ; ಜೀವರಾಶಿಯಿಲ್ಲ, ನೋಟವಿಲ್ಲ, ಸೌಂದರ್ಯವಿಲ್ಲ; ಧ್ವನಿಯಿಲ್ಲ.

ಬಾಣನ ಅದ್ಭುತವಾದ ಇನ್ನೊಂದು ಕಲಾಗುಣವೆಂದರೆ– ಸ್ತ್ರೀಪುರುಷರ ಹೃದಯ ಭಾವನೆಗಳನ್ನು ನೈಪುಣ್ಯದಿಂದ ವರ್ಣಿಸುವುದು. ಸುಖದುಃಖ, ಆನಂದ ಉದ್ವೇಗ, ಉಲ್ಲಾಸ ಉನ್ಮಾದ, ಅನುರಾಗ ಔತ್ಸುಕ್ಯ, ಆಶೆ ನಿರಾಶೆ, ಪ್ರೇಮ ವಾತ್ಸಲ್ಯ–ಮುಂತಾದ ಹೃದಯದ ಭಾವನೆಗಳೂ, ಅತಿ ಸೂಕ್ಷ್ಮವಾದ ಚಿತ್ತವಿಕಾರಗಳೂ ಹೃದಯಂಗಮವಾಗಿ ವರ್ಣಿತವಾಗಿವೆ. ಬೇಟೆಗಾರರು ಬಂದಾಗ ಹೆದರಿದ ಗಿಳಿಯ ತತ್ತಿಯ ಚಿತ್ರವೂ, ಕಾಮುಪರವಶಳಾದ ಮಹಾಶ್ವೇತೆಯ ಚಿತ್ರವೂ, ಕಾದಂಬರಿ–ಚಂದ್ರಾಪೀಡರ ಪ್ರಥಮ ಸಮಾಗಮ ದಲ್ಲಿನ ಅವರ ಹೃದಯದ ಚಿತ್ರವೂ ಸೊಗಸಾಗಿ, ಉಚಿತ ವಾಗಿ ವರ್ಣಿತವಾಗಿವೆ. ಹಾಗೆಯೇ ಗಿಳಿಯ ರೋದನ, ಮಹಾಶ್ವೇತೆಯ ಪ್ರಣಯಭಗ್ನತೆ, ಕರುಣರಸಕ್ಕೆ ಸಮೀ ಚೀನ ದೃಷ್ಟಾಂತಗಳಾಗಬಹುದಾಗಿವೆ. ಪುತ್ರಪ್ರಾಪ್ತಿಗಾಗಿ ಪರಿತಪಿಸುತ್ತಿರುವ ತಾರಾಪೀಡ–ವಿಲಾಸವತಿಯರ ಚಿತ್ರವು ಯಾರಲ್ಲಿ ತಾನೆ ಕನಿಕರ ಹುಟ್ಟಿಸದು. ಅಂತೂ ಸುಖವಾಗಲೀ ದುಃಖವಾಗಲೀ ಬೇರೊಬ್ಬ ಕವಿಯಿಂದ ಇನ್ನು ವರ್ಣಿಸಲಸದಳ ವೆಂಬಂತೆ ಬಾಣನಿಂದ ವರ್ಣಿತವಾಗಿದೆ. ಈ ವರ್ಣನೆಗಳ ಪರಿಪೂರ್ಣತೆಯನ್ನೂ, ಸೂಕ್ಷ್ಮ–ಸ್ಥೂಲರೂಪಗಳನ್ನೂ, ಅಸಾ ಧಾರಣ ಕಲ್ಪನಾಶಕ್ತಿಯನ್ನೂ ತದನುಗುಣವಾದ ಶಬ್ದಶಕ್ತಿ ಯನ್ನೂ ಗಮನಿಸಿ “ **ಬಾಣೋಚ್ಛಿಷ್ಟಂ ಜಗತ್ಸರ್ವಮ್** ” ಬಾಣನಿಂದ ವರ್ಣಿತವಾಗದ ವಸ್ತುವೇ ಇಲ್ಲ ಎಂದು ವಿಮರ್ಶಿಸಿ ರುವುದು ಅತ್ಯುಚಿತವಾಗಿದೆ.

ಈ ವರ್ಣನೆಗಳಲ್ಲಿ ಸಮೀಚೀನ ಶಬ್ದಚಿತ್ರಗಳಿದ್ದು ರಸಭಾವಗಳಿಂದ ಸಹೃದಯರ ಮನರಂಜನೆಯಾಗುವುದೇನೋ ಸರಿಯೆ. ಆದರೆ ಕೆಲವು ಕಡೆ ಸಾಕಾದಷ್ಟು ಇಲ್ಲ, ಬೇಕಾದಷ್ಟಕ್ಕೂ ಮೀರಿ ಈ ವರ್ಣನೆಗಳು ನಡೆದಿವೆ. ಕವಿಯು ಇಲ್ಲಿಗೆ ನಿಲ್ಲಿಸಿದ್ದರೇ ಚೆನ್ನಾಗಿತ್ತು, ಆದರೆ ಇನ್ನೂ ಇದೆಯೆಲ್ಲಾ ಎಂದೆನಿಸುತ್ತದೆ. ಕವಿಗೇನೋ ಈ ಯೋಚನೆಯೇ ಇದ್ದಂತೆ ಕಾಣುವುದಿಲ್ಲ. ಹೇಳಬೇಕಾದಷ್ಟನ್ನೂ ಇನ್ನೂ ಹೆಚ್ಚನ್ನೂ ಹೇಳಿ, ಅಲ್ಲಿಗೂ ತೃಪ್ತನಾಗದೆ, 'ಇತ್ಯೇತಾನಿ ಚ ಅನ್ಯಾನಿ ಚ' ಎಂದು ಹೇಳುತ್ತಾನೆ. ಅಸಾಧಾರಣ ಪದಪುಂಜದ ಹೊನಲಿನಲ್ಲಿ ಹರಿಯುತ್ತಿರುವ ಈ ವರ್ಣನೆಗಳು, ನಿಲ್ಲಿಸಲು ಲಗಾಮು ಹಿಡಿದಮೇಲೂ ಗಾಡಿಯನ್ನು ಸ್ವಲ್ಪ ಮುಂದೆ ಎಳೆದು ನಿಲ್ಲಿಸುವ ಕುದುರೆಯಂತೆ ಸಾಗುತ್ತದೆ. ಅನೇಕವೇಳೆ ಕಲ್ಪನೆಯು ಮಿತಿಮೀರಿ, ಹದಗೆಟ್ಟು ಉತ್ಪ್ರೇಕ್ಷೆಯಿಂದ ಚಿತ್ರದ ಸೌಕುಮಾರ್ಯಕ್ಕೇ ಭಂಗ ಬರಬಹುದು. ರೆಕ್ಕೆಕೂಡ ಬಲಿತಿಲ್ಲದೆ ಒಂದು ದಿನವೂ ಹಾರದಿದ್ದ ಗಿಣಿ ನೀತಿಜ್ಞನಾದ ಅನುಭವಿಯಂತೆ ವ್ಯಾಧವೃತ್ತಿಯ ದೋಷಗಳನ್ನೆಲ್ಲಾ ಪಟ್ಟಿಹಾಕುವುದನ್ನು ಕೇಳಿದಾಗಲೂ; ಆನೆಗಳ ಮದಜಲದ ಪರಿಣಾಮವಾಗಿ ಪದಾತಿಗಳು ಮೊಣಕಾಲುದ್ದದವರೆಗೂ ನೆನೆಯಬೇಕಾಯಿತೆಂದಾಗಲೂ, ಮದಜಲಸೇಕ ಸಂವರ್ಧಿತ ಪಾದಪಗಳು ಅತ್ಯುಚ್ಚವಾಗಿ ಬೆಳೆದು ರವಿರಥ ತುರಂಗಮಗಳ ಶ್ರಮಪರಿಹಾರ ಕ್ಷೇತ್ರಗಳಾದವೆಂದಾಗಲೂ ನಮ್ಮ ನಂಬುಗೆಯನ್ನೇ ಪರೀಕ್ಷಿಸಿಕೊಳ್ಳಬೇಕಾಗುತ್ತದೆ!

ಈ ರೀತಿ ಕಥೆಯ ಇಂಪಿಗಿಂತಲೂ ವರ್ಣನೆಯ ಸೊಂಪೇ ಅಧಿಕವಾಗಿದೆ. ಈ ವರ್ಣನೆಗಳನ್ನು ಓದುವಾಗ ಕಥೆಯೆಲ್ಲಿಗೆ ನಿಂತಿತು ಎಂಬುವುದನ್ನು ಹುಡುಕುವುದೇ ಕಷ್ಟವಾಗುತ್ತದೆ.

ಜೊತೆಗೆ ಈ ವರ್ಣನೆಗಳಲ್ಲಿ ರಾಮಾಯಣ, ಮಹಾಭಾರತ ಕಥೆಗಳು ಪ್ರಾಸಂಗಿಕವಾಗಿ ಬರುತ್ತವೆ. ಆ ಸನ್ನಿವೇಶಗಳಲ್ಲಂತೂ ಇದೇನು ರಾಮಾಯಣವೋ, ಭಾರತವೋ, ಭಾಗವತವೋ, ಕಾದಂಬರಿಯೋ ಎಂಬ ಭ್ರಮೆಯೂ ಸಾಧ್ಯ. ಈ ವರ್ಣನೆಗಳಲ್ಲಿ ಬರುವ ಫಲಗಳ ಮತ್ತು ಪುಷ್ಪಗಳ ಹೆಸರುಗಳೂ, ಪ್ರಾಣಿ–ಮೃಗಗಳ ಹೆಸರುಗಳೂ, ವೃಕ್ಷ-ಲತೆಗಳ ಹೆಸರುಗಳೂ ಅನಂತವಾಗಿವೆ. ಈ ಶಾಸ್ತ್ರಗಳ ಸಂಶೋಧಕರಿಗೆ, ಈ ಕೃತಿಗಳಲ್ಲಿ ಸಾಕಾದಷ್ಟು ಅವಕಾಶವಿದೆ. ಅಂತೂ ಈ ವರ್ಣನೆಗಳು ಬಾಣನ ಅಸಾಧಾರಣ ಪ್ರಾಪಂಚಿಕ ಅನುಭವಗಳನ್ನೂ, ಸೂಕ್ಷ್ಮರಸಜ್ಞತೆಯನ್ನೂ ಸನ್ನುತ ಕವಿತಾಗುಣವನ್ನೂ ಎತ್ತಿ ಹಿಡಿದು ತೋರಿಸಿ ಅವನಿಗೆ ಕವಿಗಳಲ್ಲಿ ದೃಢವಾದ ಹಿರಿಮೆಯ ಜಾಗವನ್ನು ದೊರಕಿಸಿ ಕೊಟ್ಟಿವೆ. ಈ ಎರಡು ಕೃತಿಗಳು ಗದ್ಯರೂಪಿಣಿ ಗೀರ್ವಾಣ ಸರಸ್ವತಿಯ ನಂದಾದೀಪಗಳು. ಇಂತಹ ಅದ್ಭುತ ವರ್ಣನೆಗಳು ಸಾಲು ಸಾಲಾಗಿ ಮೇಲೆ ಮೇಲೆ ಬರುತ್ತಿರುವಾಗ ಕಥೆಯ ಓಟ ತ್ವರಿತಗೊಳ್ಳುವ ಅವಕಾಶವೆಲ್ಲಿ? ಈಗ ರಾಜನ ಒಡ್ಡೋಲಗದ ವೈಭವವನ್ನು ಕಣ್ದಣಿಯ ನೋಡುತ್ತಾ, ಈಗ ಮಹದರಣ್ಯಗಳ ಮಧ್ಯೆ ಸಂಚರಿಸುತ್ತಾ, ಬಳಲಿಕೆಯಾದಾಗ ವೃಕ್ಷಗಳೆಡೆಯಲ್ಲಿ ತಂಗುತ್ತಾ, ಸರೋವರದ ಸ್ವಚ್ಛ ನೀರಿನಿಂದ ದಣಿವನ್ನು ಇಂಗಿಸಿಕೊಳ್ಳುತ್ತಾ, ಋಷಿಕುಮಾರರೊಡನೆ ಸ್ನಾನಮಾಡಿ, ಋಷಿಶ್ರೇಷ್ಠರಿಗೆ ಭಕ್ತಿಯಿಂದ ನಮಿಸಿ, ಸಿದ್ಧಾಯತನಕ್ಕೆ ತೆರಳಿ, ಅಲ್ಲಿ ಭಗ್ನಪ್ರಣಯದ ಹೃದಯ ವಿದ್ರಾವಕ ಕಥೆಯನ್ನು ಕೇಳುತ್ತಾ ಮುಂದೆ ಗಂಧರ್ವನಗರದ ಸೌಂದರ್ಯಕ್ಕೂ, ಅಲ್ಲಿನ ಅಂತಃಪುರದ ಸ್ತ್ರೀಯರ ತಾರುಣ್ಯ ಲಾವಣ್ಯಗಳಿಗೂ ಮಾರುಹೋಗಿ, ಶಾಪ ಪ್ರತಿ ಶಾಪಗಳ

ಗೊಂದಲಕ್ಕೆ ಸಿಕ್ಕಿ ಮತ್ತೆ ಪುನರ್ಜನ್ಮ ತಾಳಿ ಮುಂದುವರಿಯ ಬೇಕಾಗುತ್ತದೆ. ಇಂತಹ ರಚನೆ ಬಾಣಕವಿಗೆ ಮಾತ್ರ ಸಾಧ್ಯ. ಓದುವವರಾಗಲೀ, ಕೇಳುವವರಾಗಲೀ ಆತುರಗೊಳಿಸಿದರೆ ಅನಂತ ಪಾಪಕ್ಕೆ ಗುರಿಯಾಗಬಹುದು ! ಅದು ರಾಜಠೀವಿಯಿಂದ ಮೆರವಣಿಗೆಯಲ್ಲಿಯೇ ಹೋಗಬೇಕು.

ಪ್ರೇಮಚಿತ್ರಣ: ಕಾದಂಬರಿಯಲ್ಲಿನ ಪ್ರೇಮಚಿತ್ರಣದ ವಿಚಾರವಾಗಿ ಒಂದು ಮಾತನ್ನು ಹೇಳದಿದ್ದರೆ ಈ ವಿಮರ್ಶೆಗೆ ಪರಿಪೂರ್ಣತೆ ಒದಗದು. ಮುಖ್ಯವಾಗಿ ಇಲ್ಲಿ ಪ್ರತಿಪಾದಿತವಾಗಿರುವುದು ಕಾದಂಬರಿ—ಚಂದ್ರಾಪೀಡ ಇವರ ಪ್ರೇಮ; ಮತ್ತು ಮಹಾಶ್ವೇತೆ ಪುಂಡರೀಕರ ಪ್ರೇಮ. ಇದರ ಜತೆಗೆ ಚಿಕ್ಕದಾಗಿದ್ದರೂ ಚೊಕ್ಕವಾಗಿಯೇ ಸೂಚಿಸಲ್ಪಟ್ಟಿರುವ ಗಿಳಿಯ ಮಾತಾಪಿತೃಗಳ ಪ್ರೇಮ. ಈ ಕೊನೆಯ ಸಂದರ್ಭದಲ್ಲಿ ತಿರ್ಯಗ್ಜಂತುಗಳಲ್ಲಿಯೂ ಸತಿಪತಿಗಳ ಪ್ರೇಮ ಎಷ್ಟು ಆಕರ್ಷಕವಾಗಿರಬಹುದೆಂಬುದನ್ನು ಎರಡೇ ಮಾತಿನಲ್ಲಿ ಕವಿಯು ಸೂಚಿಸಿದ್ದಾನೆ. ಪ್ರಧಾನವಾಗಿ ಚಿತ್ರಿತವಾಗಿರುವುದು ಮೊದಲನೆಯ ಮತ್ತು ಎರಡನೆಯವೇ. ಇಲ್ಲಿ ಪ್ರೇಮವು ದೈಹಿಕಲಾವಣ್ಯದಿಂದ ಆವಿರ್ಭೂತವಾದರೂ ವಿರಹತಪ್ತವಾಗಿ, ತಪಸ್ಸಿನಿಂದ ಪರಿಶುದ್ಧಗೊಂಡು ತೇಜೋಮಯವಾದ ದೈವತ್ವವನ್ನು ಗಳಿಸಿಕೊಳ್ಳುತ್ತದೆ. ಸತ್ಪ್ರೇಮ-ನೈಜಪ್ರೇಮ-ಅಮರವಾದುದು. ವಿರಹದ ಬೆಂಕಿಯಿಂದ ಬೂದಿಯಾಗಲಾರದು, ನಿರಾಶೆಯ ಪ್ರವಾಹದಲ್ಲಿ ಕೊಚ್ಚಿಹೋಗಲಾರದು, ತಾತ್ಕಾಲಿಕ ಆಕರ್ಷಣೆಗಳ ಗಾಳಿಯಿಂದ ನಂದಿ ಹೋಗಲಾರದು ಈ ಪ್ರೇಮಜ್ಯೋತಿ. ಇಂತಹ ಪ್ರೇಮಚಿತ್ರಣ ಭಾರತೀಯ ಸಂಸ್ಕೃತಿಗೆ ಬಾಣನು ಸಲ್ಲಿಸಿರುವ ಅಮೂಲ್ಯ ಕಾಣಿಕೆ. ಹೀಗೆ ಕಾದಂಬರಿ ಗಾತ್ರದಿಂದ ಮಾತ್ರವಲ್ಲ, ಕಾವ್ಯಗುಣದಿಂದಲೂ ಹಿರಿದೇ.

(ಈ) ಪಾತ್ರ ಪರಿಚಯ

ಕಾದಂಬರಿ : ಕಾದಂಬರಿಯು ಕಥೆಯ ನಾಯಿಕೆ. ಕಥೆಗೆ ಹೆಸರು ಅವಳ ಹೆಸರಿನ ಮೇಲೆಯೇ ಬಂದಿದೆ. ಅವಳ ವಿಷಯವನ್ನು ನಾವು ಕೇಳುವುದು ಮೊದಲು ಅವಳ ಬಾಲ್ಯಸ್ನೇಹಿತೆಯಾದ ಮಹಾಶ್ವೇತೆಯ ಮುಖದಿಂದ. ಗಂಧರ್ವರಾಜ ದಂಪತಿಗಳ ಏಕೈಕ ಪುತ್ರಿಯಾಗಿ ಜನಿಸಿ, ಅಪ್ಸರ ಸೌಂದರ್ಯದಿಂದ ಶೋಭಿಸಿ, ಸಮಸ್ತ ಗಂಧರ್ವಲೋಕಕ್ಕೆ ಕಣ್ಮಣಿಯೆನಿಸಿದಳು. ರೂಪಿನಿಂದಲೂ, ಶೀಲದಿಂದಲೂ ಸರಿಸಮಾನಳಾದ ಮಹಾಶ್ವೇತೆ, ಅವಳ ನೆಚ್ಚಿನ ಸಖಿ. ಅವರ ಹೃದಯ ಒಂದು; ಶರೀರ ಮಾತ್ರ ಎರಡು. ಈ ಕಾರಣದಿಂದಲೇ ಮಹಾಶ್ವೇತೆಯ ದುಃಖವೂ ವೈರಾಗ್ಯವೂ ಕಾದಂಬರಿಯದೂ ಆಯಿತು. ಪ್ರಾಣ ಪ್ರಿಯಸ್ನೇಹಿತೆ ದುಃಖದಲ್ಲಿ ಕೊರಗುತ್ತಿರುವಾಗ ಅವಳು ತನ್ನ ಸ್ವಂತ ಸುಖದ, ಇಲ್ಲವೇ, ಭವ್ಯ ಜೀವನದ ಕಡೆಗೆ ಹೇಗೆ ಮನಕೊಟ್ಟಾಳು? ಮಾತಾಪಿತೃಗಳ ಒಲವಿನ ಮಾತೂ ತಿರಸ್ಕೃತವಾಯಿತು. ಮಹಾಶ್ವೇತೆ ದೂರದಿಂದ ಕಳುಹಿಸಿದ ಅನುನಯದ ನುಡಿಯೂ ಫಲಿಸದಾಯಿತು. ಅವಳ ಈ ತೀರ್ಮಾನವೂ ಚಂದ್ರಾಪೀಡನ ಆಗಮನವೂ ದೈವಬಲದಿಂದ ಸೇರಿಕೊಂಡವು. ಮಹಾಶ್ವೇತೆ ಅಲ್ಲಿಗೇಹೋಗಿ ಕಾದಂಬರಿಗೆ ಸಮಾಧಾನ ಹೇಳಲು ಚಂದ್ರಾಪೀಡನೊಡನೆ ಹೊರಟಳು.

ಹೇಮಕೂಟದ ದಿವ್ಯ ಸೌಂದರ್ಯ; ಕಾದಂಬರಿಯ ಅಂತಃಪುರ. ಇಲ್ಲೇ ನಾವು ಕಾದಂಬರಿಯನ್ನು ಪ್ರಥಮತಃ ನೋಡುವುದು. ಅವಳ ವಿಚಾರ ತಿಳಿದಾಗಿನಿಂದ ಆರಂಭವಾದ ಕುತೂಹಲ ಅವಳ ದರ್ಶನದಿಂದ ವೃದ್ಧಿಗೊಳ್ಳುತ್ತವೆ. ಮನ ಸೂರೆಗೊಳ್ಳುತ್ತದೆ. ಲಾವಣ್ಯ ತಾರುಣ್ಯಗಳಿಂದ ಮೂರ್ತಿಮತ್ತಾದ

ರತಿಯಂತೆ ಶೋಭಿಸುತ್ತಾಳೆ. ವಿನಯ ಲಜ್ಜೆಗಳು ಅವಳ ಕಾಂತಿಯನ್ನು ನೂರ್ಮಡಿಯಾಗಿ ಬೆಳಸುತ್ತವೆ. ಚಂದ್ರಾಪೀಡ ಕಾದಂಬರಿಯರ ಈ ಪ್ರಥಮದರ್ಶನದಲ್ಲಿಯೇ ಪರಸ್ಪರ ಅನುರಾಗ ಅಂಕುರಿಸಿ ಮಹಾಶ್ವೇತೆಯ ಮನಸ್ಸಿನ ಆಸೆ ಈಡೇರುತ್ತದೆ.

ಕಾದಂಬರಿಯ ರೂಪು, ವಿಲಾಸಗಳು ಉಲ್ಲಾಸಕರವಾಗಿರುವಂತೆಯೇ ಅವಳ ವಿನಯ ವ್ಯವಹಾರಗಳೂ ಹಿತಕರವಾಗಿವೆ. ಗಂಧರ್ವ ರಾಜಪುತ್ರಿಯಾದರೂ ವಿನಯಾಧಿದೇವತೆಯೆ. ತಾನೇ ಚಂದ್ರಾಪೀಡನ ದರ್ಶನಾರ್ಥವಾಗಿ ಹೋಗಿ ಅಲ್ಲಿ ಸಾಮಾನ್ಯ ದಾಸಿಯಂತೆ ನೆಲದಮೇಲೇ ಕುಳಿತು ತನ್ನ ಅತಿಥಿಯನ್ನು ಗೌರವಿಸಿ ಎಲ್ಲರ ಒಲವಿಗೆ ಪಾತ್ರಳಾಗುತ್ತಾಳೆ. ಪರಿಚಾರಕರಲ್ಲಂತೂ ಎಷ್ಟೋ ವಿಶ್ವಾಸ, ದಯೆ. ಹಿರಿಯರಲ್ಲಿ ತುಂಬಾ ಗೌರವ.

ಕಾದಂಬರಿಯ ಪ್ರಣಯಚರಿತ್ರೆ ಸ್ತ್ರೀಯ ನಿಷ್ಕಲಂಕ ದೃಢಪ್ರೇಮದ ಒಂದು ಕಾವ್ಯ. ಅಂದಿನಿಂದ ಇಂದಿನವರೆಗೂ ಅದು ಆದರ್ಶವೂ ಅನುಕರಣೀಯವೂ ಆಗಿದೆ. ಹೀಗೆ, ಅವಳ ಹೆಸರು ಮಧುವನ್ನು ಚೆಲ್ಲುವಂತೆ, ಅವಳ ಚರಿತೆ ಶೀಲವನ್ನು ಚಿಮ್ಮುತ್ತದೆ. ಕೃಪಣತೆಯಿಲ್ಲದ ಕವಿಯ ಪ್ರತಿಭೆಯು ಅವಳ ವರ್ಣನೆಯಲ್ಲಿ ನಿರಂತರವಾದ ಕಲ್ಪನೆಯ ಮಳೆಯನ್ನೇ ಕರೆದಿದೆ.

ಮಹಾಶ್ವೇತೆ : ಮಹಾಶ್ವೇತೆ ಹಂಸನೆಂಬ ಗಂಧರ್ವನ ಗೌರಿಯೆಂಬ ಅಪ್ಸರ ಸ್ತ್ರೀಯ ಒಬ್ಬಳೇ ಮಗಳು. ಆಕರ್ಷಣೀಯವಾದ ವರ್ಣದಿಂದ ಕೂಡಿದ್ದ ಅವಳಿಗೆ ಮಹಾಶ್ವೇತೆಯೆಂದೇ ನಾಮಕರಣ ಮಾಡಿದರು. ಬಾಲ್ಯದಿಂದಲೂ ಗಂಧರ್ವರಾಜಪುತ್ರಿ ಕಾದಂಬರಿಗೆ ಆಪ್ತ ಸ್ನೇಹಿತಳಾದಳು.

ಸುಖವಾಗಲೀ ದುಃಖವಾಗಲೀ ಒಬ್ಬರನ್ನೊಬ್ಬರು ದೂರ ಮಾಡುತ್ತಿರಲಿಲ್ಲ.

ಮಹಾಶ್ವೇತೆಯ ಪ್ರಥಮ ದರ್ಶನವಾಗುವುದು ಅಚ್ಛೋದ ಸರಸ್ಸಿನ ದಡದ ಮೇಲೆ, ರಮ್ಯವಾಗಿದ್ದ ಏಕಾಂತ ಸಿದ್ಧಾಯತನ ದಲ್ಲಿ. ಆ ವೇಳೆಗೆ ಅವಳು ಜೀವನದ ಸಿಹಿ ಕಹಿಗಳನ್ನು ಅನುಭವಿ ಸಿದ್ದಳು. ಸಿಹಿಗಿಂತ ಕಹಿಯೇ ಹೆಚ್ಚಾಗಿತ್ತು. ಅರುಂಧತಿಯ ಪಾರ್ಥಿವ ವಿಗ್ರಹದಂತಿದ್ದ ಅವಳ ದರ್ಶನದ ಮೊದಲ ಕ್ಷಣ ದಲ್ಲೇ ಚಂದ್ರಾಪೀಡನಿಗೆ ಅವಳಲ್ಲಿ ಅಪೂರ್ವ ಭಕ್ತಿಭಾವ ಅಂಕುರಿಸಿತು. ಕುತೂಹಲವೂ ಕೆರಳಿತು. ಅವಳ ಕಥೆ ಹೃದಯವಿದ್ರಾವಕವಾಗಿದ್ದು—ಅವಳು ಸಮಸ್ತ ಜೀವನದ ವೈರಾಗ್ಯ ಹಾಗೂ ಕಷ್ಟಗಳ ಸಾಕ್ಷಾತ್ ಪ್ರತಿಮೆಯೆನ್ನುವುದರ ಅರಿವಾಯಿತು. ಆ ಶಾಂತ ಸ್ನಿಗ್ಧ ಮುಖಶ್ರೀಯೊಳಗೆ ಎಂತಹ ವ್ಯಥೆ ಅಡಗಿತ್ತು!

ಮಹಾಶ್ವೇತೆಯ ಲಾವಣ್ಯವು ಅದ್ವಿತೀಯವಾಗಿದ್ದಂತೆಯೇ ಅವಳ ಶೀಲ ಚಾರಿತ್ರವೂ ನಿಷ್ಕಳಂಕವಾದುದು. ಪುಂಡರೀಕ ನಂತಹ ಮುನಿವರ್ಷಿಯನ್ನು ಆಕರ್ಷಿಸಿದ ಕಮಲ ಕೋಮಲ ಲಾವಣ್ಯ-ಕಾಂಚನ ಕಮಲದ ದೃಢತೆಯನ್ನೂ ಪಡೆದಿತ್ತು. ಪ್ರೇಮದೇವತೆಯನ್ನು ಶಾರೀರಕ ಶೃಂಗಾರ ಬಹುಕಾಲ ಸಂತೋಷಪಡಿಸಲಾರದು. ದಿವ್ಯ ತಪಸ್ಸಿನ ಮೂಸೆಯಲ್ಲಿ ಪರಿಶುದ್ಧವಾದ ಪ್ರೇಮ ಮಾತ್ರ ಅಮರ ಕಾಂತಿ ಪಡೆಯ ಬಲ್ಲದು. ಅಂತೆಯೇ ಭಗ್ನಪ್ರೇಮಳಾದ ಈ ಕುಸುಮ ಕೋಮಲಾಂಗಿ ಉಗ್ರವ್ರತ ಕೈಗೊಂಡುದು; ತದೇಕ ಮನಸ್ಕ ಳಾಗಿ ಪುಂಡರೀಕನ ಪುನರಾಗಮನವನ್ನು ನಿರೀಕ್ಷಿಸಿದುದು. ಈ ವ್ರತಧಾರಿಣಿಯ ಚರಿತ್ರೆಯನ್ನೂ, ಅವಳಿಂದ ಭಾರತದ ಸ್ತ್ರೀತ್ವ

ವನ್ನೂ ಹೆಮ್ಮೆಯ ಸಾಲಿನಲ್ಲಿರುವಂತೆ ಮಾಡಿತು. ಇದರಿಂದ ಅವಳು ಸತೀತ್ವದ ಎಲ್ಲೆಯಾಗಿ, ಪಾತಿವ್ರತ್ಯದ ಪರಾಕಾಷ್ಠತೆಯಾಗಿ ಸ್ತ್ರೀ ಧರ್ಮದ ಅಲಂಕಾರವಾಗಿದ್ದಾಳೆ.

ಮಹಾಶ್ವೇತೆಯ ರೂಪು ಅವಳ ಪಾತಿವ್ರತ್ಯದ ವ್ರತದಿಂದ ಕಾಂತಿಗೊಂಡಂತೆಯೇ, ಕಾದಂಬರಿಯಲ್ಲಿಟ್ಟಿದ್ದ ಅವಳ ಪ್ರೇಮ ಸ್ವಚ್ಛತೆಯಿಂದ ಶೋಭೆಗೊಂಡಿದೆ. ತನ್ನ ಕಷ್ಟದಿಂದ ಸಖಿಯೂ ಕಷ್ಟಪಡಬಾರದೆಂದೇ ಅವಳು ಹಿತವಚನಗಳನ್ನು ಹೇಳಿ ಕಳುಹಿಸಿದುದು:—ಅನಂತರ ಆ ಉದ್ದೇಶ ಸಾಧನೆಗಾಗಿಯೇ ಚಂದ್ರಾಪೀಡನನ್ನೂ ಕರೆದುಕೊಂಡು ಹೇಮಕೂಟಕ್ಕೆ ಹೋದುದು. ಅವಳ ಸ್ವಾರ್ಥರಹಿತ–ಸ್ವಚ್ಛಪ್ರೇಮ ಆದರ್ಶವಾದುದು, ಅನುಕರಣೀಯವಾದುದು. “ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ”—ಎಂಬ ಮಾತಿಗೆ ಅವಳೂ ಒಂದು ಅಮೂಲ್ಯ ದೃಷ್ಟಾಂತ. ಅವಳು ಕಾವ್ಯಲತೆಯ ಅಪೂರ್ವ ಕುಸುಮ, ಪ್ರೇಮ–ತಪಸ್ಸುಗಳ ಸುಧಾ ಸಮನ್ವಯ.

ಪತ್ರಲೇಖೆ: ಕಾದಂಬರೀ ಕಥೆಯಲ್ಲಿ ಮುಖ್ಯ ಪಾತ್ರಗಳನ್ನು ಬಿಟ್ಟರೆ ಪತ್ರಲೇಖೆಯೆ ನಮ್ಮ ಚಿತ್ತ ಕ್ಷೇತ್ರದಲ್ಲಿ ಚಿರಕಾಲ ಉಳಿಯಲರ್ಹವಾದವಳು. ಅನೇಕ ವೇಳೆ ಕವಿಗಳು ಕಾವ್ಯದ ನಾಯಕ ನಾಯಿಕೆಯರಿಗಾಗಿ ಎಷ್ಟೊ ಅಕ್ಷಯ ಪ್ರತಿಮೆಗಳನ್ನು ಕಡೆದಿಡುತ್ತಾರೆ. ಆದರೆ ಆ ಮಹಾಕಾವ್ಯದ ಓಟದಲ್ಲಿ ಆ ಎಲ್ಲ ಪಾತ್ರಗಳ ಕಡೆಗೆ ಕವಿಯ ಗಮನ ಹೆಚ್ಚಾಗಿ ಹರಿಯಲಾರದು. ಇಂತಹ ಸಳ ಸಂಕೋಚದಿಂದ ಸೂಕ್ಷ್ಮವಾಗಿ ಬಾಳಿದ ಇವರು ಇದ್ದ ಸ್ವಲ್ಪ ಕಾಲದಲ್ಲಿಯೇ ತಮ್ಮ ಗುಣವನ್ನು ಪ್ರದರ್ಶಿಸಿ ಪಾಠಕರ ಹೃದಯದಲ್ಲಿ ಚಿರಂತನ

ಆಶ್ರಯವನ್ನು ಪಡೆಯುತ್ತಾರೆ. ಕಾದಂಬರಿಯ ಪತ್ರಲೇಖೆ ಈ ಗುಂಪಿಗೆ ಸೇರಿದವಳು.

ಪತ್ರಲೇಖೆಯು ಪರಾಜಿತನಾಗಿದ್ದ ಕುಲೂತೇಶ್ವರನ ಮಗಳು. ವಿಲಾಸವತಿಗೆ ಆಗ ಮಕ್ಕಳಿಲ್ಲದಿದ್ದುದರಿಂದ ಅವಳನ್ನು ತನ್ನ ಬಳಿಗೇ ಕರೆತಂದು ಸಾಕಿದಳು. ಮುಂದೆ ಮಗ ಚಂದ್ರಾಪೀಡನು ಯುವರಾಜನಾದಾಗ ಅವನ ಸೇವೆಗೆಂದು ಅವನಲ್ಲಿ ಅವಳನ್ನು ಒಪ್ಪಿಸಿದಳು. ಅವಳನ್ನು ಯಾವ ದೃಷ್ಟಿಯಿಂದ, ಬಾಂಧವ್ಯದಿಂದ ನೋಡಿಕೊಳ್ಳಬೇಕೆಂಬುದನ್ನೂ ಹೇಳಲು ಮರೆಯಲಿಲ್ಲ. ಹೀಗೆ ರಾಜಕುಮಾರಿಯಾಗಿ ಜನಿಸಿ, ತಂದೆ ತಾಯಿಗಳನ್ನು ಕಳೆದುಕೊಂಡು ಅನಾಥೆಯಾಗಿ, ವಿಲಾಸವತಿಯ ಮಮತೆಯಿಂದ ಬೆಳೆದ ಪತ್ರಲೇಖೆ ಯೌವನ ಪ್ರಾದುರ್ಭಾವ ಸಮಯದಲ್ಲಿ ಯುವರಾಜನ ಊಳಿಗದವಳಾಗಿ ಸೇರುತ್ತಾಳೆ. ಚಂದ್ರಾಪೀಡನನ್ನು ನೆರಳಿನಂತೆ ಅನುಸರಿಸುತ್ತಾಳೆ. ರಾತ್ರಿ ಮಲಗುವಾಗಲೂ ಮಿತ್ರಳಂತೆ ಅನತಿ ದೂರದಲ್ಲೇ ಇರುತ್ತಾಳೆ—ಜೈತ್ರಯಾತ್ರೆಯಲ್ಲಿ ಒಂದೇ ಆನೆಯಮೇಲೆ ಜೊತೆಯಲ್ಲಿ ಕುಳಿತು ಹೋಗುತ್ತಾಳೆ. ಚಂದ್ರಾಪೀಡನಿಗೂ ಆಕೆಯಲ್ಲಿ ಕ್ಷಣಕ್ಷಣಕ್ಕೂ ಪ್ರೀತಿ ಹೆಚ್ಚುತ್ತಿದ್ದು ವಿಶ್ವಾಸಾರ್ಹವಾದ ಯಾವ ಕಾರ್ಯದಲ್ಲೂ ತನ್ನ ಹೃದಯ ಬೇರೆಯಲ್ಲ—ಆಕೆ ಬೇರೆಯಲ್ಲ—ಎಂಬ ಭಾವನೆಯಿರುತ್ತದೆ.

ಈ ಪುರುಷ ಸ್ತ್ರೀ ಸಂಬಂಧ ಜಗತ್ತಿಗೇ ಅದ್ಭುತವಾದದ್ದು, ಮಧುರವಾದದ್ದು. ಪತ್ರಲೇಖೆ ಚಂದ್ರಾಪೀಡನ ಪತ್ನಿಯಲ್ಲ, ಪ್ರಿಯಳಲ್ಲ, ಸೇವಕಿಯಲ್ಲ. ಅವರ ಸಂಬಂಧ ಒಂದು ವಿಚಿತ್ರವಾದುದು. ಇದನ್ನು ಶ್ರೇಷ್ಠವಾದ ನಯಕುಂಚದಿಂದ ಕವಿ ರಚಿಸಿದ್ದಾನೆ. ಅವಳು ತನ್ನ ಜಾಗವನ್ನು ಬಿಟ್ಟು ಒಂದು ಗೆರೆ

ಯಷ್ಟಾದರೂ ಮೇರೆ ಮೀರಿ ನಡೆಯಲಿಲ್ಲ. ಚಂದ್ರಾಪೀಡನ ಹೃದಯದ ಸಮೀಪವರ್ತಿನಿಯಾಗೇ ಇದ್ದಳು. ಆದರೆ ಹೃದಯ ವರ್ತಿನಿಯಾಗಲಿಲ್ಲ. ಈ ಸಖೀತ್ವದ ಪರದೆಯ ತುದಿಯನ್ನು ಸಹ ಓರೆ ಮಾಡದಂತೆ ಸಂಯತಗೊಳಿಸಿದ್ದಾನೆ—ಕವಿ ಈಕೆಯ ಪಾತ್ರರಚನೆಯಲ್ಲಿ. ಏಕೆಂದರೆ ಚಂದ್ರಾಪೀಡ ಪತ್ರಲೇಖೆಯರ ಈ ಬಾಂಧವ್ಯದಲ್ಲಿ ಸಂಶಯವನ್ನಾಗಲೀ, ಆಶಂಕೆಯನ್ನಾಗಲೀ ತರುವ ಅವಕಾಶವನ್ನು ಎಲ್ಲಿಯೂ ಕೊಟ್ಟಿಲ್ಲ.

ಚಂದ್ರಾಪೀಡನಿಗೆ ಕಾದಂಬರಿಯ ದರ್ಶನದಿಂದ ಎಂತಹ ಸಂಭ್ರಮ ಒದಗಿತೋ ತಿಳಿದೆವು. ಆದರೆ ಅವಳಂತೆ ರಾಜ ಕುಮಾರಿಯಾಗಿದ್ದು, ಯೌವನದ ಹೊಸಲಿನಲ್ಲಿದ್ದು, ಲಾವಣ್ಯ ಮಯಿಯಾಗಿದ್ದ ಪತ್ರಲೇಖೆಯ ಪ್ರಣಯ ವಿಚಾರಗಳೇನು? ಪುರುಷರತ್ನನಾದ ಚಂದ್ರಾಪೀಡನು ಯಾವಾಗಲೂ ಜೊತೆ ಯಲ್ಲಿದ್ದರೂ, ತನ್ನ ಸುಖವನ್ನು ತ್ಯಾಗಮಾಡಿ ಅವನಿಗೆ ಕಾದಂಬರಿಯ ಗುಣೋತ್ಕರ್ಷತೆ, ವಿರಹವನ್ನು ವರ್ಣಿಸುವ ಅವಳ ಉದಾತ್ತ ಗುಣದ ಹಿರಿಮೆಯೆಷ್ಟು? ಮಾನವ ಜಾತಿಗೆ ಸಹಜವಾದ ಪ್ರೇಮ ಮಾತ್ಸರ್ಯಗಳು ಇವಳ ಬಳಿಗೆ ಹೇಗೆ ಸುಳಿಯದಾದವು? ಕಾದಂಬರಿಯ ಶಂಕೆಗೆ ಒಮ್ಮೆಯಾದರೂ ಸಿಕ್ಕದ ಇದೆಂತಹ ಸಂಯಮ? ಮುಂತಾದ ಪ್ರಶ್ನೆಗಳು ಆಶ್ಚರ್ಯವನ್ನುಂಟುಮಾಡುತ್ತವೆ. ಜೊತೆಗೆ ವರ್ಣನಾ ಬಾಹು ಳ್ಯವೇ ಬಾಣನ ಕಾವ್ಯದ ಶೃಂಗಾರವಾದರೂ ಇವಳನ್ನೇಕೆ ಪೂರ್ತಿಯಾಗಿ ವರ್ಣಿಸದೆ ಇಕ್ಕಟ್ಟಿನಲ್ಲಿಟ್ಟಿದ್ದಾನೆ? ಎನಿಸುತ್ತದೆ. ಸಾವಧಾನವಾಗಿ ಯೋಚಿಸಿದರೆ ಇಲ್ಲಿನ ವರ್ಣನಾ ಸಂಯಮವೇ ಈ ಪಾತ್ರ ಸೃಷ್ಟಿಯಲ್ಲಿ ಬಾಣನು ತೋರಿಸಿರುವ ಮಹತ್ಕೌಶಲ. ಇಲ್ಲಿ ಧ್ವನಿಯೂ, ರಸವೂ, ಉನ್ನತ ಕಲೆಗಾರಿಕೆಯಿಂದ ಸೃಷ್ಟಿ

ಗೊಂಡಿವೆ. ಈ ಪಾತ್ರ ಸೃಷ್ಟಿಯು ಕೀರ್ತಿದೇವತೆಯ ಮುಂದೆ ಬಾಣನು ಹಚ್ಚಿಟ್ಟಿರುವ ಆರದ ನಂದಾದೀಪ.

ಚಂದ್ರಾಪೀಡ : ಪುಂಡರೀಕನಿಂದ ಶಾಪ ಪಡೆದ ಚಂದ್ರನೇ ಚಂದ್ರಾಪೀಡ. ಉಜ್ಜಯನಿ ರಾಜದಂಪತಿಗಳಾಗಿದ್ದ ತಾರಾಪೀಡ—ವಿಲಾಸವತಿಯರ ಪುತ್ರರತ್ನನಾಗಿ ಜನಿಸಿ ಕಾಲಕ್ರಮದಲ್ಲಿ ಸರ್ವಶಾಸ್ತ್ರಗಳಲ್ಲಿಯೂ, ಶಸ್ತ್ರಗಳಲ್ಲಿಯೂ ಪಾಂಡಿತ್ಯ ಪಡೆದು ತಂದೆತಾಯಿಗಳ ಕಣ್ಬೆಳಕಾಗಿ ಶೋಭಿಸಿದ. ಕಾದಂಬರಿ ಮಹಾಶ್ವೇತೆಯರ ಸ್ನೇಹದಂತೆ ವೈಶಂಪಾಯನ ಚಂದ್ರಾಪೀಡರ ಸ್ನೇಹ ಗಾಢವಾದುದು. ಇವರು ಒಬ್ಬರನ್ನೊಬ್ಬರು ಬಿಟ್ಟಿರದೆ ಯಾವಾಗಲೂ ಜೊತೆಯಲ್ಲಿಯೇ ಇರುತ್ತಿದ್ದರು.

ಚಂದ್ರಾಪೀಡನಿಗಿದ್ದ ನಿಸರ್ಗ ಸೌಂದರ್ಯಾಸ್ವಾದನೆಯ ಅಭಿರುಚಿಯು ಅವನಿಗೆ ಕಿನ್ನರ ಮಿಥುನದ ದರ್ಶನ ಮಾಡಿ ಕೊಟ್ಟಿತು. ರಾಜಕುಮಾರನಿಗೆ ಸಹಜವಾದ ಶಕ್ತಿ ಉತ್ಸಾಹಗಳು ಅವನಲ್ಲಿ ಅಪರಿಮಿತವಾಗಿದ್ದು ಕಿನ್ನರ ಮಿಥುನವನ್ನು ಹಿಡಿಯಲೇಬೇಕೆಂಬ ಬುದ್ಧಿ ಬೆಳೆಯಿತು. ಅದೇನೋ ಸಿಕ್ಕಲಿಲ್ಲ. ಆದರೆ ಆ ಬೇಡಿಕೆ ನಿರರ್ಥಕವೂ ಆಗಲಿಲ್ಲ—ಮಹಾಶ್ವೇತೆಯ ದರ್ಶನವಾಯಿತು. ಅಲ್ಲಿಂದ ಮುಂದೆ ಕಾದಂಬರಿಯ ದರ್ಶನವೂ ಆಯಿತು.

ಉನ್ನತ ಸಂಸ್ಕೃತಿಯ ರಾಜಮನೆತನದಲ್ಲಿ ಹುಟ್ಟಿದ ಚಂದ್ರಾಪೀಡನು ಕ್ಷೀರಸಾಗರದಿಂದ ಉದ್ಭವಿಸಿದ ಚಂದ್ರನಂತೆ ಗುಣದಿಂದಲೂ ರೂಪಿನಿಂದಲೂ ಆಕರ್ಷಣೀಯನಾಗಿದ್ದನು. ರಾಜಪುತ್ರನಿಗೆ ಸಹಜವಾದ ಶೌರ್ಯ ಸ್ಥೈರ್ಯಗಳು ಅವನಲ್ಲಿ ನೆಲೆಗೊಂಡಿದ್ದವು. ಅಂತೆಯೇ ವಿನಯದಿಂದಲೂ, ಗುರು ಹಿರಿಯರಲ್ಲಿನ ಭಕ್ತಿಯಿಂದಲೂ, ಉಜ್ವಲ ಶೀಲನಾಗಿಯೂ ಇದ್ದನು.

ಚಂದ್ರಾಪೀಡ ಕಾದಂಬರಿಯರ ಪ್ರೇಮವು ಭಾರತದ ಇತಿಹಾಸಕ್ಕೇ ಒಂದು ನೆಚ್ಚಿನ ಕಾಣಿಕೆ.

ವೈಶಂಪಾಯನ : ವೈಶಂಪಾಯನನು ಉಜ್ಜಯನಿಯ ಮಂತ್ರಿ ಶುಕನಾಸನ ಮಗ. ಅವನ ತಾಯಿ ಮನೋರಮೆ. ಚಂದ್ರಾಪೀಡನ ಜನ್ಮವಾದಾಗಲೇ ಇವನೂ ಜನಿಸಿದುದು. ಚಿಕ್ಕಂದಿನಿಂದಲೂ ಚಂದ್ರಾಪೀಡನ ಜತೆಯಲ್ಲಿಯೇ ಬೆಳೆದ. ಅವನಷ್ಟೇ ಶಸ್ತ್ರಗಳಲ್ಲಿಯೂ ಶಾಸ್ತ್ರಗಳಲ್ಲಿಯೂ ಪಂಡಿತನಾದ. ವಿನಯ ವ್ಯವಹಾರಾದಿಗಳಲ್ಲೂ ರಾಜಪುತ್ರನ ಪ್ರತಿಬಿಂಬವೇ. ಚಂದ್ರಾಪೀಡನಿಗೆ ಯೌವರಾಜ್ಯಭಿಷೇಕವಾದುದು ಇವನಿಗೂ ಒಂದು ಹೆಮ್ಮೆ. ಜೈತ್ರಯಾತ್ರೆಗಾಗಿ ಹೊರಟುನಿಂತ ಚಂದ್ರಾಪೀಡನ ಪಕ್ಕದಲ್ಲಿಯೇ ತಾನೂ ಸಿದ್ಧನಾಗಿ ನಿಂತ. ಇವರು ಸೂರ್ಯಚಂದ್ರರಂತೆ ಶೋಭಿಸುತ್ತಾರೆ. ಮುಂದೆಯೂ ಒಬ್ಬರನ್ನೊಬ್ಬರು ಅಗಲದೆ ಇರುತ್ತಾರೆ. ಆದರೆ ಕಿನ್ನರ ಮಿಥುನವನ್ನು ಹಿಡಿಯಬೇಕೆಂಬ ಚಂದ್ರಾಪೀಡನ ಆಸೆ ಅವನನ್ನು ವೈಶಂಪಾಯನನಿಂದ ದೂರು ಮಾಡುತ್ತದೆ. ಇದರ ಪರಿಣಾಮವಾಗಿ ವೈಶಂಪಾಯನನು ರಾಜಕುಮಾರನನ್ನು ಹುಡುಕುತ್ತಾ ಕುದುರೆಯ ಗೊರಸಿನ ಗುರುತನ್ನು ಹಿಡಿದುಬಂದು ಮಹಾಶ್ವೇತೆಯ ಆಶ್ರಮವನ್ನು ಸೇರುತ್ತಾನೆ. ಇದು ಅವನ ಜೀವನ ಕಥೆಯಲ್ಲಿನ ಒಂದು ದೊಡ್ಡಘಟ್ಟ. ಮುಂದೆ ಚಂದ್ರಾಪೀಡನು ತಂದೆಯ ಆಜ್ಞೆಯಂತೆ ಆತುರನಾಗಿ ಹೊರಟು ವೈಶಂಪಾಯನನ್ನು ಸೈನ್ಯದೊಡನೆ ನಿಧಾನವಾಗಿ ಹಿಂಬಾಲಿಸಿ ಬರುವಂತೆ ತಿಳಿಸುತ್ತಾನೆ. ಆದರೆ ಪೂರ್ವಜನ್ಮದ ಸಂಸ್ಕಾರ; ಮಹಾಶ್ವೇತೆಯನ್ನು ನೋಡಿದೊಡನೆಯೇ ಅವನ ಮನಸ್ಸು ಅನಿರ್ವಚನೀಯವಾದ ಒಂದು ಭಾವನೆಯನ್ನು ತಳೆದು ಆ ಜಾಗಕ್ಕೇ ಅಂಟಿಕೊಳ್ಳು

ವಂತೆ ಮಾಡುತ್ತದೆ. ಬ್ರಾಹ್ಮಣ ಕುಮಾರನೊಬ್ಬನು ಇಂದ್ರಿಯ ನಿಗ್ರಹವನ್ನು ಕಳೆದುಕೊಂಡು ಪರಸ್ತ್ರೀಯನ್ನು ಕಾಮಿಸುವುದು ಆಶ್ಚರ್ಯವಾಗುತ್ತದೆ. ಸೈನಿಕರು ಅವನ ಸ್ವಚ್ಛ ಚಾರಿತ್ರವನ್ನರಿತಿದ್ದರು, ಅವರಿಗೆ ಇದರ ಗುಟ್ಟು ಹೇಗೆ ತಿಳಿಯಬೇಕು? ಇದೇ ಜಾಗದಲ್ಲಿಯೇ ತನ್ನ ಹಿಂದಿನ ಪುಂಡರೀಕನ ಜನ್ಮದಲ್ಲಿ ತಾನು ಮಹಾಶ್ವೇತೆಯನ್ನು ನೋಡಿ ವಿರಹಗೊಂಡಿದ್ದು, ತತ್ಫಲವಾಗಿ ಮೃತಿಪಡೆದಿದ್ದುದು. ಈಗಲೂ ಮಹಾಶ್ವೇತೆಯ ಪ್ರೇಮ ಕುಂದಿಲ್ಲ. ಆದರೆ ಶಾಪಕ್ಕೆ ಸಿಕ್ಕಿ ತಕ್ಷಣ ಅವಳನ್ನು ಪಡೆಯು ವಂತೆ ಇಲ್ಲ. ಇದು ಮಧ್ಯದ ಜನ್ಮ. ಯಾವ ಜನ್ಮವಾದರೇನು? ಸ್ವಚ್ಛಪ್ರೇಮ ಅಮರವಾಗಿರುವುದು. ಆದರೆ ಶಾಪದ ಪ್ರಭಾವ; ಅವನಾರೆಂಬುದೂ ಅವಳಿಗೆ ತಿಳಿಯದು. ತನ್ನ ಶೀಲ ರಕ್ಷಣೆಗೆಂದು ಅವನನ್ನೇ ಗಿಣಿಯಾಗೆಂದು ಶಪಿಸಿದಳು. ಅವನು ಕೂಡಲೇ ಮಾನವ ಜನ್ಮತೊರೆದು ಗಿಳಿಯಾಗಿ ಹಾರಿದ. ಅಂತೂ ಇದು ದುಃಖದ ಅಂತ್ಯಕ್ಕೆ ಮೊದಲು.

ಬಾಣನು ಪುಂಡರೀಕ ಮಹಾಶ್ವೇತೆಯರ ಪ್ರೇಮ ಚಿತ್ರಣ ಕಾರ್ಯದಲ್ಲಿ ಉನ್ನತ ಕೌಶಲವನ್ನೂ, ಆದರ್ಶವನ್ನೂ ಸಾಧಿಸಿದ್ದಾನೆ. ಪ್ರೇಮ—ನಿಷ್ಕಲಂಕವಾದರೆ ಉಳಿದ ವ್ಯಕ್ತಿಗಳನ್ನೂ ಅಮರರನ್ನಾಗಿ ಮಾಡುವುದು. ಇಲ್ಲಿ ನಾವು ನೋಡುವುದೂ ಇದನ್ನೇ.

೫. ಬಾಣನ ಶೈಲಿ

ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಪದ್ಯಕಾವ್ಯ ಲೇಖಕರಲ್ಲಿ ಕಾಳಿದಾಸನಿಗೆ ಸಂದಿರುವ ಹಿರಿಯ ಸ್ಥಾನವೇ ಗದ್ಯಕಾವ್ಯ ಲೇಖಕರಲ್ಲಿ ಬಾಣಭಟ್ಟನಿಗೆ ಸಂದಿದೆ. ಸಂಸ್ಕೃತ ಆಲಂಕಾರಿಕರು ಅವನ ಕೃತಿಗಳನ್ನು ಪಾಂಚಾಲೀ ರೀತಿಗೆ ಶ್ರೇಷ್ಠ

ನಿದರ್ಶನಗಳೆಂದು ಸ್ತುತಿಸಿದ್ದಾರೆ. ಶಬ್ದಾಲಂಕಾರಗಳೂ, ಅರ್ಥಾಲಂಕಾರಗಳೂ ಹಿತವಾಗಿ ಬೆರತು ಲಲಿತಪದ ವಿನ್ಯಾಸ ದಿಂದ ಕೂಡಿರುವುದೇ 'ಪಾಂಚಾಲೀ ರೀತಿ'. ಈ ದೃಷ್ಟಿ ಯಿಂದ ನೋಡಿದರೆ ಬಾಣನ ಗದ್ಯ ಕೃತಿಗಳಾದ ಹರ್ಷಚರಿತೆ ಮತ್ತು ಕಾದಂಬರಿಗಳ ಪೈಕಿ ಕಾದಂಬರಿಯೇ ಹೆಚ್ಚಿನ ಪ್ರಖ್ಯಾತಿ ಗಳಿಸಿದೆ. ಹರ್ಷಚರಿತೆಯಲ್ಲಿ ಕವಿಯ ಶೈಲಿ ಇನ್ನೂ ಹುಳಿ ಗಾಯಿಯಾಗಿದೆ, ಪಕ್ವವಾಗಿಲ್ಲ. ಕೆಲವೊಮ್ಮೆ ಅಪರೂಪವಾದ ಪದಗಳೂ, ಪ್ರಯೋಗಗಳೂ ಇಲ್ಲಿ ಬರುತ್ತವೆ. ಬರವಣಿಗೆಯೂ ಅಷ್ಟೇನೂ ತಿಳಿಯಾಗಿರದೆ ಪಂಡಿತರಿಗೂ ಅನೇಕವೇಳೆ ಕ್ಲಿಷ್ಟವೇ ಆಗುತ್ತದೆ.

ಕಾದಂಬರಿಯ ಕಥೆಯು ಅದ್ಭುತವಾಗಿರುವಂತೆಯೇ ಅದನ್ನು ಹೇಳುವ ವಿಧಾನವೂ ಅದ್ಭುತವಾಗಿಯೇ ಇದೆ. ಕಥೆಯು ಪ್ರಾರಂಭವಾಗುವುದು ಅಂತ್ಯಭಾಗಕ್ಕೆ ಎಲ್ಲೋ ಸ್ವಲ್ಪ ಮುಂಚೆ. ಅದರಿಂದ ಓದುಗರ ಕುತೂಹಲ ಕೆರಳಿ ಕಥೆಯಲ್ಲಿ ಉತ್ಸಾಹ ತವಕತೆಗಳು ಹುಟ್ಟುತ್ತವೆ. ಆದರೆ ಕಥೆಯೊಳಗೆ ಕಥೆ ಬಂದು ನಮಗೆ 'ಅರೇಬಿಯನ್ ನೈಟ್ಸ್' ಕಥೆಯ ಜ್ಞಾಪಕ ಬರುತ್ತದೆ. ಇದನ್ನು ಶ್ಲಾಘ್ಯವಾಗಿ ನಿರ್ವಹಿಸಬೇಕಾದರೆ ಬಾಣನಂತಹ ಹುಟ್ಟುಕಥೆಗಾರನಿಗೆ ಮಾತ್ರಾ ಸಾಧ್ಯವೆಂದು ನಮಗನ್ನಿಸುತ್ತದೆ.

ಕಥೆಯ ಓಟವು ಬಹು ನಿಧಾನ. ಉದ್ದಕ್ಕೂ ವರ್ಣನಾ ಬಾಹುಳ್ಯಕ್ಕೂ, ಪದಪ್ರೌಢಿಮೆಗೂ, ಅಲಂಕಾರ ಕೌಶಲಕ್ಕೂ, ಕವಿ ಸಮಯಕ್ಕೂ ಪ್ರಾಶಸ್ತ್ಯ ಸಿಕ್ಕಿದೆ. ಮುಖ್ಯವಾದುದಾ ಗಿರಲಿ, ಬಿಡಲಿ, ವ್ಯಕ್ತಿಗಳ, ಸನ್ನಿವೇಶಗಳ, ನಿಸರ್ಗದೇವತೆಯ ರಮ್ಯ, ರೌದ್ರ ಸ್ವರೂಪಗಳ ವರ್ಣನೆಗಳು ಸಾಲು ಸಾಲಾಗಿ ಬರುತ್ತವೆ. ವರ್ಣನಾ ಪರಿಪೂರ್ಣತೆಯೇ ಬಾಣನ ಕಾವ್ಯ

ಸಿದ್ಧಾಂತ. ಈ ವರ್ಣನೆಗಳಲ್ಲಿ ಕವಿಯ ಅದ್ಭುತ ಕಲ್ಪನಾ ಶಕ್ತಿಯೂ, ಪುರಾಣಪ್ರಸಿದ್ಧ ಕಥೆಗಳೂ, ಕವಿಸಮಯಗಳೂ, ಜಾನಪದ ಸಂಪ್ರದಾಯಗಳೂ ಗೊಂಚಲು ಗೊಂಚಲಾಗಿ ಬೆಳೆದುನಿಂತು ಓದುಗರ ಜ್ಞಾನಕ್ಕೆ ಒರೆಗಲ್ಲಾಗುತ್ತದೆ.

ವಾಕ್ಯರಚನೆಯಲ್ಲಂತೂ ಬಾಣನ ಕಲೆಗಾರಿಕೆ ಅನುಪಮವಾದುದು. ಸರಸ್ವತಿಯ ಸಮಗ್ರ ಭಂಡಾರದ ಸ್ವಾಮ್ಯವೂ ಅವನಿಗಿದ್ದಂತೆ ತೋರುತ್ತದೆ. ಅಪೇಕ್ಷಿಸಿದ ಕೂಡಲೇ ಹತ್ತಾರು, ನೂರಾರು, ಸಹಸ್ರಾರು ಪದಗಳು ಅವನ ಮುಂದೆ ಸಿದ್ಧವಾಗಿ ಬಂದು ನಿಲ್ಲುತ್ತವೆ. ಈ ಪದಗಳನ್ನು ಹೆಣೆದು ನೀಳವಾದ ಸಮಾಸ ಪದವೊಂದನ್ನು ನಿರಾಯಾಸವಾಗಿ ರಚಿಸಿ ನಿಲ್ಲಿಸುತ್ತಾನೆ. ಇಂತಹ ನೀಳ ಸಮಾಸ ಪದಗಳಿಗೆ ಪ್ರಸಿದ್ಧಿಗಳಿಸಿ— 'Sesquepedalian Majesty' ಎಂಬ ಗಾಂಭೀರ್ಯಕ್ಕೆ ಹೆಸರಾಂತ ಗ್ರೀಕ್ ಭಾಷೆಯೂ ಬಾಣನ ಈ ಕಲಾಕೌಶಲಕ್ಕೆ ತಲೆಬಾಗಬೇಕಾಗುತ್ತದೆ. ಈ ರೀತಿ ದೀರ್ಘ ಸಮಾಸಪದಗಳು ಬಾಣನ ಗದ್ಯ ಕೃತಿಗಳಲ್ಲಿ ವಿಪುಲವಾಗಿದ್ದು, ಕೃತಿಯ ಯಾವ ಪುಟ ತೆಗೆದರೂ ಸಾಲುಸಾಲಗಿ ಸಿಕ್ಕುತ್ತವೆ. ಇಂತಹ ಹತ್ತಾರು ಪದಗಳು, ಕೆಲವೊಮ್ಮೆ ನೂರಾರು ಪದಗಳು, ಸೇರಬೇಕು ಬಾಣನ ಒಂದು ವಾಕ್ಯಕ್ಕೆ. ಕೃಪಣತೆಯ ಮಾತೇ ಇಲ್ಲ. ಬಾಣಭಟ್ಟನ ಕೃತಿಗಳಲ್ಲಿ ಶ್ರೇಷ್ಠ ವರ್ಣನೆಗಳೆಂದು ಹೆಸರುಗಳಿಸಿರುವ ಕಾದಂಬರಿ — ಮಹಾಶ್ವೇತೆಯರ ವರ್ಣನೆ, ಪಂಪಾ— ಅಚ್ಛೋದ ಸರಸ್ಸುಗಳ ವರ್ಣನೆ, ದಂಡಕಾರಣ್ಯ—ಉಜ್ಜಯನಿಗಳ ವರ್ಣನೆ, ಸಿದ್ಧಾಯತನ—ಹೇಮಕೂಟಗಳ ವರ್ಣನೆ ಜಾಬಾಲಿ—ದ್ರವಿಡ ಧಾರ್ಮಿಕರ ವರ್ಣನೆ ಮುಂತಾದುವೆಲ್ಲಾ ಬಹು ದೀರ್ಘವಾದ ಒಂದೊಂದೇ ವಾಕ್ಯಗಳಲ್ಲಿದೆ. ಹತ್ತಾರು

ಪದಪುಂಜಗಳಿಂದ ತುಂಬಿ, ರಾಶಿರಾಶಿಯಾದ ವಿಶೇಷಣಗಳಿಂದ ಕೂಡಿ ಹಲವಾರು ಅಲಂಕಾರಗಳನ್ನು ಹೊತ್ತು ಈ ವಾಕ್ಯದ ಓಟ ಗಂಭೀರವಾಗಿರುತ್ತದೆ. ರೆಪ್ಪೆ ಮಿಟಿಕಿಸುವುದರೊಳಗಾಗಿ ಹತ್ತಾರು ಪರಿಸಂಖ್ಯಾಲಂಕಾರಗಳೂ, ಹತ್ತಾರು ಶ್ಲೇಷಾ ಲಂಕಾರಗಳೂ ನಾನು ಮುಂದೆ ತಾನು ಮುಂದೆ ಎಂದು ಸ್ಪರ್ಧೆಯಿಂದ ಕಾಣಿಸಿಕೊಳ್ಳುತ್ತವೆ. ಇಂತಹ ವಾಕ್ಯಗಳನ್ನು ಬೇರೆ ಭಾಷೆಗೆ ಪರಿವರ್ತಿಸುವುದು ಬಹುಕಷ್ಟ. ಉದಾಹರಣೆ ಗಾಗಿ ಜಾಬಾಲ್ಯಾಶ್ರಮದ ಈ ವರ್ಣನಾಭಾಗವನ್ನು ನೋಡಿ:

"ಯತ್ರ ಚ ಮಲಿನತಾ ಹವಿರ್ಧೂಮೇಷು ನ ಚರಿತೇಷು, ಮುಖರಾಗಃ ಶುಕೇಷು ನ ಕೋಪೇಷು, ತೀಕ್ಷ್ಣತಾ ಕುಶಾಗ್ರೇಷು ನ ಸ್ವಭಾವೇಷು, ಚಂಚಲತಾ ಕದಲೀದಲೇಷು ನ ಮನಃಸು, ಚಕ್ಷೂರಾಗಃ ಕೋಕಿಲೇಷು ನ ಪರಕಲತ್ರೇಷು, ಕಂಠಗ್ರಹಃ ಕಮಂಡುಲುಷು ನ ಸುರತೇಷು...... ವಸುಸಂಕೀರ್ತನಂ ದಿವ್ಯಕಥಾಸು ನ ತೃಷ್ಣಾಸು, ಗಣನಾ ರುದ್ರಾಕ್ಷ ವಲಯೇಷು ನ ಶರೀರೇಷು, ಮುನಿಬಾಲನಾಶಃ ಕ್ರತುದೀಕ್ಷಯಾ ನ ಮೃತ್ಯುನಾ, ರಾಮಾನುರಾಗೋ ರಾಮಾಯಣೇನ ನ ಯೌವನೇನ" ಇತ್ಯಾದಿ.

ಈ ವಾಕ್ಯಗಳ ನೆಯ್ಗೆಯಲ್ಲಿ ಪುರಾಣ, ಜಾನಪದ ಕಥೆ ಗಳೂ ಅಲಂಕಾರಗಳೂ ಹಾಸುಹೊಕ್ಕಾಗಿ ಬೆರೆತಿವೆ. ಇಂತಹ ನೂರಾರು ಕಥೆಗಳ ಅವನ ಜ್ಞಾನವೂ, ಅವುಗಳ ಜ್ಞಾಪಕಶಕ್ತಿಯೂ, ಅವನ ಪಂಪಾಸರೋವರದಂತೆಯೆ 'ಅಗಾಧಂ—ಅನಂತಂ' ಆಗಿರುತ್ತದೆ. ಒಂದು ವಾಕ್ಯವನ್ನು ಓದಿ ಪೂರೈಸುವ ಮುನ್ನ ಇಂತಹ ಕಥೆಗಳೆಷ್ಟನ್ನೋ ತಿಳಿದಿರ ಬೇಕು. ಇಲ್ಲದಿದ್ದರೆ ಸೋತಂತೆಯೇ. ಬಾಣನು ವರ್ಣಿಸಿರುವ ಅಚ್ಛೋದ ಸರಸ್ಸಿನ ಈ ಭಾಗವನ್ನು ನೋಡಿ:

"ಮಹಾಪುರುಷಮಿವ ಮೀನ ಮಕರ ಕೂರ್ಮಚಕ್ರ ಪ್ರಕಟ ಲಕ್ಷಣಂ, ಷಣ್ಮುಖಚರಿತಮಿವ ಶ್ರೂಯಮಾಣ ಕ್ರೌಂಚವನಿತಾ ಪ್ರಲಾಪಂ, ಭಾರತಮಿವ ಪಾಂಡು ಧಾರ್ತರಾಷ್ಟ್ರಕುಲಪಕ್ಷಕೃತ ಕ್ಷೋಭಂ, ಅಮೃತ ಮಥನ ಸಮಯಮಿವ ತೀರಾವಸ್ಥಿತಶಿತಿ ಕಂಠಪೀಯಮಾನವಿಷಂ, ಕೃಷ್ಣಬಾಲ ಚರಿತಮಿವ ತಟಕದಂಬ ಶಾಖಾಧಿರೂಢ ಹರಿಕೃತ ಜಲಪ್ರತಾಪಕ್ರೀಡಂ,......ಉರಗ ಕುಲಮಿವ ಅನಂತ ಶತಪತ್ರ ಪದ್ಮೋದ್ಭಾಸಿತಂ, ಕಂಸ ಬಲಮಿವ ಮಧುಕರ ಕುಲೋಪ ಗೀಯಮಾನಕುವಲಯಾಪೀಡಂ, ಕದ್ರುಸ್ತನಯುಗಲಮಿವ ನಾಗ ಸಹಸ್ರ ಪೀತ ಪಯೋಗಂಡೂಷಂ"! ಇತ್ಯಾದಿ.

ಮೇಲಿನ ಪ್ರತಿಯೊಂದು ಪದವೂ ಒಂದೊಂದು ಪುರಾಣ ಪ್ರಸಿದ್ಧ ಕಥೆಯನ್ನು ಹೊಂದಿದೆ. ಜೊತೆಗೆ ಉದ್ದಕ್ಕೂ ಶ್ಲೇಷಾಲಂಕಾರದ ಹೊನಲೇ ಹರಿಯುತ್ತಿದೆ. ಇದು ಬಾಣನ ಸ್ವಭಾವಕಲೆ. ಮಳೆಗಾಲದಲ್ಲಿ ಹರಿಯುವ ಗಂಗಾನದಿಯಂತೆ ಬಾಣನ ವಾಕ್ಯಗಳು ಪೂರ್ವ ಕಥೆಗಳಿಂದಲೂ ಅಲಂಕಾರಗಳಿಂದಲೂ ತುಂಬಿ ಹರಿಯುತ್ತವೆ. ಆದರೆ ಬಾಣನ ಈ ಹಿರಿಮೆಯೇ ಅವನ ದೋಷವೆಂಬುದು ಈಚಿನವರ ವಿಮರ್ಶೆಯ ಸಾರಾಂಶ. ಕಲ್ಪನೆಗಳಲ್ಲಿ ಉತ್ಪ್ರೇಕ್ಷೆ ಹದಮೀರಿದೆಯೆಂದೂ, ವಾಕ್ಯಗಳಲ್ಲಿ ಬೇಡವಾದಷ್ಟು ಪದರಾಶಿಗಳಿವೆಯೆಂದೂ, ಅಲಂಕಾರಗಳು ಕಾವ್ಯಕ್ಕೆ ಶೃಂಗಾರವಾಗಿರದೆ ರಸಾಸ್ವಾದನೆಗೆ ಭಂಗವಾಗಿವೆಯೆಂದೂ ಬಾಣನ ಶೈಲಿಯನ್ನು ಟೀಕಿಸಿದ್ದಾರೆ. ಪಾಶ್ಚಾತ್ಯ ಪಂಡಿತ ವೀಬರ್ ಮಹಾಪುರುಷರಂತೂ ಬಾಣನ ಗದ್ಯವನ್ನು ಭಾರತದ ಗೊಂಡಾರಣ್ಯವೆಂದೇ ಹೇಳಿದ್ದಾರೆ. ಅಲ್ಲಿನ ದೀರ್ಘ ಸಮಾಸಗಳೂ, ವಿಪುಲವಾದ ಅಪರೂಪ ಪದಕುಂಜಗಳೂ ಅವರನ್ನು ಕ್ರೂರಮೃಗಗಳಂತೆ ಹೆದರಿಸಿವೆ. ಅಂತಹವರಿಂದ ಬಾಣನ ಮೇಲೆ ಗೌರವಪೂರ್ಣವಾದ ಸಹಾನುಭೂತಿಯಿಂದ ಕೂಡಿದ ವಿಮರ್ಶೆ ಹೇಗೆ ಸಾಧ್ಯ?

ಬಾಣನ ಶೈಲಿಯನ್ನು ಕುರಿತ ಮೇಲ್ಕಂಡ ಮಾತುಗಳಲ್ಲಿ ಸತ್ಯವೇನೋ ಸ್ವಲ್ಪವಿದೆ. ಆದರೆ ಅಷ್ಟೂ ನಿಜವಲ್ಲ. ಬಾಣನ ವಾಕ್ಯಗಳೂ, ವರ್ಣನೆಗಳೂ ಅನೇಕ ವೇಳೆ ಸುದೀರ್ಘವಾಗಿರುವುದೇನೋ ನಿಜವೇ. ಆದರೆ ಇಷ್ಟು ಮಾತ್ರಕ್ಕೇ ಶೈಲಿಯ ಆಧಾರಸ್ತಂಭವೆನಿಸಿದ ಔಚಿತ್ಯ ಜ್ಞಾನವು ಬಾಣನಿಗೆ ಇಲ್ಲವೇ ಇಲ್ಲವೆಂದು ಹೇಳಬಾರದು. ರಾಶಿರಾಶಿಯಾದ ಪದಗಳನ್ನೊಳಗೊಂಡ ದೀರ್ಘವಾದ ವಾಕ್ಯಗಳಲ್ಲಿ ನೀಳ ವರ್ಣನೆಗಳನ್ನು ಕೊಡುವ ಸಾಮರ್ಥ್ಯವಿರುವಷ್ಟೇ, ಕೆಲವೇ ಪದ ಮಂಜರಿಯ ವಾಕ್ಯವೃಂದಗಳಿಂದ ಉತ್ತಮ ಚಿತ್ರವನ್ನು ಸೃಷ್ಟಿಸಿಕೊಡುವ ಕುಂಚದ ಕಲೆಗಾರಿಕೆಯೂ ಅವನಿಗಿಲ್ಲದಿಲ್ಲ. ರಾಜನ ಒಡ್ಡೋಲಗ, ಋಷಿಯ ಆಶ್ರಮ, ನೈಸರ್ಗಿಕ ಚೆಲವುಗಳನ್ನು ಸಾಧಾರಣವಾಗಿ ಯಾವಾಗಲೂ ದೀರ್ಘವಾಗಿಯೇ ವರ್ಣಿಸಿದ್ದಾನೆ. ಕಲೆಯ ಸೂಕ್ಷ್ಮ ಕುಸುರಿ ಕೆಲಸಕ್ಕೆ ಅಲ್ಲಿ ಉದಾರವಾದ ಅವಕಾಶವಿದೆ. ವಾಕ್ಯಗಳು ನೀಳವಾಗಿ ನಿಧಾನವಾಗಿ ಕಡೆಯಲ್ಪಟ್ಟಿವೆ. ಆದರೆ ಹೃದಯದ ಉಲ್ಲಾಸ, ಉನ್ಮಾದ, ಅನುರಾಗ, ಔತ್ಸುಕ್ಯಗಳನ್ನೂ, ಪ್ರೇಮತಾಪಗಳನ್ನೂ, ಅಪಮಾನೀಯ ಮನೋವಿಕಾರಗಳನ್ನೂ ಸ್ಪಷ್ಟವಾದ ಪುಟ್ಟವಾಕ್ಯಗಳಲ್ಲೇ ತಿಳಿಸಿದ್ದಾನೆ. ಮಹಾಶ್ವೇತೆಯ ಪ್ರಣಯ ಪರಿಣಾಮದ ಮನಸ್ಸಿನ ತಳಮಳವನ್ನು ತರಳಿಕೆಗೆ ವರ್ಣಿಸಿರುವ ವಾಕ್ಯಗಳೂ, ಶೂದ್ರಕಮಹಾರಾಜನು ಗಿಳಿಯನ್ನು ಕೇಳುವ ಪ್ರಶ್ನೆಗಳೂ, ಕಪಿಂಜಲನು ಪುಂಡರೀಕನ ಇಂದ್ರಿಯ ನಿಗ್ರಹ ಶೂನ್ಯತೆಯನ್ನು ಧಿಕ್ಕರಿಸುವ ವಾಕ್ಯಗಳೂ ಇಂತಹ ಔಚಿತ್ಯಕ್ಕೆ ಅನುಪಮ ಕಾಣಿಕೆಗಳಾಗಿವೆ. ಪ್ರಶ್ನೆಕೇಳುವಾಗ ವಾಕ್ಯ ದೀರ್ಘವಾಗಿರಬಾರದಷ್ಟೆ! ಈ ಉದಾಹರಣೆಯನ್ನು ನೋಡಿ:

"ಕಾ ಮಾತಾ | ಕಸ್ತೇ ಪಿತಾ | ಕಥಂ ವೇದಾನಾಮಾಗಮಃ" | ಕಿ ಯದ್ಧಾವಯಃ . . . ಮುಂತಾಗಿ. ಪುಂಡರೀಕನನ್ನು ಗದರಿಸುವಾಗಿನ ವಾಕ್ಯಸರಿಣಿ ಹೀಗಿದೆ. "ಸಖೆ, ಪುಂಡರೀಕ, ನೈತದನುರೂಪಂ ಭವತಃ | ಕ್ಷುದ್ರ ಜನಕ್ಷುಣ್ಣ ಏಷ ಮಾರ್ಗಃ | ಧೈರ್ಯಧನಾ ಹಿ ಸಾಧವಃ| ಕ್ವತದ ಶಿತ್ವಂ ಚೇತಸಃ| ಕ್ವ ಸಾ ಪ್ರಶಾಂತಿಃ | ಕ್ವ ತೇ ಗುರೂಪದೇಶಾಃ | ಕ್ವ ತಾನಿ ಶ್ರುತಾನಿ | ಕ್ವ ಸಾ ವೈರಾಗ್ಯ ಬುದ್ಧಿಃ"॥ ಇತ್ಯಾದಿ.

ಬಾಣನ ಸಮಾಸಪದಗಳು ಸುದೀರ್ಘವಾಗಿರುವುದು ಕಾವ್ಯಕ್ಕೆ ಕುಂದೇನಲ್ಲ. ಅವುಗಳ ಲಾಲಿತ್ಯವೂ, ಮಾಧು ರ್ಯವೂ ಜೋಗುಳದ ಇಂಪನ್ನು ತಂದು ಕರ್ಣಾಮೃತವೆನಿಸು ತ್ತದೆ. ಅದಕ್ಕೆ ಸಂಸ್ಕೃತಿ ಪಡೆದ ಕಿವಿಗಳಿರಬೇಕು ಅಷ್ಟೆ. ವೇತ್ರವತೀನದಿಯ ಈ ವರ್ಣನೆ ಹರಿಯುವ ನೀರಿನ ರಮ್ಯತೆ ಯನ್ನು ಪದಗಳಲ್ಲಿಯೇ ತಂದಿದೆ:—

"ಮಜ್ಜನ್ಮಾಲವವಿಲಾಸಿನೀಕುಚತಟಾಸ್ಫಾಲನಜರ್ಜರಿತೋರ್ಮಿ ಮಾಲಯಾ, ಜಲಾವಗಾಹನಾಯಾತಜಯಕುಂಜರಕುಂಭಸಿಂಧೂರಸಂ ಧ್ಯಾಯಮಾನಸಲಿಲಯಾ ವೇತ್ರವತ್ಯಾ"

ಬಾಣನ ಶೈಲಿಯಲ್ಲಿ ಅನುಪ್ರಾಸವು ಒಂದು ವಿಶೇಷ ಸೊಬಗು. ಅದಕ್ಕೆ ಅವನು ಶ್ರಮವಹಿಸುವುದೇ ಇಲ್ಲ. ತಾನಾಗಿಯೇ ಜೋಡಿಸಿಕೊಳ್ಳುತ್ತದೆ. 'ರಕ್ಷಿತಪ್ರಜಾಪೀಡೋ ತಾರಾಪೀಡೋ', 'ಸೋತ್ಕಂಠಂ ಕಂಠೇ ಜಗ್ರಾಹ' 'ಮದಕಲಕೋಕಿಲಕುಲಕೋಲಾಹಲೈಃ' ಮುಂತಾದುವು ಚಿಕ್ಕ ದೃಷ್ಟಾಂತಗಳು. ದೊಡ್ಡ ದೊಡ್ಡ ಪದಗಳಲ್ಲಿಯೂ ಸಾಧಿಸಿರುವ ಈ ನೈಪುಣ್ಯ ಶ್ಲಾಘ್ಯವಾಗಿದೆ. ದಂಡಕಾರಣ್ಯದ ವರ್ಣನೆಯ ಸಂದರ್ಭದಲ್ಲಿ ಶ್ರೀರಾಮನನ್ನು ಕುರಿತ ಈ ಪದಗಳನ್ನು ನೋಡಿ:

“ದಶರಥವಚನಮನುಪಾಲಯನ್ನುತ್ಸೃಷ್ಟರಾಜ್ಯೋ ದಶವದನ ವಿಭ್ರಮವಿರಾಮೋರಾಮೋ”

ಹಾಗೆಯೇ ನೀಳವಾದ ಸಮಾಸಪದಕ್ಕೂ, ಅದರಲ್ಲಿನ ಅನುಪ್ರಾಸಾದಿಗಳಿಗೂ ಉದಾಹರಣೆಯಂತಿರುವ ಇನ್ನೊಂದು ವಾಕ್ಯವಿದು :

“ದಶರಥಸುತನಿಶಿತಶರನಿಕರನಿಪಾತನಿಹತರಜನಿಚರಬಲಬಹುಲರುಧಿರಸಿಕ್ತಮೂಲಂ”.

ಆದರೆ ಕೆಲವು ವಿಮರ್ಶಕರ ಅಭಿಪ್ರಾಯದಂತೆ ಬಾಣನು ಕೇವಲ ವಾಕ್ಯಾಡಂಬರ, ಶಬ್ದಬಾಹುಳ್ಯಗಳಲ್ಲಿಯೇ ತನ್ನ ಕೃತಿಗಳನ್ನು ಮುಗಿಸಿಲ್ಲ. ಶಬ್ದಭಂಡಾರದ ಸ್ವಾಮ್ಯವಿದ್ದರೂ ಅವನ ದೃಷ್ಟಿ ಅರ್ಥಕ್ಕೆ ಸಮಂಜಸವಾದ ಸರ್ವೋತ್ತಮ ಶಬ್ದವನ್ನಾರಿಸುವುದರಲ್ಲಿಯೇ ಎಂಬುದರಲ್ಲಿ ಸಂದೇಹವಿಲ್ಲ : ಈ ಉದಾಹರಣೆಯನ್ನು ನೋಡಿ :

“ಹರಿನಖರಭಿನ್ನಮತ್ತಮಾತಂಗಕುಂಭಮುಕ್ತರಕ್ತಾರ್ದ್ರಫಲತ್ವಿಂಷಿ” ಎಂಬ ವರ್ಣನೆಯಲ್ಲಿ ಸಿಂಹವು ಮದಿಸಿದ ಆನೆಯ ಮೇಲೆ ನೆಗೆದು ತನ್ನ ನಖ ಪಂಜರದಿಂದ ಆ ಗಜದ ಗಂಡಸ್ಥಳವನ್ನು ಸೀಳುವ ಉಗ್ರ ದೃಶ್ಯವಿದೆ. ಆ ಪದಗಳನ್ನು ಓದುತ್ತಿದ್ದಂತೆಯೇ ಆ ಕ್ರೂರ ಕಾರ್ಯದ ಅರಿವಾಗುತ್ತದೆ. ಬೇಟೆನಾಯಿಗಳ ಹಿಂಡು ಮುದ್ದು ಜಿಂಕೆಗಳ ಮೇಲೆ ಹಾರಿ ಅವುಗಳ ಹಿಂಭಾಗವನ್ನು ಗುಳಕ್ಕನೆ ನುಂಗುವ ದೃಶ್ಯ ಅಸ್ವಾದ್ಯಶವಾದ ಶಬ್ದಚಿತ್ರಣದಿಂದ ಕೊಡಲ್ಪಟ್ಟಿದೆ :

“ಸರಭಸಸಾರಮೇಯ-ವಿಲುಪ್ಯಮಾನ-ಕಾತರತರಲತಾರಕಾಣಾಮೇಣಕಾನಾಂ ಚ ಕರುಣಕೂಜಿತೇನ”

ರಭಸದಿಂದ ಓಡಿಬಂದು ತಮ್ಮ ಮೈಯನ್ನು ನೀಳವಾಗಿ ಎಳೆದುಕೊಂಡ ನಾಯಿಗಳನ್ನು ಸೂಚಿಸಲು 'ಸರಭಸಸಾರಮೇಯ'ವೆಂಬ ಪದವೂ, ಗುಳಕ್ಕನೆ ನುಂಗಲ್ಪಟ್ಟ ಎಂದು ತಿಳಿಸುವ 'ವಿಲುಪ್ಯಮಾನ' ಎಂಬ ಪದವೂ, ಗಾಬರಿಯಿಂದ ಕಣ್ಣುಗಳು ತತ್ತರಿಸಿದವೆಂದು ತಿಳಿಸುವಾಗ 'ಕಾತರ ತರಲತಾರಕಾಣಾಂ' ಎಂಬ ಪದವೂ, ಮುದ್ದಾದ ಜಿಂಕೆಗಳನ್ನು ಸೂಚಿಸುವ 'ಏಣಕಾನಾಂ' ಎಂಬ ಪದವೂ, ಅವುಗಳ ಕ್ರಂದನಕ್ಕೆ 'ಕರುಣಕೂಜಿತೇನ'ವೆಂಬ ಪದವೂ ಬಹು ಉಚಿತವಾಗಿವೆ. ಶಬ್ದದ ಪ್ರಭಾವದಿಂದಲೇ ಕರುಣರಸವು ತರಲ್ಪಟ್ಟಿದೆ. ಇದರೊಡನೆ ಶೃಂಗಾರರಸಕ್ಕೆ ಅತ್ಯುಚಿತವಾದ ಈ ಮುಂದಿನ ಪದಮಂಜರಿಯನ್ನೂ ನೋಡಿ: ಮಹಾಶ್ವೇತೆ ತಾರುಣ್ಯತಳೆದಳೆಂದು ಇದರ ಅಭಿಪ್ರಾಯ :

"ಕ್ರಮೇಣ ಚ ಕೃತಂ ಮೇ ವಪುಷಿ ವಸಂತ ಇವ ಮಧುಮಾಸೇನ, ಮಧುಮಾಸ ಇವ ನವಪಲ್ಲವೇನ, ನವಪಲ್ಲವ ಇವ ಕುಸುಮೇನ, ಕುಸುಮ ಇವ ಮಧುಕರೇಣ, ಮಧುಕರ ಇವ ಮದೇನ ನವಯೌವನೇನ ಪದಮ್ |"

ಇಲ್ಲಿನ ಶಬ್ದಗಳಿಂದಲೇ ವಸಂತನ ರಮ್ಯತೆಯೂ, ಪಲ್ಲವದ ಮಾರ್ದವತೆಯೂ, ಕುಸುಮದ ಸೌಕುಮಾರ್ಯವೂ ಮಧುವಿನ ಮತ್ತತೆಯೂ ಸಿದ್ಧಗೊಳ್ಳುತ್ತವೆ. ಹಾಗೆಯೇ ಕಾದಂಬರಿಯ ಅಂತಃಪುರದಲ್ಲಿ ಸ್ವಕಾರ್ಯಗಳಲ್ಲಿ ನಿರತರಾಗಿದ್ದ ಚೆಲುವಿನ ಲಲನೆಯರ ಹೆಸರುಗಳನ್ನೂ ಕೇಳಿ. ಈ ಹೆಸರಿನಲ್ಲಿಯೇ ಏನೋ ಒಂದು ಮಾಧುರ್ಯ, ಚೆಲವು ಚಿಮ್ಮುತ್ತಿದೆ: ಮೃಣಾಳಿಕೆ, ಮದನಿಕೆ, ರಜನಿಕೆ, ಕುಮುದಿಕೆ, ನಳಿನಿಕೆ, ನಿಪುಣಿಕೆ, ಹರಿಣಿಕೆ, ಕದಲಿಕೆ ಇತ್ಯಾದಿ ಹತ್ತಾರು ಮುಗ್ಧಮಧುರ

ನಾಮಗಳು. ಈ ವಾಕ್ಯದಲ್ಲಿ ಹೆಸರಿನ ಸೃಷ್ಟಿಯಲ್ಲಿ ಬಾಣನು ಪಂಡಿತನೂ ರಸಋಷಿಯೂ ಆಗಿದ್ದ ವರಕವಿಯೆಂಬುದು ನಿಸ್ಸಂಶಯವಾಗಿ ತಿಳಿದುಬರುತ್ತದೆ. ಈ ವಾಕ್ಯಗಳು ಕಣ್ಣಿಗೆ ಮಾತ್ರವಲ್ಲ ಹೃದಯಕ್ಕೂ ಆನಂದವನ್ನು ಕೊಡುತ್ತವೆ.

ಕವಿಗಳ ಶೈಲಿಯನ್ನು ವಿಮರ್ಶಿಸುವ ಯಾರೇ ಆಗಲಿ ಕವಿಯ ಕಾಲದ ಕಾವ್ಯಧರ್ಮಗಳನ್ನೂ, ಓದುಗರ ರುಚಿಗಳನ್ನೂ ಅರಿತುಕೊಳ್ಳಬೇಕು. ಏಕೆಂದರೆ ಎಲ್ಲ ರುಚಿಗಳಂತೆಯೇ ಸಾಹಿತ್ಯಾಭಿರುಚಿಯೂ ಕಾಲಕಾಲಕ್ಕೆ ಬದಲಾವಣೆಯನ್ನು ಪಡೆಯುತ್ತಿರುತ್ತದೆ. ಎಂತಹ ಶ್ರೇಷ್ಠಪ್ರತಿಭಾನ್ವಿತ ಕವಿಯೂ ಅದನ್ನು ಅನುಸರಿಸಿಯೇ ತನ್ನ ಕಾವ್ಯವನ್ನು ಸೃಷ್ಟಿಸಬೇಕಾಗುತ್ತದೆ. ಬಾಣನ ಕಾಲದಲ್ಲಿ ಗದ್ಯಕಾವ್ಯಗಳು ದೀರ್ಘವಾದ ಸಮಾಸಪದಗಳಿಂದಲೂ, ಶ್ಲೇಷರೂಪಕಾದಿ ಅಲಂಕಾರಗಳಿಂದಲೂ ಕೂಡಿ ವರ್ಣನೆಗಳಿಗೆ ಆಕರವಾಗಿರುತ್ತಿದ್ದುವು. ಬಾಣನು ಈ ರುಚಿಯನ್ನು ದೂರೀಕರಿಸುವಂತಿರಲಿಲ್ಲ. ಆದರೆ ಅದರಲ್ಲೇ ಉತ್ತಮ ಕೌಶಲವನ್ನು ಸಾಧಿಸಿದ್ದಾನೆ. ಅವನ ಹಿಂದಿದ್ದ ಸುಬಂಧುವಿನಂತೆ ಅತಿ ಶ್ಲೇಷವನ್ನಾಗಲೀ, ದಂಡಿಯಂತೆ ಕೇವಲ ಶಬ್ದಲಾಲಿತ್ಯವನ್ನಾಗಲೀ ತಂದು ಮುಗಿಸಿಲ್ಲ. ವರ್ಣನೆಗಳೂ ನೀರಸವಾಗಿಲ್ಲ. ಅಲ್ಲಲ್ಲಿ ಬರುವ ಶ್ಲೇಷಾಲಂಕಾರಗಳು ಅವನೇ ಹೇಳುವಂತೆ 'ಮಹಾಸ್ರಜಃ ಚಂಪಕಕುಡ್ಮಲೈರಿವ' — ಮಲ್ಲಿಗೆಯ ಹಾರದಲ್ಲಿ ಕಟ್ಟಿರುವ ಸಂಪಿಗೆ ಮೊಗ್ಗುಗಳಂತೆ ಮಧುರವಾಗಿವೆ. ಪ್ರತಿಯೊಂದು ವಾಕ್ಯವೂ ಉನ್ನತ ಕಲೆಗಾರಿಕೆಯ ಫಲವಾಗಿ ಸರ್ವಾಂಗ ಮನೋಹರವಾಗಿದ್ದು ಓದುಗರನ್ನು ತನ್ನೆಡೆಗೆ ಆಕರ್ಷಿಸಿ, "ನಿಲ್ಲಿ, ನನ್ನ ಚೆಲುವನ್ನು ನೋಡಿ ಆನಂದಿಸಿ, ಅನಂತರ

ಸಾಗಿ" ಎಂದು ಕೂಗಿ ಕರೆಯುವಂತಿದೆ. ಅದರಿಂದಲೇ ಕಥೆಯ ಓಟ ನಿಧಾನ. ಇಂತಹ ವಾಗ್ವಿಲಾಸದಿಂದಲೂ, ರಸೋತ್ಕರ್ಷತೆಯಿಂದಲೂ ಕೂಡಿದ ಉತ್ತಮ ಕಥೆ ಯಾರ ಮನಸ್ಸನ್ನು ತಾನೆ ಒಲಿಸದು! ಆದುದರಿಂದಲೇ, ಶೂದ್ರಕ ರಾಜನೂ, ಜಾಬಾಲಿ ಮುನಿಯ ಆಶ್ರಮದ ತಪಸ್ವಿಗಳೂ ಆಹಾರನಿದ್ರಾದಿಗಳನ್ನೂ ಮರೆತು ಕೇಳಿದರು. ಕಾದಂಬರಿಯನ್ನು ಕುರಿತು ಬಾಣನು ಹೇಳಿರುವ ಈ ಮಾತು ಎಂದಿಗೂ ಸತ್ಯ:

> ಸ್ಫುರತ್ ಕಲಾಲಾಪವಿಲಾಸಕೋಮಲಾ ಕರೋತಿ ರಾಗಂ ಹೃದಿ
> ಕೌತುಕಾಧಿಕಂ।
> ರಸೇನ ಶಯ್ಯಾಂ ಸ್ವಯಮಭ್ಯುಪಾಗತಾ ಕಥಾ ಜನಸ್ಯಾಭಿನವಾ
> ವಧೂರಿವ॥
>
> (ಕಾದಂಬರೀ ಪ್ರಾಸ್ತಾವಿಕಶ್ಲೋಕ ೮)

ಬಾಣನ ಕೃತಿಗಳನ್ನು ಓದುವವರಿಗೆ ತಾಳ್ಮೆಬೇಕು, ವರ್ಣ ದೃಷ್ಟಿಬೇಕು. ಆತುರಗಾರರಿಗೆ ಇಲ್ಲಿ ಸೊಬಗಿಲ್ಲವೆಂದೇ ಬಾಣನ ಮತ. ಅದಕ್ಕೇ ಎರಡಾವರ್ತಿ, 'ಮಹತೀಯಂ ಕಥಾ। ಯದಿ ಕೌತುಕಮಾಕರ್ಣ್ಯತಾಮ್' ಎಂದು ಹೇಳಿರುವುದು. ಜಾಬಾಲ್ಯಾಶ್ರಮದ ಮುನಿಗಳಂತೆ ರಾತ್ರಿಯೆಲ್ಲಾ ಕಥೆಯನ್ನು ಕೇಳುವ ಸಹೃದಯರೆಲ್ಲಿ? ಅಥವಾ ಶೂದ್ರಕ ರಾಜನ ಒಡ್ಡೋಲಗದ ರಾಜಪುತ್ರರಂತೆ ಕಥೆ ಕೇಳಲು ಸಿದ್ಧರಿರುವ ರಸಿಕ ಹೃದಯರೆಲ್ಲಿ? ಕಾಲದ ಬಹುಭಾಗವನ್ನೆಲ್ಲಾ ಹೊಟ್ಟೆ ಹೊರೆಯುವ ದುಡಿಮೆಯಲ್ಲೇ ಕಳೆದು ಸಾಹಿತ್ಯ ಸೌಂದರ್ಯಕ್ಕೆ ಕಣ್ಮುಚ್ಚಿ ಅಂಧರಾಗಿರುವ ನಾವೆಲ್ಲಿ?

> ಕಾದಂಬರೀರಸಜ್ಞಾನಾಂ ಆಹಾರೋಽಪಿ ನ ರೋಚತೇ।

೬. ಬಾಣನ ಕೃತಿಗಳಲ್ಲಿ ಪ್ರತಿಬಿಂಬಿತವಾಗಿರುವ ಸಮಾಜ:

ರಾಜರುಗಳು : ಬಾಣನ ಕೃತಿಗಳಲ್ಲಿ ವರ್ಣಿತರಾಗಿರುವ ರಾಜರುಗಳಲ್ಲಿ ಶೂದ್ರಕ, ತಾರಾಪೀಡ, ಪ್ರಭಾಕರವರ್ಧನ ಮತ್ತು ಹರ್ಷವರ್ಧನ ಇವರು ಮುಖ್ಯರು. ಕೊನೆಯ ಇಬ್ಬರು ಚಾರಿತ್ರಿಕ ವ್ಯಕ್ತಿಗಳು. ಮೊದಲಿನ ಇಬ್ಬರೂ ಬಹುಶಃ ಕಲ್ಪನಾ ಪ್ರಪಂಚಕ್ಕೆ ಸೇರಿದವರು. ಈ ರಾಜರುಗಳು ವೈಭವದಿಂದಲೂ ಪರಾಕ್ರಮದಿಂದಲೂ ಕೂಡಿದ್ದರೂ, ವಿದ್ಯಾವಿನಯ ವ್ಯವಹಾರ ಗಳಲ್ಲಿ ಆದರ್ಶರಾಗಿದ್ದರು. ಯುದ್ಧ, ಬೇಟೆ ಮುಂತಾದ ಕ್ಷಾತ್ರ ಗುಣಗಳಿಗೆ ಪ್ರಸಿದ್ಧರಾಗಿದ್ದಂತೆಯೇ ಅವರು ಸಾಹಿತ್ಯ ಕಲೆ ಮುಂತಾದವುಗಳಿಗೂ ಆಶ್ರಯದಾತರಾಗಿದ್ದರು. ಅವರ ರಾಜಭವನಗಳು, ಶಿಲ್ಪಕಲೆ, ಚಿತ್ರಕಲೆಗಳಿಗೆ ತೌರುಮನೆಯಾಗಿ ದ್ದವು. ರಾಜರ ಅಂತಃಪುರಗಳು ಲಾವಣ್ಯವತಿಯರೂ ಕಲಾ ಕೌಶಲಪೂರ್ಣರೂ ಆದ ಯುವತಿಯರಿಂದ ಕೂಡಿದ್ದರೂ, ರಾಜರು ಹೆಚ್ಚಿನ ಸ್ತ್ರೀಸಂಗಿಗಳಾಗಿರಲಿಲ್ಲ. ರಾಜರುಗಳು ಚತುರೋಪಾಯದಿಂದ ಭೂಮಂಡಲವನ್ನು ಗೆದ್ದು ನಿಯೋಜ ನೆಯಿಂದ ರಾಜ್ಯಭಾರ ಮಾಡುತ್ತಿದ್ದರು. ರಾಜಕಾರ್ಯಗಳು ವೇಳಾಪಟ್ಟಿಯನ್ನನುಸರಿಸಿ ನಡೆಯುತ್ತಿದ್ದು, ಜೀವನದ ಎಲ್ಲ ಮುಖಗಳಿಗೂ ಸಾಕಾದಷ್ಟು ಪ್ರಾಶಸ್ತ್ಯವಿರುತ್ತಿತ್ತು. ಹೀಗೆ ರಾಜರದು ಸಂಸ್ಕೃತಿ ಸಂಪನ್ನವಾದ ತುಂಬು ಜೀವನವಾಗಿ ದ್ದಿತು.

ಮಂತ್ರಿಗಳು : ಮುಖ್ಯಮಂತ್ರಿಯು ಬ್ರಾಹ್ಮಣನಾಗಿದ್ದು ಬೇರೆ ವರ್ಣಗಳಿಂದ ಉಳಿದ ಮಂತ್ರಿಮಂಡಲದ ರಚನೆಯಾಗು ತ್ತಿತ್ತು. ಅವರು ಬುದ್ಧಿಯಲ್ಲಿ ಅವರ ಗುರುವನ್ನೂ ಮೀರಿಸ ಬಲ್ಲವರಾಗಿದ್ದು, ರಾಜನೀತಿಶಾಸ್ತ್ರದಲ್ಲಿ ಪರಿಣತಮತಿಗಳಾಗಿ,

ಉದಾರಿಗಳೂ, ಸ್ನಿಗ್ಧರೂ ಆಗಿರುತ್ತಿದ್ದರು. ಮಂತ್ರಿತ್ವವು ಕುಲಕ್ರಮಾಗತವಾಗಿ ಇರುತ್ತಿತ್ತು.

ರಾಜಪುತ್ರರು : ಶಕ್ತಿಯಲ್ಲಿ ಕೇಸರಿ ಕಿಶೋರಗಳು; ವಿನಯ ಗಾಂಭೀರ್ಯಗಳಲ್ಲಿ ರಾಜರ ಪ್ರತಿಬಿಂಬಗಳು. ರಾಜಪುತ್ರನು ಯೌವರಾಜ್ಯಾಭಿಷೇಕವಾದ ಕೂಡಲೆ ದಿಗ್ವಿಜಯಯಾತ್ರೆ ಯಿಂದ ತನ್ನ ಕೀರ್ತಿಯನ್ನು ಪ್ರತಿಷ್ಠಿಸುವುದು ಸಂಪ್ರದಾಯ ವಾಗಿತ್ತು.

ಸೈನ್ಯ : ಚತುರಂಗ ಬಲೋಪೇತವಾಗಿತ್ತು. ಧೀರರೂ ಪರಾಕ್ರಮಶಾಲಿಗಳೂ, ನಿಷ್ಠರೂ ಆದ ಸೈನಿಕರಿದ್ದರು. ಹಸ್ತಿ—ಅಶ್ವ—ರಥ, ಪದಾತಿ ಬಲಗಳಿಗೆ ಬೇರೆ ಬೇರೆ ಮುಖ್ಯಾಧಿ ಕಾರಿಗಳಿದ್ದರು.

ತಪೋವನಗಳು : ತಪೋವನಗಳಲ್ಲಿ ಪ್ರಶಾಂತ ವಾತಾವರಣ ವಿದ್ದು ನೂರಾರು ವಿದ್ಯಾರ್ಥಿಗಳು ಅಧ್ಯಯನ, ಅಧ್ಯಾ ಪನ ಮಾಡುತ್ತಿದ್ದರು. ಇಂತಹ ತಪೋವನದಲ್ಲಿದ್ದ ಕ್ರೂರ ಪ್ರಾಣಿಗಳು ಸಹ ವೈಷಮ್ಯ ತೊರೆದು ಶಾಂತಚಿತ್ತರಾಗಿ ಬಾಳು ತ್ತಿದ್ದವು. ಇಲ್ಲಿನ ಜೀವನವೂ ಪ್ರಶಾಂತವಾಗಿ ಕಾರುಣ್ಯ, ದಯೆ, ವಿನಯ ಮತ್ತು ತೇಜಸ್ಸುಗಳಿಗೆ ತೌರುಮನೆಯಾಗಿ ದ್ದಿತು. ನಿಗ್ರಹಾನುಗ್ರಹ ಶಕ್ತಿಯನ್ನೂ, ತ್ರಿಕಾಲಜ್ಞಾನವನ್ನೂ ಪಡೆದಿದ್ದ ಜಾಬಾಲಿ, ಅಗಸ್ತ್ಯರಂತಹ ತಪೋಧನರನ್ನು ಒಡೆಯ ರನ್ನಾಗಿ ಪಡೆದಿದ್ದ ಈ ಪುಣ್ಯಕ್ಷೇತ್ರಗಳು ಸಕಲರ ಭಕ್ತಿ ಗೌರವ ಗಳಿಗೆ ಪಾತ್ರವಾಗಿದ್ದವು.

ವಿವಾಹ ಮತ್ತು ಸತೀ ಪದ್ಧತಿ : ಪ್ರಾಪ್ತ ವಯಸ್ಕಳಾದ ಮಗಳಿಗೆ ತಕ್ಕ ವರನನ್ನು ಹುಡುಕಿ ಸಕಾಲದಲ್ಲಿ ವಿವಾಹ ಮಾಡುವುದು ಸಂಪ್ರದಾಯದಲ್ಲಿದ್ದಿತಾದರೂ ವಿವಾಹದ ವಿಷ

ಯದಲ್ಲಿ ಯುವಕ ಯುವತಿಯರಿಗೇ ಹೆಚ್ಚಿನ ಸ್ವಾತಂತ್ರ್ಯ ವಿದ್ದಂತೆ ಭಾಸವಾಗುತ್ತದೆ. ಸರಿಯಾದ ವರನನ್ನು ಪ್ರೀತಿಸಿ ಮದುವೆಯಾಗಲಿಚ್ಛಿಸಿದ ಹೆಣ್ಣುಮಕ್ಕಳನ್ನು ಹಿರಿಯರು ಆಶೀರ್ವದಿಸಿ ಅದಕ್ಕೆ ಸಮ್ಮತಿ ಕೊಡುತ್ತಿದ್ದರು. ಕಾದಂಬರೀ ಮತ್ತು ಮಹಾಶ್ವೇತೆ—ಇಬ್ಬರೂ ತಮ್ಮಿಷ್ಟ ಬಂದವರನ್ನೇ ಒಲಿದು ವಿವಾಹವಾಗಲಿಚ್ಛಿಸಿದರು. ತಂದೆ ತಾಯಿಗಳೂ ಅನುಮೋದಿಸಿದರು; ದಾಂಪತ್ಯಪ್ರೇಮ, ನಿಷ್ಕಲಂಕವೂ ಪವಿತ್ರವೂ ಆಗಿರುತ್ತಿತ್ತು. ಇದು—ಕಾದಂಬರೀ ಕಥೆಯ ಜೀವನಾಡಿ, ಉಸಿರು. ಒಮ್ಮೆ ಒಬ್ಬರನ್ನು ಪ್ರೇಮಿಸಿ ಪತಿಯೆಂದು ಭಾವಿಸಿದ ಮೇಲೆ ಮುಗಿಯಿತು. ಬೇರೆ ಕಡೆಗೆ ಎಂದಿಗೂ ಚಿತ್ತ ಚಲಿಸದು. ಬದುಕೋ, ಸಾವೋ; ಈ ಲೋಕವೋ, ಪರಲೋಕವೋ; ಈ ಜನ್ಮವೋ ಬೇರೆಯ ಜನ್ಮವೋ—ತಾನು ಒಮ್ಮೆ ಒಲಿದವನೇ ಪತಿ; ತಾನು ಒಮ್ಮೆ ಪ್ರೀತಿಸಿದವಳೇ ಪತ್ನಿ. ದುಷ್ಟಕಾಮದ ಹಾವಳಿಯ ಮಾತೇ ಇಲ್ಲ.

ಸತೀ ಅಥವ ಸಹಗಮನ ಪದ್ಧತಿ ತನ್ನ ಸ್ವಂತ ಇಚ್ಛೆಯ ಮೇಲೆ ನಡೆಯುತ್ತಿದ್ದಂತೆ ಕಾಣುತ್ತದೆ. ಹರ್ಷಚರಿತೆಯಲ್ಲೇನೋ ಕವಿ ಇತಿಹಾಸದ ಶೃಂಖಲೆಗೆ ಸಿಕ್ಕಿ ಯಶೋಮತಿಯು ಸಹಗಮನವನ್ನು ಆಚರಿಸಿದುದನ್ನು ಹೇಳಿದ್ದಾನೆ. ಆದರೆ ಬಾಣನಿಗೆ ಆ ಪದ್ಧತಿಯಲ್ಲಿ ನಂಬಿಕೆಯಿರಲಿಲ್ಲ. ತನ್ನ ತೀರ್ಮಾನವನ್ನು ಚಂದ್ರಾಪೀಡನ ಬಾಯಿಂದ ಮಹಾಶ್ವೇತೆಗೆ ಹೇಳಿಸಿದ್ದಾನೆ.

ಮೈತ್ರಿ : ಪರಿಶುದ್ಧವಾದ ಪ್ರೇಮ ಮತ್ತು ದಾಂಪತ್ಯಜೀವನವನ್ನು ವರ್ಣಿಸಿರುವಂತೆಯೇ ಈ ಕೃತಿಗಳಲ್ಲಿ ಬಾಣನು ಒಂದು ಗೃಹಕ್ಕೆ ಸಂಬಂಧಿಸಿದ ಬಾಂಧವ್ಯವನ್ನೂ; ಸ್ನೇಹಿತರ—ಭೃತ್ಯ

ವರ್ಗದ — ಮೈತ್ರಿ ವಿಶ್ವಾಸಗಳನ್ನೂ ಆದರ್ಶವಾಗಿರುವಂತೆ ವರ್ಣಿಸಿದ್ದಾನೆ. ಕಾದಂಬರಿ ಮಹಾಶ್ವೇತೆಯರೂ, ಚಂದ್ರಾಪೀಡ ವೈಶಂಪಾಯನರೂ ಮೈತ್ರಿತ್ವದ ನಿಸ್ವಾರ್ಥತೆಗೆ, ಪರಹಿತ ಚಿಂತನೆಗೆ ಶ್ರೇಷ್ಠ ದೃಷ್ಟಾಂತಗಳು.

ಉಳಿದ ಸಂಪ್ರದಾಯ ಆಚಾರ ವಿಚಾರಗಳು

ಕಾದಂಬರೀ ಹರ್ಷಚರಿತೆಗಳಲ್ಲಿ ಪ್ರತಿಬಿಂಬಿತವಾಗಿರುವ ಆಚಾರ ವಿಚಾರಗಳು ಸಮಾಜಶಾಸ್ತ್ರ ವ್ಯವಸಾಯಿಗಳಿಗೆ ಬಹು ಮುಖ್ಯವಾಗಿವೆ. ಕವಿಯು ವರ್ಣಿಸಿರುವ, ಸಂತಾನಕಾಮನೆ; ಅದಕ್ಕೆ ಕೈಗೊಂಡ ವ್ರತನಿಯಮಾಚರಣೆಗಳೂ, ರಾಜನ ನಿತ್ಯ ಜೀವನದ ವ್ಯಾಯಾಮ, ಸ್ನಾನ, ಪೂಜೆ, ಭೋಜನ, ಧೂಮ ಪಾನಾದಿಗಳೂ; ಜನಗಳಲ್ಲಿ ಕನಸು ಮುಂತಾದವುಗಳಲ್ಲಿದ್ದ ನಂಬಿಕೆಗಳೂ,—ಮಣಿ—ಮಂತ್ರ—ಔಷಧಿಗಳ ಶಕ್ತಿ, ಹಿರಿಮೆ ಗಳೂ, ಶುಕನಾಸೋಪನ್ಯಾಸದಲ್ಲಿ ಪ್ರತಿಪಾದಿತವಾಗಿರುವ ಅನೇಕ ಪ್ರಾಪಂಚಿಕ ವಿಷಯಗಳೂ ಆಗಿನ ಕಾಲದ ಸಮಾಜಕ್ಕೆ ಸಂಬಂಧಿಸಿದ ಸಂಶೋಧನೆಗೆ ತುಂಬಾ ಪ್ರಕಾಶ ವನ್ನು ಬೀರುತ್ತವೆ.

೭. ಉಪಸಂಹಾರ

ಸಂಸ್ಕೃತ ಸಾಹಿತ್ಯದಲ್ಲಿ ಬಾಣನ ಕೃತಿಗಳಿಗೆ ಹಿರಿಯಸ್ಥಾನ ವಿದೆ. ಅವನ ಮುಖ್ಯ ಕೃತಿಗಳಾದ ಹರ್ಷಚರಿತ ಮತ್ತು ಕಾದಂಬರಿಗಳು ನಿತ್ಯ ನೂತನತೆಯಿಂದ ಸಹೃದಯರಿಗೆ ಹೃದಯಾಹ್ಲಾದವನ್ನುಂಟುಮಾಡಿವೆ. ಇತಿಹಾಸ ಮತ್ತು ಸಮಾಜಸಂಪ್ರದಾಯ ಸಂಶೋಧನೆಗಳಿಗೆ ಹರ್ಷಚರಿತೆ ಒಂದು ಅಮೂಲ್ಯವಾದ ಆಕರ. ಸಮಗ್ರ ಸಂಸ್ಕೃತ ಸಾಹಿತ ಕ್ಕೇ ಅಪರೂಪವಾದ ಕಾಣಿಕೆ.

ಕಾದಂಬರಿಯು ಬಾಣನ ಉತ್ತಮೋತ್ತಮಕೃತಿ. ಇಲ್ಲಿನ ವರ್ಣನಾ ಬಾಹುಳ್ಯವೂ ಸೌಂದರ್ಯವೂ ಅವನ ಕೀರ್ತಿಯನ್ನು ಶಿಖರಕ್ಕೇರಿಸಿದೆ. 'ಸಮಗ್ರ ಕಾದಂಬರಿ ಒಂದು ಚಿತ್ರಶಾಲೆ' ಯೆಂದು ವರ್ಣನೆಗಳ ಪರಿಪೂರ್ಣತೆಯನ್ನು ಸ್ತುತಿಸಿದ ರವೀಂದ್ರರು ಇಲ್ಲಿನ ಪಾತ್ರಗಳ ವ್ಯಕ್ತಿತ್ವವನ್ನು ಕಂಡು "ಕಾದಂಬರಿ ಕರತಲ ರಂಗಭೂಮಿ" ಎಂದು ವಿಮರ್ಶಿಸಿರುವುದು ಸಮಂಜಸವಾಗಿಯೇ ಇದೆ. ಈ ಕಾವ್ಯಕಲೆಯ ಹಿರಿಮೆ ಇನ್ನೊಬ್ಬರಿಗೆ ಸಾಧ್ಯವಾಗದು. ಅದರಿಂದಲೇ ವಿಮರ್ಶಕರು "ಬಾಣೋಚ್ಛಿಷ್ಟಂ ಜಗತ್ಸರ್ವಂ" ಎಂದು ಹೇಳಿ ಮುಗಿಸಿರುವುದು. ಈ ಕೃತಿಗಳಲ್ಲಿ ಖಳನಾಯಕನ ಸುಳಿವೇ ಇಲ್ಲ. ಪ್ರತಿಯೊಂದು ಪಾತ್ರವೂ ಸ್ವಾರ್ಥತ್ಯಾಗ, ಪರಹಿತಚಿಂತನೆ, ಉನ್ನತಮನೋಭಾವನೆ ಇವುಗಳಿಗೆ ದೃಷ್ಟಾಂತವಾಗಿ ಅನುಕರಣೀಯವಾಗಿದೆ. ಇದರಿಂದ ಈ ಕೃತಿಗಳು ಭಾರತೀಯ ಸಂಸ್ಕೃತಿಯ ಪ್ರದೀಪಗಳೂ ಹೌದು. ಪ್ರಭಾಕರವರ್ಧನ ತಾರಾಪೀಡರಂತಹ ರಾಜರುಗಳು; ಯಶೋಮತಿ ವಿಲಾಸವತಿಯರಂತಹ ರಾಣಿಯರು; ರಾಜ್ಯವರ್ಧನ, ಹರ್ಷವರ್ಧನರಂತಹ ಸಹೋದರರು; ಚಂದ್ರಾಪೀಡ ವೈಶಂಪಾಯನರಂತಹ ಸ್ನೇಹಿತರು; ಕಾದಂಬರಿ ಮಹಾಶ್ವೇತೆಯರಂತಹ ಅಚಲ ಪ್ರೇಯಸಿಯರು; ಶುಕನಾಸ ಭಂಡಿಯರಂತಹ ಮಂತ್ರಿ ಸೇನಾಧಿಪತಿಗಳು; ಪತ್ರಲೇಖೆ ಕಪಿಂಜಲನಂತಹ ದೃಢಭಕ್ತಿ, ಸ್ನೇಹದಿಂದಿರುವ ನಿಷ್ಠರು ಯಾರ ಮನಸ್ಸಿನಲ್ಲಿ ತಾನೇ ಆಶ್ರಯ ಪಡೆಯಲಾರರು! ಇಂತಹ ಉನ್ನತ ವ್ಯಕ್ತಿಗಳನ್ನು ಕೊಟ್ಟ ಕವಿ ಧನ್ಯ. ಅಂತಹ ಕೃತಿಗಳನ್ನು ಓದಿ, ಕೇಳಿ, ಆ ವ್ಯಕ್ತಿಗಳ ಪರಿಚಯದಿಂದ ಪೂತರಾದ ನಾವೂ ಧನ್ಯರೆ. ಇಂತಹ ಉತ್ಕೃಷ್ಟ ಕೃತಿಗಳ ನಿರ್ಮಾತೃಗಳು ಚಿರಂಜೀವಿಗಳು ತಾನೆ!

೮. ಪರಿಶಿಷ್ಟ

ಪಾರ್ವತೀ ಪರಿಣಯ ನಾಟಕ.

೧. ಪಾರ್ವತಿಯು ತಾರುಣ್ಯ ಲಾವಣ್ಯಮಯಿಯಾಗಿ ವಿಜೃಂಭಿಸುತ್ತಿರಲು ಅವಳಿಗೆ ಸದೃಶನಾದ ಪತಿ ಯಾರಾಗಬಹುದೆಂಬ ಚಿಂತೆಯಲ್ಲಿ ಕೊರಗುತ್ತಿದ್ದಾನೆ ಹಿಮವಂತ, ಅವಳ ತಂದೆ:—

ಕುಚಯುಗಲಂ ಪರಿಣದ್ಧಂ ಯಥಾಯಥಾ ವೃದ್ಧಿಮೇತಿ
ತನ್ವಂಗ್ಯಾಃ ।
ವರಚಿಂತಾಹೃತಮನಸಸ್ತಥಾ ತಥಾ ಕಾರ್ಶ್ಯಮೇತಿ ಮೇ
ಗಾತ್ರಮ್ ॥

—(ಅಂಕ: ೧—ಶ್ಲೋಕ ೫.)

[ಈ ಶ್ಲೋಕವನ್ನು ಓದಿದಾಗ ಹರ್ಷಚರಿತೆಯಲ್ಲಿ ಬರುವ ಪ್ರಭಾಕರವರ್ಧನನ ಇದೇ ಮಾತುಗಳು ಜ್ಞಾಪಕಕ್ಕೆ ಬರುತ್ತವೆ].

೨. ಮದನನು ತನ್ನ ಪರಾಕ್ರಮವನ್ನು ಕುರಿತು ಇಂದ್ರನ ಮುಂದೆ ಹೀಗೆ ಜಂಭಕೊಚ್ಚಿಕೊಳ್ಳುತ್ತಾನೆ:—

ದನುಜೋ ವಾ ಮನುಜೋ ವಾ ಮುನಿರಪಿ ವಾ ಮುಗ್ಧ
ಚಂದ್ರಚೂಡೋ ವಾ ।
ಸುರಲೋಕ ಸುಂದರೀಣಾಂ ಸ ಭವತು ಬದ್ಧಃ ಕಟಾಕ್ಷ
ಶೃಂಖಲಯಾ ॥

—(ಅಂಕ: ೨. ಶ್ಲೋಕ—೧೩)

೩. ಸ್ಥಾಣ್ವಾಶ್ರಮದಲ್ಲಿ ವಸಂತಋತುವಿನ ವಿಜೃಂಭಣೆಯನ್ನು ನಾರದನು ಹೀಗೆ ವರ್ಣಿಸುತ್ತಾನೆ:—

ಚೂತಾಃ ಕೋರಕಿತಾ ವಿಹಾಯ ಸುದೃಶಾಂ ಹಸ್ತಾಂಬು
ಜಾಮರ್ಶನಂ
ತತ್ಪಾದಾಂಬುಜತಾಡನೈರಪಿ ವಿನಾ ಕಂಕೇಲಯಃ ಪುಷ್ಪಿತಾಃ |
ತತ್ಸಂಗೀತಕಮಂತರೇಣ ಹಸಿತಾ ರಮ್ಯಾಃ ಪ್ರಿಯಾಲ
ದ್ರುಮಾಃ
ಮುಕ್ತ್ವಾ ತದ್ವದನಾಸವಂ ಮುಕುಲಿತಾ ಗಂಧೋತ್ತರಾಃ
ಕೇಸರಾಃ ||

—(ಅಂಕ. ೩—ಶ್ಲೋಕ. ೫)

೪. ತಪಸ್ವಿನೀ ಪಾರ್ವತಿ:—

ಶೇತೇ ಯಾ ಕಿಲ ಹಂಸತೂಲಶಯನೇ ನಿದ್ರಾತಿ ಸಾ ಸ್ಥಂಡಿಲೇ
ವಸ್ತೇ ಯಾ ಮೃದುಲಂ ದುಕೂಲಮಬಲಾ ಗೃಹ್ಣಾತಿ ಸಾ
ವಲ್ಕಲಮ್ |
ಯಾ ಸಾ ಚಂದನ ಪಂಕಲೇಪಶಿಶಿರೇ ಧಾರಾಗೃಹೇ ವರ್ತತೇ
ಪಂಚಾನಾಮುದಿತೋಷ್ಮಣಾಂ ಹುತಭುಜಾಂ ಸಾ ಮಧ್ಯ
ಮಾಸೇವತೇ ||

—(ಅಂಕ: ೪. ಶ್ಲೋಕ—೨)

೫. ಶಿವನ ವಟುವೇಷ:—

ಅಂಸೇ ಕೃಷ್ಣಾಜಿನ ಶ್ರೀ ಸ್ತ್ರಿಗುಣ ವಿರಚಿತಾ ಮೇಖಲಾ
ಶ್ರೋಣಿಭಾಗೇ
ಪಾಣಾವಾಷಾಢದಂಡೋ ಭಸಿತವಿರಚಿತಂ ಪುಂಡ್ರಕಂ
ಭಾಲದೇಶೇ |
ದರ್ಭೈಃ ಕ್ಲೃಪ್ತಂ ಪವಿತ್ರಂ ಶ್ರವಸಿ ಪರಿಣಮನ್ಮಾತುಲುಂಗೀ
ಪಿಶಂಗೀ
ಮೌಲೌ ಪಂಕ್ತಿರ್ಜಟಾನಾಂ ಜಪವಲಯಮಿದಂ ಸ್ಫಾಟಿಕಃ
ಚ ಪ್ರಕೋಷ್ಠೇ ||

—(ಅಂಕ: ೪. ಶ್ಲೋಕ: ೬)

೬. ಹರನನ್ನೇ ಅಳಿಯನನ್ನಾಗಿ ಪಡೆದ ಹಿಮವಂತ ತನ್ನ ಪುಣ್ಯವನ್ನು ವರ್ಣಿಸುತ್ತಾನೆ:—

ಅಚರ್ವಣಾನಾಮಪಿ ದೂರಮುಕ್ತ್ವಾ—
ಮುಕತ್ರ್ಯಕಾಣಾಂ ವಚಸಾಮಭೂಮಿಂ |
ಜಾಮಾತರಂ ಲಬ್ಧುಮಮುಂ ಗಿರೀಶಂ
ಕಿಯಂತಿ ಪುಣ್ಯಾನಿ ಮಯಾ ಕೃತಾನಿ ||

—(ಅಂಕ : ೫. ಶ್ಲೋಕ : ೨೫.)

(ಆ) ಚಂಡೀಶತಕ.

೧. ಕಂಸನು ತನ್ನನ್ನು ಬಂಡೆಯಮೇಲೆ ಒಗೆದು ಕೊಲ್ಲಲು ಯತ್ನಿಸಿದಾಗ ಮೇಲಕ್ಕೆ ಹಾರಿನಿಂತ 'ಯೋಗಮಾಯೆ' ಚಂಡಿಯವರ್ಣನೆ:—

ಆಹಂತುಂ ನೀಯಮಾನಾ ಭರವಿಧುರ ಭುಜಸ್ರಂಸ
ಮಾನೋಭಯಾಂಸಂ
ಕಂಸೇನೈನಾಂಸಿ ಸಾ ವೋ ಹರತು ಹರಿಯಶೋ ರಕ್ಷಣಾಯ
ಕ್ಷಮಾಪಿ |
ಪ್ರಾಕ್ಪ್ರಾಣಾನಸ್ಯ ನಾಸ್ಯದ್ಗಗನಮುದಪತದ್ಗೋಚರಂ
ಯಾ ಶಿಲಾಯಾಃ
ಸಂಪ್ರಾಪ್ಯಾಗಾಮಿ ವಿಂಧ್ಯಾಚಲ ಶಿಖರ ಶಿಲಾವಾಸ
ಯೋಗೋದ್ಯತೇವ ||

—(ಶ್ಲೋಕ : ೪೫.)

೨. ಈಶ್ವರನು ಮದನದಹನವನ್ನು ಕೈಗೊಂಡಾಗ ಪಾರ್ವತಿಯ ನಿರಾಶೆಗಾಗಿ ಚಂಡಿಯ ಕ್ಷಮಾಯಾಚನೆ:—

ಪ್ರಾಕ್ಕಾಮಂ ದಹತಾ ಕೃತಃ ಪರಿಭವೋ ಯೇನ ತ್ರಿಸಂಧ್ಯಾ
ನತ್ಯೈಃ ಸೇರ್ಷ್ಯಾ ವೋಽವತು ಚಂಡಿಕಾ ಚರಣಯೋಃ
ಸ್ವಂ ಪಾತಯಂತೀ ಪತಿಂ |
ಕುರ್ವತ್ಯಾಭ್ಯಧಿಕಂ ಕೃತೇ ಪ್ರತಿಕೃತಂ ಮುಕ್ತೇನ ಮೌಲೌ
ಮುಹು—
ರ್ಬಾಷ್ಪೇಣಾಹಿತಕಜ್ಜಲೇನ ಲಿಖಿತಂ ಸ್ವಂ ನಾಮ ಚಂದ್ರೇ
ಯಯಾ ||
—(ಶ್ಲೋಕ : ೪೯.)

೩. ಚಂಡಿಯ ತ್ರಿಶೂಲದಲ್ಲಿ ಹರಿಯುತ್ತಿದ್ದ ಮಹಿಷಾಸುರನ ರಕ್ತಧಾರೆ:—

ಮೃತ್ಯೋಸ್ತುಲ್ಯಂ ತ್ರಿಲೋಕೀಂ ಗ್ರಸಿತುಮತಿರ
ಸಾನ್ನಿಸೃತಾಃ ಕಿಂ ನು ಜಿಹ್ವಾಃ
ಕಿಂ ವಾ ಕೃಷ್ಣಾಂಘ್ರಿಪದ್ಮದ್ಯುತಿಭಿರರುಣಿತಾ ವಿಷ್ಣುಪದ್ಯಾಃ
ಪದವ್ಯಃ |
ಪ್ರಾಪ್ತಾಃ ಸಂಧ್ಯಾಃ ಸ್ಮರಾರೇಃ ಸ್ವಯಮುತ ನುತಿಭಿಸ್ತಿಸ್ರ
ಇತ್ಯೂಹ್ಯಮಾನಾ
ದೇವ್ಯೈ ರ್ದೇವೀ ತ್ರಿಶೂಲಾಹತ ಮಹಿಷಜುಷೋ ರಕ್ತಧಾರಾ
ಜಯಂತಿ ||
—(ಶ್ಲೋಕ : ೮)

೪. ಮಹಿಷಾಸುರನ ವಧೆಯ ಕಾಲದಲ್ಲಿನ ಚಂಡಿಯ ವ್ಯಾಯಾಮ ರಮ್ಯವಪು :

ಬಾಹೂ ತ್ಕ್ಷೇಪಸಮುಲ್ಲಸತ್ಕುಚತಟಂ ಪ್ರಾಂತ ಸ್ಫುಟ
ತ್ಕಂಚುಕಂ
ಗಂಭೀರೋದರನಾಭಿಮಂಡಲ ಗಲತ್ಕಾಂಚೀಧೃತಾರ್ಧಾಂ
ಶುಕಂ |

ಪಾರ್ವತ್ಯಾ ಮಹಿಷಾಸುರವ್ಯತಿಕರೇ ವ್ಯಾಯಾಮರಮ್ಯಂ
ವಪುಃ
ಪರ್ಯಸ್ತಾವಧಿ ಬಂಧ ಬಂಧುರಲಸತ್ಕೇಪೋಚ್ಚಯಂ
ಪಾತು ವಃ ॥
—(ಶ್ಲೋಕ : ೭೨)

(ಇ) ಕಾದಂಬರೀ

ಅ. ೧. ಋಷಿಕುಮಾರ ಪುಂಡರೀಕನ ವರ್ಣನೆ :—

ಶಿವನ ತೃತೀಯ ನಯನದ ವಹ್ನಿಶಿಖೆಯಲ್ಲಿ ತನ್ನ ಮಿತ್ರನು ಭಸ್ಮವಾಗುತ್ತಿರುವುದನ್ನು ಕಂಡು ವಸಂತನು ವೈರಾಗ್ಯವನ್ನು ಧರಿಸಿದನೋ, ಅಥವಾ ಶಿವನ ಶಿರಸ್ಥಿತ ಚಂದ್ರನು ತನ್ನ ಮಂಡಲವನ್ನು ಪೂರ್ಣಗೊಳಿಸಲು ತಪಾಚರಣೆ ಮಾಡಲನುವಾಗಿರುವನೋ, ಅಥವಾ ಮದನನೇ ಶಿವನನ್ನು ಪ್ರಸನ್ನಗೊಳಿಸಿ ತನ್ನ ಹಿಂದಿನ ಪಾಪ ಪ್ರಾಯಶ್ಚಿತ್ತಕ್ಕಾಗಿ ಈ ಉಗ್ರತಪಶ್ಚರ್ಯೆಯಲ್ಲಿ ತೊಡಗಿರುವನೋ, ಎಂಬಂತೆ ಇದ್ದನು. ಆ ತೇಜಃ ಪುಂಜದ ಪರಿಣಾಮವಾಗಿ, ಆತನನ್ನು ಕಂಡಾಗ, ಚಂಚಲ ವಿದ್ಯುತ್ಪುಂಜದೊಳಗೆ ವಿರಾಜನಾಗಿರುವನೋ, ಗ್ರೀಷ್ಮಕಾಲದ ಸೂರ್ಯಮಂಡಲದೊಳಗೆ ಪ್ರವಿಷ್ಟನಾಗಿರುವನೋ, ಇಲ್ಲವೆ, ಅಗ್ನಿಶಿಖೆಯೊಳಗೆ ಶೋಭಾಯಮಾನನಾಗಿರುವನೋ, ಎಂದೆನಿಸುತ್ತಿತ್ತು. ಪ್ರಕಾಶವಂತಿರುವ ಪಿಂಗಲವರ್ಣದ ಘನತರಲ ದೇಹ ಪ್ರಭೆಯಿಂದ ಅವನು ಇಡೀ ವನವನ್ನೇ ಪಿಂಗಲ ಕಾಂತಿಯಿಂವ ಉದ್ಭಾಸಗೊಳಿಸುತ್ತಿದ್ದನು. ದೀರ್ಘ ನಯನಗಳನ್ನು ನೋಡಿ ಕಾಡಿನ ಹರಿಣಗಳೆಲ್ಲವೂ ತಮ್ಮ ಚಕ್ಷು ಚಾರುತೆಯನ್ನು ಅವನಿಗೆ ದಾನ

ಮಾಡಿವೆಯೋ ಎಂದೆನಿಸುತ್ತಿತ್ತು. ಅವನ ಕೇಶವಿಹೀನ ಮುಂಡಿತ ಮಸ್ತಕದ ಅಧೋಭಾಗದಲ್ಲಿ ವೈರಾಗ್ಯದ ವಿಜಯ ಕೇತನದಂತೆ ಮೂರು ಅಡ್ಡಗೆರೆಗಳು ತರಳದೇಹಕಾಂತಿ ಯೊಳಗಿನ ಅಲೆಯಂತೆ ಕಾಣುತ್ತಿದ್ದವು. ಅವನು ಧರಿಸಿದ್ದ ಕೆಂಪುಕಾಶೇಯ ವಸ್ತ್ರದ ವಿಚಿತ್ರ ಚೀವರವನ್ನು ನೋಡಿದರೆ ನವಯೌವನದ ರಾಗವು ಹೃದಯದಲ್ಲಿ ಪ್ರವೇಶಿಸಲಾರದೆ ಹೊರ ಹೊಮ್ಮಿದೆಯೋ ಎಂಬಂತಿತ್ತು. ಅವನ ಓಷ್ಠಗಳ ಮೇಲಿನ ತುಸು ಕಪ್ಪು ಮಸಿರೇಖೆ ಮುಖಕಮಲದ ಮಧು ಲೋಭದಿಂದ ಆಸೀನವಾಗಿರುವ ಮಧುಲಿಹಶ್ರೇಣಿಯಂತೆ ಮನಮೋಹಕವಾಗಿತ್ತು. ಅವನ ಕೈಯಲ್ಲಿದ್ದ ಕೆಂಪು ಜಪ ಮಾಲೆ ಕಾಮದಹನ ಶೋಕದಿಂದ ವ್ಯಾಕುಲಿತಳಾದ ರತಿಯ ಸಿಂಧೂರದಿಂದ ಉಪಲಿಪ್ತವಾದಂತಿತ್ತು. ನಾನು ಮಂತ್ರ ಮುಗ್ಧಳಾಗಿ, ಬ್ರಹ್ಮಚರ್ಯದ ಈ ವೈಜಯಂತಿ ಯಾರು? ಧರ್ಮದ ಈ ಯೌವನಕಾಲ ಯಾರು? ವಾಗ್ದೇವಿಯ ಈ ವೇಷ ವಿನ್ಯಾಸ ಯಾರು? ಸರ್ವವಿದ್ಯೆಗಳ ಸ್ವಯಂಕೃತಪತಿ ಇವನಾರು? ಸಮಸ್ತ ಜ್ಞಾನನದಿಗಳ ಮಿಲಿನ ತೀರ್ಥ ಇವ ನಾರು? ಗುಣಗಳ ಈ ಆಕರ ಭೂಮಿ ಯಾರು? ಯಾರಿವನು, ಕೀರ್ತಿ ಕೈಲಾಸ ಝರಿಯ ನದಿ, ಪ್ರೇಮದ ಉದ್ಗಮ ವಿಹಾರ? ಇತ್ಯಾದಿ ಇತ್ಯಾದಿ: ಅವನನ್ನು ನೋಡಿ ನಾನು ಏನನ್ನೋ ಕೇಳುತ್ತಿರುವಂತೆ, ಎಲ್ಲವನ್ನೂ ತ್ಯಾಗಮಾಡಿದವಳಂತೆ, ಸರ್ವಾತ್ಮನಾ ಅವನ ಸೌಂದರ್ಯ ಪುಂಜದಲ್ಲಿ ವಿಲೀನಳಾದವ ಳಂತೆ, ಶರಣಾದಂತೆ, ಸ್ತಂಭಿತಳಂತೆ, ಚಿತ್ರಲಿಖಿತಳಂತೆ, ಉತ್ತೀರ್ಣಳಂತೆ, ಸಂಯತಳಂತೆ, ಮೂರ್ಛಿತಳಂತೆ, ವಿಧೃತ ಳಂತೆ ನಿಶ್ಚೇಷ್ಟಳಾದೆನು.

ಆ. ೨. ಮಹಾಶ್ವೇತೆಯ ವರ್ಣನೆಯ ಸಾರಾಂಶ:—

ಅವಳ ದೇಹದಿಂದ ನಿರ್ಮಲ ಕಾಂತಿ ಪ್ರವಹಿಸುತ್ತಿತ್ತು. ಅತ್ಯಂತ ಧವಲಪ್ರಭಾ ಪುಂಜದಿಂದ ಅವಳ ದೇಹ ಒಂದ ವಿಧದಲ್ಲಿ ಮುಚ್ಚಿತ್ತೆಂದೇ ಭಾಸವಾಗುತ್ತಿತ್ತು:—ಆಕೆ ಸ್ಫಟಿಕ ಗೃಹದಲ್ಲಿ ಆಬದ್ಧಳಾಗಿರುವಳೋ, ಇಲ್ಲ, ಶುಭ್ರ ಚೀನಾಂಶುಕ ದಿಂದ ಮುಚ್ಚಲ್ಪಟ್ಟಿರುವಳೋ ಅಥವ ಕನ್ನಡಿಯಲ್ಲಿ ಪ್ರತಿ ಬಿಂಬಿತಳಾಗಿರುವಳೋ; ಇಲ್ಲ, ಶರತ್ಕಾಲದ ಮೇಘಾವೃತ ಚಂದ್ರಕಲೆಯೋ ಎಂಬಂತಿದ್ದಳು. ಆಕೆಯ ಧವಳಕಾಂತಿ ಪ್ರೇಕ್ಷಕರ ಚಕ್ಷುಸ್ಸಿನ ಮಾರ್ಗದಿಂದ ಅಂತಃಕರಣವನ್ನು ಪ್ರವೇಶಿಸಿ ಸಮಸ್ತ ಕಲುಷವನ್ನು ಧವಲಿತಗೊಳಿಸುತ್ತಿತ್ತು.— ದೇವಗಂಗೆಯ ಧಾರೆ ಕಲುಷದ ಕಪ್ಪನ್ನು ತೊಡೆದುಹಾಕುವಂತೆ.

ನಿಜಕ್ಕೂ ಇವಳು ಧರ್ಮದ ಹೃದಯದಿಂದ ಜನಿಸಿರಬೇಕು. ಬ್ರಹ್ಮನು ಶಂಖದಿಂದ ಕಡೆದು, ಮುತ್ತಿನಿಂದ ನಾದು, ಮೃಣಾಲ ದಿಂದ ತಿದ್ದಿ, ಚಂದ್ರರಶ್ಮಿಯ ಕೂರ್ಚಕದಿಂದ ಸುಧಾ ಚೂರ್ಣ ದಿಂದ ತೊಳೆದು, ರಜತ ರಸದಿಂದ ಒರಸಿ, ಕುಟಜ ಕುಲದ ಸಿಂಧುವಾರ ಪುಷ್ಪಗಳ ಧವಳ ಕಾಂತಿಯಿಂದ ಶೃಂಗರಿಸಿ ಅವ ಳನ್ನು ಸೃಷ್ಟಿಸಿದಂತಿತ್ತು.

ಆ ಪವಿತ್ರತೆ ಎಂತಹುದು? ಮುನಿಗಳ ತಪೋಸಂಪತ್ತೇ ಪುಂಜೀಭೂತವಾಗಿದೆಯೋ ಅಥವಾ ರಾವಣಾಸುರನ ಸ್ಪರ್ಶ ಭಯದಿಂದ ಕೈಲಾಸ ಪರ್ವತದ ಕಾಂತಿಯೇ ಸ್ತ್ರೀವಿಗ್ರಹ ರೂಪ ತಾಳಿ ನಿಂತಿದೆಯೋ ಅಥವಾ ಬಲರಾಮನ ದೀಪ್ತಿ ಅವನ ಉನ್ಮಾದಾವಸ್ಥೆಯನ್ನು ತ್ಯಜಿಸಿ ಧಾವಿಸಿ ಬಂದಿದೆಯೋ ಅಥವಾ ಮಂದಾಕಿನೀ ಧಾರೆಯೇ ಈ ರೂಪದಲ್ಲಿ ಪವಿತ್ರವಾಗಿದೆಯೋ ಎಂಬಂತೆ ವಿರಾಜಿಸುತ್ತಿತ್ತು. ಇತ್ಯಾದಿ—

(ಇ) ಸೂರ್ಯಾಸ್ತಮಯ :—

ಆಗ ಭಗವಾನ್ ಮರೀಚಿಮಾಲಿನಿಯು ಅಸ್ತಂಗತನಾನು. ಅಪರಾಂಬುಧಿಯ ತೀರದಿಂದ ಪ್ರವಾಳ ಲತೆಯಂತೆ ಧ್ಯಾರಾಗ ಉದಯವಾಗುತ್ತಿತ್ತು. ವಿರಾಟ್ ಸೂರ್ಯಡಲ ಪಶ್ಚಿಮ ಸಮುದ್ರಕ್ಕೆ ಬಿದ್ದಾಗ ಹಾರಿದ ಹನಿಗಳೇ ತ್ರರೂಪವಾಗಿ ಆಕಾಶಕ್ಕೆ ಅಂಟಿಕೊಂಡಂತ್ತಿದ್ದವು. ಶಃ ಅದೇ ಸಮುದ್ರದಿಂದ ಉಕ್ಕಿದ್ದ ಜಲಧಾರೆಯು ನಂತರ ಸಮೀಪದ ಪಶ್ಚಿಮತಟದ ಪ್ರಭೆಯನ್ನು ತೊಳೆದು ಬಿಟ್ಟಿದ್ದಿತು.

(ಈ) ಬಾಣಭಟ್ಟನನ್ನು ಕುರಿತ ಕೆಲವು ಸ್ತುತಿಗಳು:

ಸುಬಂಧುರ್ಬಾಣಭಟ್ಟಶ್ಚ ಕವಿರಾಜ ಇತಿ ತ್ರಯಃ |
ವಕ್ರೋಕ್ತಿಮಾರ್ಗ ನಿಪುಣಾಶ್ಚತುರ್ಥೋ ವಿದ್ಯತೇ ನ ವಾ ||
—(ಕವಿರಾಜ : ರಾಘವ ಪಾಂಡವೀಯ)

ಹೃದಯವಸತಿಃ ಪಂಚಬಾಣಸ್ತು ಬಾಣಃ |
—(ಜಯದೇವ : ಗೀತ ಗೋವಿಂದ)

ರುಚಿರಸ್ವರವರ್ಣಪದಾ ರಸಭಾವವತೀ ಜಗನ್ಮನೋ ಹರತಿ |
ತತ್ಕಿಂ ತರುಣೀ ನ ಹಿ ನ ಹಿ ವಾಣೀ ಬಾಣಸ್ಯ ಮಧುರ ಶೀಲಸ್ಯ ||
(ಧರ್ಮದಾಸ : ವಿದಗ್ಧಮುಖಮಂಡನ)

೪. ಶ್ಲೇಷೇ ಕೇಚನ ಶಬ್ದ ಗುಂಫವಿಷಯೇ ಕೇಚಿದ್ರಸೇಚಾಪರೇಽ–
ಲಂಕಾರೇ ಕತಿಚಿತ್ಸದರ್ಥವಿಷಯೇ ಚಾನ್ಯೇ ಕಥಾವರ್ಣನೇ |
ಆ ಸರ್ವತ್ರ ಗಭೀರಧೀರ ಕವಿತಾ ವಿಂಧ್ಯಾಟವೀ ಚಾತುರೀ–
ಸಂಚಾರೀ ಕವಿಕುಂಭಿಕುಂಭಭಿದುರೋ ಬಾಣಸ್ತು ಪಂಚಾನನಃ||
—(ಶ್ರೀಚಂದ್ರಸೇನ)

೫. ಕೇವಲೋಽಪಿ ಸ್ಫುರನ್ಬಾಣಃ ಕರೋತಿ ವಿಮದಾನ್ಕವೀನ್ ।
ಕಿಂ ಪುನಃ ಕ್ಲೃಪ್ತಸಂಧಾನ ಪುಲಿಂದ (ಧ್ರ) ಕೃತ ಸನ್ನಿಧಿಃ ॥
—(ಧನಪಾಲ: ತಿಲಕ ಮಂ

೬. ಬಾಣಂ ವಲ್ಲಭುನಕ್ಕುಮೆಂದು ಪಡೆದಾ ವಾಗ್ದೇವಿಗಬ್ಜೋದ್ಭವ
ಜಾಣಿಂ ಬಾಣಿಯುನಿಪ್ಪದೊಂದು ಪೆಸರಂ ಮುನ್ನಿತ್ತನೆಂದಂದು ಪೆ
ಮಾಣಿನ್ನನ್ಯಕವಿಸ್ತುತಿ ವ್ಯಸನಮುಂ ವಾಗ್ಜಾತ ಚಾತುರ್ಯ ಗಿ
ರ್ವಾಣಂ ತಾನೆನೆ ಸಂದ ಬಾಣನೆವಲಂ ವಂದ್ಯಂ ಪೆಱರ್
ವಂದ್ಯರೇ ॥
—(ನಾಗವರ್ಮ : ಕರ್ಣಾಟಕ ಕಾದಂಬರೀ)

೭. ಅರ್ಥೇಶ್ವರಂ ಹಂತ ಭಜೇಽಭಿ ನಂದಂ
ವಾಗೀಶ್ವರಂ ವಾಕ್ಪತಿರಾಜಮೀಡೇ ।
ರಸೇಶ್ವರಂ ಸ್ತೌಮಿ ಚ ಕಾಲಿದಾಸಂ
ಬಾಣಂ ತು ಸರ್ವೇಶ್ವರಮಾನತೋಽಸ್ಮಿ ॥

" ಬಾಣೋಚ್ಛಿಷ್ಟಂ ಜಗತ್ಸರ್ವಮ್ "

—o—

WO 257—MUPM—3000 Copies—17-11-1959

ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್
ಭಾಸ—ಡಾ॥ ಎಚ್. ಎಲ್. ಹರಿಯಪ್ಪ
ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ
ಸರ್ವಜ್ಞ ಕವಿ—ಎ. ಆರ್. ಕೃಷ್ಣಶಾಸ್ತ್ರೀ
ರಕ್ತ—ಡಿ. ಶಾಮಣ್ಣ
ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
ಗಣಿತಶಾಸ್ತ್ರದ ಸ್ವರೂಪ
—ಡಾ॥ ಸಿ. ಎನ್. ಶ್ರೀನಿವಾಸ ಅಯ್ಯಂಗಾರ್
೩೪. ಋಗ್ವೇದ—ಎಂ. ಎ. ಕೃಷ್ಣಸ್ವಾಮಿ
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳೆಸಿದ ರಾಜರು
—ವಿ. ರಾಘವೇಂದ್ರರಾವ್
ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ
ಮಕ್ಕಳ ಭಾವಜೀವನ—ಡಾ॥ ಬಿ. ಕುಪ್ಪುಸ್ವಾಮಿನಾಯಿಡು
ಸಹಕಾರ—ಎಸ್. ಗೋಪಾಲಸ್ವಾಮಿ
ನಯಸೇನ—ಜಿ. ವೆಂಕಟಸುಬ್ಬಯ್ಯ
ಕೌಟಿಲ್ಯ—ಡಾ॥ ಎಂ. ವಿ. ಕೃಷ್ಣರಾವ್
ಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
ುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್
—ಎನ್. ಅನಂತರಂಗಾಚಾರ್
ಎಸ್. ವಿ. ರಂಗಣ್ಣ
—ಡಿ. ಎಸ್. ವೀರಯ್ಯ
—ಕೆ. ಶೇಷಾದ್ರಿ ಅಯ್ಯಂಗಾರ್
ಣ—ಟಿ. ಎಸ್. ಶಾಮರಾವ್
ುವರು ಭೌತ ವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್
ಕೃತಕರೇಷ್ಮೆ—ಎಂ. ಷಡಕ್ಷರಸ್ವಾಮಿ
ೀನರ ಇತಿಹಾಸ ಮತ್ತು ನಾಗರಿಕತೆ
—ಎಸ್. ವೆಂಕಟದೇಶಿಕಾಚಾರ್

[illegible]

೫೩. ಯುದ್ಧಕಾಲದ ಆರ್ಥಿಕ ಸಮಸ್ಯೆಗಳು

—ಎಸ್. ಲಕ್ಷ್ಮೀನರಸಿಂಹನ್

೫೪. ಆಹಾರ—ಜಿ. ಆರ್. ಲಕ್ಷ್ಮಣರಾವ್

೫೫. ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜುನಾಥ್

೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ

೫೭. ಪ್ರಜಾಭಿಪ್ರಾಯ—ಟಿ.ಎಸ್. ರಾಜಗೋಪಾಲ ಅಯ್ಯಂಗಾರ್

೫೮. ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್

೫೯. ಜನಪದಮುಕ್ತಕಗಳು—ಎಚ್.ಎಂ. ಶಂಕರನಾರಾಯಣರಾವ್

೬೦. ಹಾಲು—ಕೆ. ಎಸ್. ಲಕ್ಷ್ಮಣರಾವ್

೬೧. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ

೬೨. ಭಾರತದಲ್ಲಿ ಪ್ರಜಾಪ್ರಭುತ್ವ

—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್

೬೩. ಆರೋಗ್ಯಸಾಧನೆ—ಮೊಟಗಾನಹಳ್ಳಿ ಮಹದೇವಶಾಸ್ತ್ರೀ

೬೪–೬೫ ಆಧುನಿಕ ಭಾರತದಲ್ಲಿ ನೃತ್ಯಕಲೆ—ಯು. ಎಸ್. ಕೃಷ್ಣರಾವ್

ಮತ್ತು ಚಂದ್ರಭಾಗಾದೇವಿ

ಸಾದಾ ಪ್ರತಿ ೫೦ ನ. ಪೈಸೆ; ಉತ್ತಮ ಪ್ರತಿ ೭೫ ನ. ಪೈಸೆ

೬೬. ಚುನಾವಣೆಗಳು—ಗ. ಸ. ಹಾಲಪ್ಪ

೬೭. ಮೀನಿನಿಂದ ಮಾನವನೆಡೆಗೆ—ಎಚ್. ಬಿ. ದೇವರಾಜಸರ್ಕಾರ್

೬೮. ಕ್ಷಯ—ಡಾ॥ ಎಸ್. ಟಿ. ಪುಟ್ಟಣ್ಣ

೬೯. ಶಿಲ್ಪಿಯ ಪಾತ್ರ—ಬಿ. ಎಲ್. ಸಿ. ರಾಜನ್

೭೦. ಪರತಂತ್ರ ಜೀವಿಗಳು ಮತ್ತು ಪರತಂತ್ರ ಜೀವನ

—ಎಚ್. ಬಿ. ದೇವರಾಜ ಸರ್ಕಾರ್

೭೧. ಮಾನವ ಹಕ್ಕುಗಳು—ಹೆಚ್. ಎಂ. ಸದಾಶಿವಯ್ಯ

೭೨. ವಿನೋದ ಗಣಿತ—ವಿ. ಕೆ. ದೊರೆಸ್ವಾಮಿ

೭೩. ಸಾಬೂನು—ಕೆ. ಎಸ್. ಲಕ್ಷ್ಮಣರಾವ್

೭೪. ಉಷ್ಣಯಂತ್ರಗಳ ಪರಿಚಯ—ಕೆ. ವಿ. ಸುಬ್ಬರಾಯ

೭೫. ಬಟ್ಟೆಗಳ ವೈಜ್ಞಾನಿಕ ಪರೀಕ್ಷೆ—ಶ್ರೀ ನಾಗಭೂಷಣ

ಸಾದಾ ಪ್ರತಿ ೨೫ ನ. ಪೈಸೆ; ಉತ್ತಮ ಪ್ರತಿ ೩೭ ನ. ಪೈಸೆ

---

* ಈ ಪುಸ್ತಕ ಅಚ್ಚಿನಲ್ಲಿದೆ